
ಪುಸ್ತಕ ಪ್ರಪಂಚ

ಮೇ-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೬ ಸಂಚಿಕೆ ೮

ಮೇ-೧೯೯೬

ಮುಖ ಚಿತ್ರ :
ಚೆನ್ನವೀರಕಣವಿ
(ಕೃಪೆ: ಅರ್ಕೇಶ್)

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ : ರೂ. 6

ವಾರ್ಷಿಕ ಚಂದಾ : ರೂ. 60

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 400

ಸಂಸ್ಥೆಗೆ : ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–570 006

೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು ; ಚೆನ್ನವೀರಕಣವಿ

ಎಸ್. ಚನ್ನಪ್ಪ

ಕಲೆಗಳ ಬೀಡಾದ ಹಾಸನದಲ್ಲಿ ಮುಂದೆ ನೆರೆಯಲಿರುವ ಅಖಿಲ ಭಾರತ ೬೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆ ಆಗಿರುವ ಚೆನ್ನವೀರ ಕಣವಿ ಅವರು ಕನ್ನಡದ ಹೆಸರಾಂತ ಕವಿ ಗಳು ; 'ಸಮನ್ವಯ ಕವಿ' ಗಳೆಂದೇ ಪ್ರಸಿದ್ಧರು.

ಧಾರವಾಡ ಜಿಲ್ಲೆಯ ಹೊಂಬಳ ಎಂಬ ಗ್ರಾಮದಲ್ಲಿ ಸಾಮಾನ್ಯ ಕುಟುಂಬವೊಂದ ರಲ್ಲಿ ಜನಿಸಿದ (೨೮–೬–೧೯೨೮) ಕಣವಿ ಯವರು, ಧಾರವಾಡದಲ್ಲಿ ಓದಿ ಬಿ. ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆ ದರು (೧೯೫೦). ಅನಂತರ ಕರ್ನಾಟಕ ವಿಶ್ವ ವಿದ್ಯಾನಿಲಯದಿಂದ ೧೯೫೨ರಲ್ಲಿ ಎಂ. ಎ. ಪದವಿ ಪಡೆದ ಕಣವಿಯವರು, ಅದೇ ವರ್ಷ ವಿವಾಹವಾದರು. ಅವರ ಪತ್ನಿ ಶಾಂತಾದೇವಿ ಕನ್ನಡದ ಪ್ರಸಿದ್ಧ ಕತೆಗಾರ್ತಿ.

ಕರ್ನಾಟಕ ವಿಶ್ವವಿದ್ಯಾನಿಯಲದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟಣ ವಿಭಾಗದ ಕಾರ್ಯದರ್ಶಿಯಾಗಿ (೧೯೫೨) ತಮ್ಮ ವೃತ್ತಿಜೀವನವನ್ನು ಆರಂಭಿಸಿದ ಕಣವಿಯವರು, ಹೊಸದಾಗಿ ರೂಪು ಗೊಂಡಿದ್ದ ಆ ಇಲಾಖೆಯನ್ನು ಸಮರ್ಥ ವಾಗಿ ಕಟ್ಟಿಬೆಳೆಸಿದರು. ಅನಂತರ ಪ್ರಸಾ-ರಾಂಗದ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದರು.

ಎಳವೆಯಲ್ಲಿಯೇ ಪ್ರಕೃತಿ ಮತ್ತು ಸಾಹಿತ್ಯಕ್ಕೆ ಒಲಿದ ಕಣವಿಯವರು, ಮುಂದೆ ಮಾಳವಾಡ ದಂಪತಿಗಳ, ಬೇಂದ್ರೆ-ಗೋಕಾಕರ ಸಾನಿಧ್ಯ ಮತ್ತು ಪ್ರೋತ್ಸಾಹ ಗಳಿಂದ ತಮ್ಮ ವ್ಯಕ್ತಿ ಜೀವನವನ್ನು ಮತ್ತು ಸಾಹಿತ್ಯಿಕ ಜೀವನವನ್ನು ಕುದುರಿಸಿ ಕೊಂಡರು. ಕವಿ ಕುವೆಂಪುರವರ ಮತ್ತು ಮಧುರಚೆನ್ನರ ಪ್ರಭಾವಕ್ಕೂ ಒಳಗಾಗಿ ಬೆಳೆದರು. ಬದುಕಿನಲ್ಲೂ, ಬರೆಹದಲ್ಲೂ ಕಣವಿಯವರು 'ಸಮನ್ವಯ'ವನ್ನು ಸಾಧಿಸಿ ಕೊಂಡಿದ್ದಾರೆ.

ಚಿಕ್ಕಂದಿನಲ್ಲಿಯೇ 'ಓದುವ ಚಟ'ವನ್ನು ಆರಿಸಿಕೊಂಡ ಕಣವಿಯವರು, ಇಂಗ್ಲಿಷ್ ಸಾಹಿತ್ಯದ ಪ್ರಸಿದ್ಧ ಕವಿಗಳ ಕೃತಿಗಳನ್ನು ಮತ್ತು ಕನ್ನಡದ ಹಿರಿಯ ಲೇಖಕರ ಕೃತಿ ಗಳನ್ನು ಓದಿ ತಮ್ಮ ಜ್ಞಾನಕ್ಷೇತ್ರವನ್ನು ವಿಸ್ತರಿಸಿಕೊಂಡರು. ವಿದ್ಯಾರ್ಥಿದೆಸೆ ಯಲ್ಲಿಯೇ ಬರೆವಣಿಗೆಯನ್ನು ಆರಂಭಿಸಿದ

ಕಣವಿಯವರು, ಪ್ರಧಾನವಾಗಿ ಬರೆದದ್ದು ಕವನಗಳನ್ನು. ಅವರು ಪ್ರಕಟಿಸಿದ ಪ್ರಥಮ ಕವನ ಸಂಕಲನ 'ಕಾವ್ಯಾಕ್ಷಿ' (೧೯೪೯). ಅನಂತರ ಪ್ರಕಟವಾದ ಅವರ ಕಾವ್ಯ ಸಂಕಲನಗಳು ಇವು: 'ಭಾವಜೀವಿ' (೧೯೫೦); 'ಆಕಾಶ ಬುಟ್ಟಿ' (೧೯೫೩); 'ಮಧುಚಂದ್ರ' (೧೯೫೪); 'ದೀಪಧಾರಿ' (೧೯೫೬); 'ಮಣ್ಣಿನ ಮೆರವಣಿಗೆ' (೧೯೬೦); 'ನೆಲ-ಮುಗಿಲು' (೧೯೬೫); 'ಎರಡು ದಡ' (೧೯೬೯); 'ನಗರದಲ್ಲಿ ನೆರಳು' (೧೯೭೪) ಮತ್ತು 'ಜೀವಧ್ವನಿ' (೧೯೮೦); 'ಚಿರಂತನ ದಾಹ' (೧೯೭೫) ಕಣವಿಯವರ ಆಯ್ದ ಕವನಗಳ ಸಂಗ್ರಹ. 'ಹೊಂಬೆಳಕು' ಇವರ ಸಮಗ್ರ ಕಾವ್ಯ ಸಂಪುಟ. ಪ್ರಕೃತಿ, ಪ್ರೇಮ, ಸ್ನೇಹ, ಸಮಕಾಲೀನ ಸಾಮಾಜಿಕ ಸಮಸ್ಯೆಗಳು; ಒಳ್ಳೆಯದಕ್ಕಾಗಿ ಹಂಬಲ; ಗುಣ ಗೌರವ ಬುದ್ಧಿ—ಮುಂತಾದುವು ಕಣವಿಯವರ ಕಾವ್ಯದ ಮುಖ್ಯ ವಸ್ತುಗಳು. ಜೊತೆಗೆ ಧಾರವಾಡದ ಬದುಕು ಇವರ ಕಾವ್ಯ ಜೀವನದಲ್ಲಿ ಹಾಸುಹೊಕ್ಕಾಗಿದೆ. ಸೂಕ್ಷ್ಮಾಂತಃಕರಣ ಪ್ರಜ್ಞೆ, ಲೋಕೋತ್ತರ ಸ್ಫುರಿತ ಮತ್ತು ಶೀಲ-ಸೌಜನ್ಯಗಳು ಕಣವಿಯವರ ಕಾವ್ಯದ ಹೃದಯ ಗುಣಗಳು. "ಕಣವಿಯವರ ಕಾವ್ಯಜೀವನ ಮೂಲತಃ ಪರಿಸರ ಸಂವೇದಿಯಾದದ್ದು. ಬದುಕಿನ ಯಾವುದೇ ಒಂದು ಸಿದ್ಧಾಂತಕ್ಕೂ ಗಂಟು ಹಾಕಿಕೊಂಡು ಸ್ಥಗಿತವಾಗದೆ, ತನ್ನ ಅಭಿರುಚಿಗೆ ಮತ್ತು ಕಾವ್ಯಪ್ರಜ್ಞೆಗೆ ಒಳಗಾದುದೆಲ್ಲಕ್ಕೂ ನಂಟು ಹಾಕಿಕೊಳ್ಳುತ್ತ, ಚಲನಶೀಲವಾಗಿ ತನ್ನ ಜೀವಂತಗತಿಯನ್ನು ಪ್ರಕಟಿಸಿಕೊಂಡಿದೆ" ಎಂಬುದಾಗಿ ಡಾ॥ ಜಿ. ಎಸ್. ಶಿವರುದ್ರಪ್ಪನವರು ಕಣವಿಯವರ ಕಾವ್ಯದ 'ಜೀವಂತಿಕೆ'ಯನ್ನು ಸಮರ್ಥವಾಗಿ ಗುರುತಿಸಿದ್ದಾರೆ. "ನೆಲದಲ್ಲಿದ್ದುಕೊಂಡು ಸಂತೋಷಪಡುವ, ಕೊಡುವ, ಕಾಣಿಸುವ ಶಕ್ತಿ" ಕಣವಿಯವರ ಕಾವ್ಯಕ್ಕಿರುವುದನ್ನು ವಿಸೀ ಅವರು ಗುರುತಿಸಿ ಮೆಚ್ಚಿದ್ದಾರೆ. ಕಣವಿಯವರ ಕಾವ್ಯದಲ್ಲಿ 'ಸದ್ಭಾವದ ಶ್ರದ್ಧೆ' ಗಟ್ಟಿ ಕಾಳಾಗಿರುವುದನ್ನು ಬೇಂದ್ರೆಯವರು ಮನದುಂಬಿ ಹೇಳಿದ್ದಾರೆ.

'ಸುನೀತ' (ಸಾನೆಟ್)ಗಳಲ್ಲಿ 'ವ್ಯಕ್ತಿ ಚಿತ್ರಗಳ ರಚನೆ' ಕಣವಿಯವರ ಮತ್ತೊಂದು ಮಹತ್ವದ ಸಾಧನೆ. ಸಾಹಿತ್ಯ ಕ್ಷೇತ್ರದ ಹಿರಿಯರಾದ ತೀನಂಶ್ರೀ; ಬೇಂದ್ರೆ; ಗೋಕಾಕ್, ಮುಗಳಿ ಮುಂತಾದವರನ್ನು ಕುರಿತು ಕಣವಿಯವರು ರಚಿಸಿರುವ 'ವ್ಯಕ್ತಿ ಚಿತ್ರ'ಗಳಲ್ಲಿ ಆಯಾ ವ್ಯಕ್ತಿಗಳ 'ವ್ಯಕ್ತಿತ್ವ' ಸ್ಫುಟವಾಗಿ ಮೂಡಿದೆ.

ಕಣವಿಯವರು ಪ್ರಧಾನವಾಗಿ ಕವಿಗಳಾಗಿದ್ದರೂ, ಅವರು ಬರೆದಿರುವ ಗದ್ಯ ಕೃತಿಗಳೂ ಗಣ್ಯವಾಗಿವೆ. 'ಗದ್ಯದಲ್ಲಿ ನನ್ನದು ಆಮೆಯುಗತಿ; ಬರೆದದ್ದು ತೀರ ಕಡಿಮೆ' ಎಂಬುದಾಗಿ ಅವರೇ ಹೇಳಿಕೊಂಡಿದ್ದಾರೆ. ಕಾವ್ಯದಲ್ಲಿ ಹೇಗೋ ಹಾಗೆಯೇ ಗದ್ಯದಲ್ಲೂ ಕಣವಿಯವರದು 'ಸಂಯಮ ದೃಷ್ಟಿ'. 'ಸಾಹಿತ್ಯ ಚಿಂತನ' (೧೯೬೬); 'ಕಾವ್ಯಾನುಸಂಧಾನ' (೧೯೭೧) ಮತ್ತು 'ಸಮಾಹಿತ' (೧೯೭೭)—ಇವು ಕಣವಿಯವರು ಪ್ರಕಟಿಸಿರುವ ಮೂರು ಗದ್ಯ ಕೃತಿಗಳು. ಬಸವಣ್ಣ, ಪುರಂದರದಾಸ, ಸರ್ವಜ್ಞ ಮುಂತಾದ ಪ್ರಾಚೀನ ಕವಿಗಳನ್ನು ಕುರಿತು; ಅನಕೃ, ಕಟ್ಟೀಮನಿ ಮುಂತಾದ ಆಧುನಿಕ ಲೇಖಕರನ್ನು ಕುರಿತು;

ಜನಪದ ಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯವನ್ನು ಕುರಿತ ಪರಿಚಯ, ವಿಶ್ಲೇಷಣೆ ಮತ್ತು ವಿಮರ್ಶಾ ಲೇಖನಗಳು ಈ ಸಂಕಲನಗಳಲ್ಲಿ ಸೇರಿವೆ. ಈ ಎಲ್ಲ ಲೇಖನಗಳಲ್ಲೂ ಕಣವಿಯವರ ಗುಣಗ್ರಹಣ ಮನೋಭಾವವನ್ನು ಗುರುತಿಸಬಹುದು. ಕಣವಿಯವರ ಗದ್ಯದಲ್ಲಿ ಪ್ರಖರತೆಗಿಂತ ಪ್ರಶಾಂತಿಯ ಕಡೆಗೇ ಹೆಚ್ಚು ಒತ್ತು. ಆದ್ದರಿಂದಲೇ ಆರ್ದ್ರತೆ, ಆಕರ್ಷಣೆ ಅವರ ಗದ್ಯ ಶೈಲಿಯ ಮುಖ್ಯ ಗುಣಗಳಾಗಿವೆ.

ಕವಿ ವಿನಾಯಕರೊಂದಿಗೆ "ನವ್ಯಧ್ವನಿ" ಎಂಬ ಕಾವ್ಯಸಂಗ್ರಹವನ್ನು ೧೯೫೩ ರಲ್ಲಿ ಕಣವಿಯವರು ಸಂಪಾದಿಸಿದರು. ಅವರು ಸಂಪಾದಿಸಿರುವ ಇತರ ಕೃತಿಗಳು ಇವು: 'ನವಿಲೂರ ಮನೆಯಿಂದ' (೧೯೫೨); 'ನೈವೇದ್ಯ' (೧೯೬೦); 'ನಮ್ಮೆಲ್ಲರ ನೆಹರು' (೧೯೬೪); 'ಸಿದ್ಧವಿನಾಯಕನ ಮೋದಕ' (೧೯೭೦); 'ಜೀವನಸಿದ್ಧಿ' (೧೯೭೧) ಮತ್ತು 'ಆಧುನಿಕ ಕನ್ನಡ ಕಾವ್ಯ' (೧೯೭೬).

ಚೆನ್ನವೀರ ಕಣವಿಯವರ ಸಾಹಿತ್ಯ ಸೇವೆಗೆ ಮನ್ನಣೆ ಎಂಬಂತೆ, ಅವರಿಗೆ ವಿವಿಧ ಗೌರವ-ಪ್ರಶಸ್ತಿಗಳು ಲಭಿಸಿವೆ. ಇವರ 'ಆಕಾಶಬುಟ್ಟಿ' ಕವನ ಸಂಕಲನಕ್ಕೆ ಮುಂಬಯಿ ರಾಜ್ಯ ಸರ್ಕಾರದ ಬಹುಮಾನವೂ ಮತ್ತು 'ದೀಪಧಾರಿ' ಹಾಗೂ 'ನೆಲ-ಮುಗಿಲು' ಕಾವ್ಯ ಸಂಕಲನಗಳಿಗೆ ಕರ್ನಾಟಕ ರಾಜ್ಯ ಸರ್ಕಾರದ ಬಹುಮಾನವೂ ಬಂದಿದೆ. ಗದಗಿನಲ್ಲಿ ೧೯೬೧ ರಲ್ಲಿ ನಡೆದ ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಕಣವಿಯವರು ಅಧ್ಯಕ್ಷರಾಗಿದ್ದರು. ದೆಹಲಿಯಲ್ಲಿ ೧೯೬೫ರಲ್ಲಿ ನಡೆದ ರಾಷ್ಟ್ರೀಯ ಕವಿ ಮೇಳದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಕಣವಿಯವರು ಭಾಗವಹಿಸಿದ್ದರು. ಇವರ 'ಜೀವಧ್ವನಿ' ಕಾವ್ಯಕೃತಿಗೆ ೧೯೮೦ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿತು. ೧೯೮೨ ರಲ್ಲಿ ಇವರಿಗೆ ರಾಜ್ಯ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ' ಬಂತು. ಕಣವಿಯವರ ಐವತ್ತನೆಯ ಹುಟ್ಟು ಹಬ್ಬವನ್ನು ೧೯೭೮ ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಸಾರ್ವಜನಿಕವಾಗಿ ಆಚರಿಸಲಾಯಿತು. ಅದೇ ಸಂದರ್ಭದಲ್ಲಿ ಅವರ ಕಾವ್ಯವನ್ನು ಕುರಿತು "ಚೆನ್ನವೀರ ಕಣವಿಯವರ ಕಾವ್ಯದೃಷ್ಟಿ" ಎಂಬ ಗ್ರಂಥವನ್ನು ಪ್ರಕಟಿಸಲಾಯಿತು. ಕಣವಿಯವರಿಗೆ "ಚೆಂಬೆಳಕು" ಎಂಬ ಅಭಿನಂದನ ಗ್ರಂಥವನ್ನು ೧೯೮೦ ರಲ್ಲಿ ಅರ್ಪಿಸಲಾಯಿತು. ಇದೀಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪಟ್ಟ; ಅರ್ಹತೆಗೆ ಸಂದ ಗೌರವ.

'ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ
ಮೂರು ಗಳಿಗೆಯ ಬಾಳು ಮಗಮಗಿಸುತಿರಲಿ'

—ಚೆನ್ನವೀರ ಕಣವಿ

ಭಲೇ ವೊಜಾರ್ಟ್!

ಟಿ. ಎಸ್. ಲಲಿತ

ಸಾಲ್ಜ್‌ಬರ್ಗ್‌ನ ರಸ್ತೆಯಲ್ಲಿ ನಡೆಯುತ್ತ ಹೋದಂತೆ ವೊಜಾರ್ಟ್‌ನ ಕೃತಿಯೊಂದನ್ನು ಯಾರಾದರೂ ಗುಣಿ ಗುಣಿಸುತ್ತಿರುವುದು ನಿಮ್ಮ ಕಿವಿಗೆ ಬೀಳುವ ಸಂಭವವಿದ್ದೀತು. ಈ ಗೀತಾಕಾರನ ಕೃತಿಗಳು, ಅನೇಕರ ವೈಯಕ್ತಿಕ ಸಂಗ್ರಹಗಳಲ್ಲಿ ಸೇರ್ಪಡೆಯಾಗಿವೆ.

೧೭೫೬-೧೭೯೧ರ ವರೆಗಿನ ಅಲ್ಪ ಜೀವಿತಾವಧಿಯಲ್ಲಿ ವೂಲ್ಫ್‌ಗಾಂಗ್ ಅಮೇಡಿಯಸ್ ವೊಜಾರ್ಟ್ ೬೨೬ ಕೃತಿಗಳನ್ನು ರಚಿಸಿದ್ದ. ಇವುಗಳಲ್ಲಿ ಗೀತೆಗಳು, ನೃತ್ಯಗೀತೆ, ಚರ್ಚ್‌ಸಂಗೀತ, ೫೦ ಸಿಂಫೊನಿಗಳು ಮತ್ತು ೧೯ ಒಪೆರಾಗಳೂ ಸೇರಿವೆ. The Marriage of Figaro, Don Giovanni ಹಾಗೂ The Magic Flute. ಇವು ಅತ್ಯಂತ ಜನಪ್ರಿಯವಾಗಿವೆ. ಅವನ ಅಸಂಖ್ಯಾತ ಸುಮಧುರ ಗೀತೆಗಳು, ಜೀವನದ ಬಗ್ಗೆ ಅವನಿಗಿದ್ದ ಉತ್ಸಾಹವನ್ನು ಪ್ರತಿಬಿಂಬಿಸುತ್ತವೆ. ಏರಿಳಿತಗಳನ್ನು ಕಂಡ ಅವನ ಜೀವನದ ನಿರಾಸೆಗಳ ನಡುವೆಯೂ ಅವನನ್ನು ಮುನ್ನಡೆಸಿದ್ದು ಇದೇ ಉತ್ಸಾಹ.

ವೊಜಾರ್ಟ್‌ನ ಪ್ರತಿಭೆ ನಿರಂತರವಾಗಿ ಉಕ್ಕಿ ಹರಿಯುತ್ತಿತ್ತು. ಕ್ರೀಡಾ ಪಂದ್ಯಗಳು ನಡೆಯುತ್ತಿದ್ದಲ್ಲಿ, ಬಿಲಿಯರ್ಡ್ಸ್ ಟೇಬಲ್ ಮುಂದೆ, ಪ್ರಯಾಣಕ್ಕೆ ಕೋಚ್ ಹತ್ತಿದಾಗ, ಎಲ್ಲೆಂದರಲ್ಲಿ ಅವನ ಕೃತಿಗಳು ಮೂಡಿ ಹೊರಹೊಮ್ಮುತ್ತಿದ್ದುವು. ಸಂಗೀತದ ಬಗೆಗಿನ ಅವನ ಒಲವು ಆನುವಂಶಿಕವಾಗಿ ಬಂದದ್ದು. ಅವನ ತಂದೆ ಅಯೋಪೋಲ್ಡ್ ಸಾಲ್ಜ್‌ಬರ್ಗ್‌ನ ಆರ್ಚ್‌ಬಿಷಪ್‌ಗೆ ಮೇಳ ಗಾಯಕನಾಗಿದ್ದ. ಆತ ತನ್ನ ಹಿರಿಯ ಮಗಳು, ಮೇರಿಯಾ ಅನ್ನಾಳಿಗೆ (ನನ್ನೇರಿ) ಪಾಠ ಹೇಳುತ್ತಿದ್ದಾಗ, ಪುಟ್ಟ ಬಾಲಕ ಕುತೂಹಲದಿಂದ, ಅದಕ್ಕೆ ಕಿವಿಗೊಟ್ಟು ಹಾರ್ಪ್ಸಿ ಕಾರ್ಡ್‌ನ್ನು ತನ್ನ ಪುಟ್ಟ ಕೈಗಳಿಂದ ಲಯಬದ್ಧವಾಗಿ ನುಡಿಸುತ್ತಿದ್ದ. ಐದು ವರ್ಷದವನಾದಾಗ ದೀರ್ಘ ಕೃತಿಗಳನ್ನು ತಶುದ್ಧವಾಗಿ ನುಡಿಸುವುದರೊಂದಿಗೆ ಚಿಕ್ಕ, ಚಿಕ್ಕ ಕೃತಿಗಳನ್ನು ಇನ್ನೂ ಉತ್ತಮಪಡಿಸುತ್ತಿದ್ದ. ಇದರಿಂದ ಸುಪ್ರೀತನಾದ ಅವನ ತಂದೆ, ಮಗನ ಪ್ರತಿಭಾ ವಿಕಾಸಕ್ಕೆ ತನ್ನ ಕಾಲವನ್ನೆಲ್ಲ ಮುಡಿಪಾಗಿಟ್ಟ.

೧೯೯೫ನೇ ವಿಶೇಷ ಸಂಚಿಕೆ 'ರೀಡರ್ಸ್ ಡೈಜೆಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಅರ್ನೆಸ್ಟ್ ಹಾಸರ್ ಅವರ "ಬ್ರೇವೊ ಮೊಜಾರ್ಟ್" ಎಂಬ ಲೇಖನದ ಅನುವಾದ.

೧೭೬೩ರಲ್ಲಿ, ಆರು ವರ್ಷದ ಕಿರಿಯ ಮೊಜಾರ್ಟ್ ಹಾಗೂ ಆವನಕ್ಕ ನನ್ನೇರಿಯನ್ನು ಆಸ್ಟ್ರಿಯನ್ ಸಾಮ್ರಾಜ್ಯದ ಚಟುವಟಿಕೆಗಳ ಕೇಂದ್ರವೆನಿಸಿದ ವಿಯನ್ನಾಕ್ಕೆ ಕರೆತಂದ ಅವನ ತಂದೆ. ಅಲ್ಲಿಯ ಚಕ್ರವರ್ತಿ ಒಂದನೇ ಫ್ರಾನ್ಸಿಸ್‌ನ ದರ್ಬಾರಿನಲ್ಲಿ ಹಾಡಲು ಅವರು ಆಹ್ವಾನಿತರಾಗಿದ್ದರು. ಮುಂದಿನ ಮೂರೂವರೆ ವರ್ಷಗಳ ಅವರ ಪ್ರವಾಸ ಮೊಜಾರ್ಟ್‌ನನ್ನು ಯೂರೊಪಿನ ಅತಿ ವಿಖ್ಯಾತ ಶಿಶುವೆನಿಸಿತು. ಯೂರೊಪ್ ಮಾತ್ರವಲ್ಲ, ಇಡೀ ಮಾನವ ಜನಾಂಗವೇ ಹೆಮ್ಮೆ ಪಡಬಹುದಾದ ಯೂರೊಪಿಯನ್ ಬಾಲ ಪ್ರತಿಭೆಯಾಗಿ ಪುಟ್ಟ ಜರ್ಮನ್ ಬಾಲಕ, ವುಲ್ಫ್‌ಗಾಂಗ್ ಮೊಜಾರ್ಟ್ ಅವಿರೋಧವಾಗಿ ಆಯ್ಕೆಯಾಗುತ್ತಾನೆಂದಿತು; ಲಂಡನ್‌ನ 'ಪಬ್ಲಿಕ್ ಅಡ್ವರ್ಟೈಸರ್' ಪತ್ರಿಕೆ!

ಮೊಜಾರ್ಟನ ಬಾಲಿಶ ಗುಣಗಳಿಂದೇನೂ ಕೀರ್ತಿ ಅವನನ್ನು ದೂರ ಸರಿಸಲಿಲ್ಲ. "ಸಂಗೀತ ನುಡಿಸುವಾಗಿನ ಅವನ ಗಂಭೀರ ಮುಖ ಮುದ್ರೆ, ಅವನು ಆಡುವಾಗ ಮುಗ್ಧನಗುವಿನಿಂದ ತುಂಬಿರುತ್ತಿತ್ತು. ಕಾಲುಗಳ ನಡುವೆ, ಕೋಲೊಂದನ್ನು ಸಿಕ್ಕಿಸಿ ಕೋಣೆಯ ತುಂಬಾ ಕುದುರೆ ಸವಾರಿ ಮಾಡುವಂತೆ ಓಡುತ್ತಿದ್ದ ಈ ಪ್ರತಿಭಾಶಾಲಿ ಎನ್ನುತ್ತಾರೆ ಬ್ರಿಟಿಷ್ ವೀಕ್ಷಕರೊಬ್ಬರು. ತುಂಟತನ ಅವನ ಕಣ್ಣುಗಳಲ್ಲಿ ಕುಣಿಯುತ್ತಿತ್ತು.

ಪ್ರಸಿದ್ಧ ಸಂಗೀತಗಾರರ ನಾಡೆನಿಸಿದ ಇಟಲಿಗೆ ಮೊಜಾರ್ಟನನ್ನು ಅವನ ತಂದೆ ಕರೆದೊಯ್ದಾಗ, ತರುಣ ಮೊಜಾರ್ಟನ ಕೀರ್ತಿ, ಅವನಿಗಿಂತಲೂ ಮೊದಲೇ ಇಟಲಿಯನ್ನು ತಲುಪಿತ್ತು. ನಗರಗಳ ಅನಂತರ ನಗರಗಳು, ಅವನ ಪ್ರತಿಭೆಗೆ ಶರಣಾದವು. ಬೊಲೊನಾದಲ್ಲಿ ಅತ್ಯಂತ ಗೌರವಾನ್ವಿತ 'ಫಿಲ್ಹಾರ್ಮೊನಿಕ ಅಕಡೆಮಿ'ಯ ಸದಸ್ಯನಾಗಿ ಮಾಡಲ್ಪಟ್ಟ. ಸದಸ್ಯನಾಗುವ ಅರ್ಹತೆಗಳಿಸಲು ಆವಶ್ಯಕವಾದ ಕನಿಷ್ಠ ಇಪ್ಪತ್ತನೆಯ ವಯಸ್ಸನ್ನು ಕೂಡ ಆತ ತಲುಪಿರಲಿಲ್ಲ! ರೋಮ್‌ನಲ್ಲಿ XIV ಪೋಪ್ ಕ್ಲೆಮೆಂಟ್ ನಿಂದ 'ಆರ್ಡರ್ ಆಫ್ ದಿ ಗೋಲ್ಡನ್ ಸ್ಪರ್' ಬಿರುದಿನಿಂದಾತ ಸನ್ಮಾನಿತನಾದ. ಮಿಲಾನ್‌ನಲ್ಲಿ ಅವನ ಬೆರಳುಗಳು ನೋಯುವಷ್ಟು ವೇಗದ, ಮೊದಲ ದೊಡ್ಡ ಅಪೇರಾ 'ಮಿತ್ರಿಡೇಟ್ಸ್' ರಚಿಸಿದ. ತುಂಬಿದ ಸಭೆಗಳಲ್ಲಿ ೨೦ ಬಾರಿ ಅವನ ಕಛೇರಿಯ ಪುನರಾವರ್ತನೆ ನಡೆಯಿತು.

ಆ ದಿನಗಳಲ್ಲಿ ಪ್ರತಿಭಾವಂತ ಕಲಾವಿದರು ಯೂರೊಪಿನ ರಾಜ ದರ್ಬಾರುಗಳ ವೃತ್ತಿಗಾಶಿಸುತ್ತಿದ್ದರು. ಸಾಲ್ಜ್‌ಬರ್ಗ್‌ಗೆ ಹಿಂತಿರುಗಿದ ಹದಿನಾರರ ಮೊಜಾರ್ಟ ದರ್ಬಾರ್ ಸಂಗೀತಗಾರನಾಗಿ ಆರ್ಚ್‌ಬಿಷಪ್‌ರ ಸೇವೆಗೆ ಸೇರಿದ. ೧೬,೦೦೦ ಜನಸಂಖ್ಯೆಯ ಸಾಲ್ಜ್‌ಬರ್ಗ್‌ನಲ್ಲಿ, ಉನ್ನತ ಅಧಿಕಾರಕ್ಕಿಂತ, ವಜ್ರಮೆಟ್ಟಿದ ವಾಚುಗಳು, ಹಾಗೂ ಹೊಗಳಿಕೆ ಸುಲಭವಾಗಿ ಸಿಗುತ್ತಿದ್ದವು. ಆದ್ದರಿಂದ ಆರ್ಕೆಸ್ಟ್ರಾಗೆ ಪ್ರಸಿದ್ಧವಾದ ಮನ್‌ಹೀಮ್‌ನತ್ತ ಹೊರಟ ಮೊಜಾರ್ಟ, ಅರಮನೆಯಲ್ಲಿ ಕಛೇರಿ ನಡೆಸಿ ಚಕ್ರವರ್ತಿಯ ಕೈಗೆ ಮುತ್ತಿಕ್ಕಿದ. "ಎಣೆ ಇಲ್ಲದಂಥ ಕಛೇರಿ ನಡೆಸಿದೆ" ಎಂದು ಹೊಗಳಿದ ಚಕ್ರವರ್ತಿ

ಯಿಂದ ಅವನಿಗೆ ಸಿಕ್ಕಿದ್ದು, ಮತ್ತೊಂದು ಗಡಿಯಾರವೇ ಹೊರತು ಕೆಲಸವಲ್ಲ.

ಮನ್‌ಹೀಮ್‌ನಲ್ಲಿ ಮೊಜಾರ್ಟ್ ಸಂಧಿಸಿದ್ದು, ವೆಬರ್ ಮನೆತನದ ಸಂಗೀತ ಲಿಪಿಕಾರ ಪ್ರಿಡೋಲಿನ್, ಅವನ ಹೆಂಡತಿ ಮಾರಿಯಾ ಕ್ಯಾಸಿಲಿ ಹಾಗೂ ಕಲಾ ಪ್ರತಿಭೆಯುಳ್ಳ ಅವನ ಹೆಣ್ಣು ಮಕ್ಕಳನ್ನು. ೧೫ ವರ್ಷದ ಅಲೋಶಿಯಾಳ ಪ್ರೇಮಕ್ಕೆ ಸಿಲುಕಿದ ಮೊಜಾರ್ಟ. ಆದರೆ ಈ ವಿಷಯ ತಂದೆಗೆ ತಿಳಿಸಿದಾಗ ಉರಿದೆದ್ದ ಲಿಯೋಪೋಲ್ಡ್." ಕೂಡಲೇ ನೀನು ಪ್ಯಾರಿಸ್‌ಗೆ ಹೋಗು, ಮನುಷ್ಯನ ಕೀರ್ತಿ ವಿಶ್ವದಲ್ಲಿ ವಿಸ್ತರಿಸಬೇಕಾದರೆ ಅದು ಪ್ಯಾರಿಸ್ ಮೂಲಕವೇ" ಎಂದು ಮಗನಿಗೆ ಬರೆದ. ತಂದೆಗೆ ವಿಧೇಯನಾದ ೨೨ರ ಯುವಕ ಮೊಜಾರ್ಟ್, ಪ್ಯಾರಿಸ್‌ಗೆ ಹೋದರೂ ಅಲ್ಲಿ ಅವನಿಗೆ ಹಣ ಕೀರ್ತಿ ಏನು ಸಿಗದಾಯಿತು. ಮತ್ತೊಮ್ಮೆ ಸಾಲ್ಜ್‌ಬರ್ಗ್‌ಗೇ ಹಿಂತಿರುಗಿದ ಮೊಜಾರ್ಟ್, ಜೀವನ ನಿರ್ವಹಣೆಗೆ ಆರ್ಚ್‌ಬಿಷಪ್‌ನ ಸೇವೆಗೇ ಮರಳಬೇಕಾಯ್ತು.

ಇಂದು ಸಾಲ್ಜ್‌ಬರ್ಗ್ ಮೊಜಾರ್ಟ ನಗರವೆಂದೇ ಪ್ರಸಿದ್ಧವಾಗಿದೆ. ಭವ್ಯವಾದ ಗುಮ್ಮಟಗಳು ಹಾಗೂ ಮಹಡಿಗಳಿಂದ ಕೂಡಿದ ಇಡೀ ನಗರ ಅವನ ಹೆಸರಿನಿಂದ, ಅನುರಣಿತವಾಗಿದೆ. ಅಲ್ಲಿಯ ಸಂಗೀತ ಅಕೆಡಮಿ 'ಮೊಜಾರ್ಟಿಯಮ್' ಎಂದು ಕರೆಯಲ್ಪಡುತ್ತದೆ; ವಾರ್ಷಿಕ 'ಮೊಜಾರ್ಟ್ ಸಪ್ತಾಹದಲ್ಲಿ' ನಡೆಯುವ ಸಂಗೀತೋತ್ಸವದಲ್ಲಿ ಹೆಚ್ಚಾಗಿ, ಅವನ ಕೃತಿಗಳಿಗೇ ಪ್ರಾಧಾನ್ಯ. ಆತ ಹುಟ್ಟಿದ ಮನೆಯೀಗ ಒಂದು ಸಂಗ್ರಹಾಲಯವಾಗಿ, ಲೆಕ್ಕವಿಲ್ಲದಷ್ಟು ಪ್ರವಾಸಿಗರು ದಿನವೂ ಅಲ್ಲಿಗೆ ಭೇಟಿ ಕೊಡುತ್ತಾರೆ. ಮುಖ್ಯ ಚೌಕದಲ್ಲಿ ಅವನ ಪ್ರತಿಮೆ ಪ್ರತಿಷ್ಠಾಪನೆಯಾಗಿದೆ. ಆದರೆ ಮೊಜಾರ್ಟ್ ಸಾಲ್ಜ್‌ಬರ್ಗ್‌ನ್ನು ದ್ವೇಷಿಸುತ್ತಿದ್ದನೆನ್ನುವುದು ಒಂದು ವಿಪರ್ಯಾಸ. ಕಾರಣ, ಅವನ ಆರ್ಚ್‌ಬಿಷಪ್ ಕೊಲರೆಡೊ, ಮೊಜಾರ್ಟನನ್ನು ತೀರಾ ಕೀಳಾಗಿ ಕಾಣುತ್ತಿದ್ದ. ಮೊಜಾರ್ಟ ಅಡುಗೆಯವರು ಹಾಗೂ ಆಳುಗಳೊಂದಿಗೆ ಊಟಕ್ಕೆ ಕುಳಿತುಕೊಳ್ಳಬೇಕಾಗುತ್ತಿತ್ತು. ಒಂಬತ್ತು ವರ್ಷಗಳು ಈ ಅವಮಾನವನ್ನು ಸಹಿಸಿದರೂ, ೧೭೮೧ರಲ್ಲಿ ವಿಯನ್ನಾದಲ್ಲಿ ಮೊಜಾರ್ಟ ಸ್ವಂತ ಕಛೇರಿಗಳನ್ನು ನಡೆಸಬಾರದೆಂದು ಬಿಷಪ್ ಆಜ್ಞೆ ಮಾಡಿದಾಗ, ಬೇಸತ್ತ ಮೊಜಾರ್ಟ ಆ ಕೆಲಸ ತ್ಯಜಿಸಿದ. ಬಿಷಪ್‌ನ ಸಹಾಯಕ ಕೌಂಟ್ ಆರ್ಕೋನನ್ನು ಭೇಟಿ ಮಾಡಿದಾಗ, ಅವನೊಂದಿಗೆ ವಾದ ವಿವಾದಗಳಾಗಿ, ಆ ಕೊಠಡಿಯಿಂದಲೇ ಒದ್ದು ಹೊರಹಾಕಲ್ಪಟ್ಟ ಮೊಜಾರ್ಟ್. ಈ ಒದೆತ ಮೊಜಾರ್ಟನನ್ನು ಸ್ವತಂತ್ರನನ್ನಾಗಿಸಿದರೆ, ವಿಯನ್ನಾದವರಿಗೆ ಲಾಭದಾಯಕವಾಯ್ತು.

ಸಂಗೀತದ ಹುಚ್ಚಿದ್ದ ವಿಯನ್ನಾ, ವಿಶ್ವದಲ್ಲೇ ಕಲೆಗೆ ಅತ್ಯುತ್ತಮ ಸ್ಥಳವೆನಿಸಿದ ಅದ್ಭುತ ನಗರಿಯಾಗಿತ್ತು. ವಿಧವೆಯಾಗಿದ್ದ ಶ್ರೀಮತಿ ವೆಬರ್, ತನ್ನ ಮೂವರು ಹೆಣ್ಣು ಮಕ್ಕಳೊಂದಿಗೆ ಅಲ್ಲೇ ನೆಲಸಿದ್ದೊಂದು ಅದೃಷ್ಟ; ಮೊಜಾರ್ಟನ ಪಾಲಿಗೆ. ಒಮ್ಮೆ ಮೊಜಾರ್ಟ್ ಪ್ರೀತಿಸಿದ್ದ ಅಲೋಷಿಯಾ ಈಗ ನಟನೊಬ್ಬನ ಮಡದಿಯಾಗಿದ್ದಳು. ಆದರೆ ಅವಳ ಕಿರಿಯ ಸೋದರಿ ಕಾನ್ಸ್ಟಾನ್ಜೆ ಹಾಗೆಯೇ ಉಳಿ

ದಿದ್ದು, ಮೊಜಾರ್ಟ್ ಈಗವಳನ್ನು ಪ್ರೀತಿಸಿ ಮದುವೆಯಾದ. ವಿವಾಹವಾಗಿ ಕೇವಲ ಒಂಬತ್ತು ವರ್ಷ ಅವಳೊಂದಿಗೆ ಸಂಸಾರ ನಡೆಸಿದ. ಆತ ಅವಳ ಬಗ್ಗೆ ಹೆಚ್ಚಿನ ಒಲವು ತೋರಿದ. ಅವರ ಆರು ಮಕ್ಕಳಲ್ಲಿ ಉಳಿದವು ಎರಡೇ.

ವಿಯನ್ನಾ ಈ ಹೊಸಬನಿಗೆ ಅತ್ಯಂತ ಗೌರವದ ಸ್ಥಾನ ಕೊಟ್ಟಿತು. ಈಗ ಸಂಗೀತ ಪಾಠಗಳಿಗೆ, ಕಛೇರಿಗಳಿಗೆ ಅತ್ಯಂತ ದುಬಾರಿಯ ಶುಲ್ಕ ವಿಧಿಸುತ್ತಿದ್ದ ಮೊಜಾರ್ಟ್ ಆತನ ನೂತನ ಕೃತಿಗಳು ಜನರನ್ನು ಭಾವೋದ್ರೇಕಕ್ಕೊಳಪಡಿಸುತ್ತಿದ್ದವು. ಪುರಾತನ ವಾದ್ಯವಾದ ಹಾರ್ಪನ್‌ಕಾರ್ಡ್ ಬಿಟ್ಟು, ನೂತನ ವಾದ್ಯವಾದ ಮಧುರ ಧ್ವನಿಯ ಪಿಯಾನೊ ಬಳಸಲಾರಂಭಿಸಿದ. ಅತಿ ಮಾನುಷಸ್ಪರ್ಶದಂತೆ ಅವನು ನುಡಿಸುವಾಗ ಗಡಚಿಕ್ಕುವ ಚಪ್ಪಾಳೆಯೊಂದಿಗೆ "ಬ್ರೇವೋ ಮೊಜಾರ್ಟ್" ಎಂಬ ಜಯಕಾರ, ಅವನಿಗೆ ಮೆಚ್ಚಿಕೆಯಂತೆ ಕೋಣೆಯಲ್ಲಿ ಪ್ರತಿಧ್ವನಿಸುತ್ತಿತ್ತು.

ವೈಭವದೊಂದಿಗೆ, ಚಕ್ರವರ್ತಿ ಎದುರಿಗೆ, ೧೭೮೨ರಲ್ಲಿ ಪ್ರಾರಂಭವಾದ ಅವನ 'ಅಪೇರಾ' 'ಸೆರಾಗ್ಲಿಯೋ' ಮೊಜಾರ್ಟನಿಗೆ 'ಜ್ಞಾನಿ'ಯ ಪಟ್ಟ ಕಟ್ಟಿತು. ಅಪೇರಾ ತನ್ನ ಒಲವೆಂದ ಮೊಜಾರ್ಟ್, ಮುಂದಿನ ನಾಲ್ಕು ವರ್ಷಗಳಲ್ಲಿ ನೂರಾರು ಕೃತಿಗಳನ್ನಭ್ಯಸಿಸಿ, ಲೊರೆಂಜೊ-ಡ-ಪಾಂಟೆಯ ಕ್ರಾಂತಿಕಾರಿ ನಾಟಕ 'The Marriage of Figaro'ವನ್ನು ಸಂಗೀತರೂಪಕಕ್ಕಳವಡಿಸಿದ. ನಾಟಕದ ಆದಿಯಿಂದ ಅಂತ್ಯದವರೆಗೂ ಅಲೆಅಲೆಯಾಗಿ ಇಳಿದು ಬಂದ ಮೊಜಾರ್ಟನ ಸುಮಧುರ ಸ್ವರಗಳು ಜನರನ್ನು ಸಂತೋಷದಿಂದ ಹುಚ್ಚರನ್ನಾಗಿಸಿದವು. ವಿಯನ್ನಾದಿಂದ ಆಳಲ್ಪಡುತ್ತಿದ್ದ ಪ್ರೇಗ್ ನಗರಕ್ಕೆ ಮೊಜಾರ್ಟ್ ಭೇಟಿ ಕೊಟ್ಟಾಗ, ಇಡೀ ಪಟ್ಟಣದ ಜನಸ್ತೋಮ, ಅಪೇರಾದ ಸಂಗೀತಕ್ಕೆ ಸಿಳ್ಳೆ ಹಾಕುತ್ತಾ ಹಾಡುತ್ತ, ನರ್ತಿಸುತ್ತಿದ್ದುದನ್ನು ಕಂಡ.

ಡ-ಪಾಂಟೆಯೊಂದಿಗೆ ತಯಾರಿಸಿದ ಮತ್ತೊಂದು ಅಪೇರಾ 'ಡಾನ್ ಗಿಯೋವನ', ಎಲ್ಲ ನೀತಿ ನಿಯಮಗಳನ್ನು ಗಾಳಿಗೆ ತೂರಿದ ಅಹಂಕಾರದ ವ್ಯಕ್ತಿ ಇದ್ದಕ್ಕಿದ್ದಂತೆ ಎಂಥ ಅವನತಿಗಿಳಿಯುತ್ತಾನೆಂದು ರೂಪಿಸಿದೆ. ಅಪೂರ್ಣ ಕೃತಿಯನ್ನು, ಪ್ರೇಗ್‌ಗೆ ತನ್ನೊಂದಿಗೆ ಕೊಂಡೊಯ್ದು, ಅಪೇರಾ ಪ್ರಾರಂಭವಾಗುವ ಹಿಂದಿನ ರಾತ್ರಿಯಷ್ಟೇ ಅದನ್ನು ಪೂರ್ಣಗೊಳಿಸಿದ. ಜಯಭೇರಿ ಬಾರಿಸಿದ ಟಾನ್‌ಗಿಯೋವನಿ' ಎಲ್ಲ ಕಾಲಕ್ಕೂ ಬರೆದ 'ಅತ್ಯಂತ ಶ್ರೇಷ್ಠ ಅಪೇರಾ' ಎನಿಸಿದೆ.

ಮಾನವನ ಉದಾತ್ತ ಗುಣಗಳು, ಹಾಗೂ ಒಳಿತು, ಕೆಡುಕಿನ ಮೇಲೆ ಗಳಿಸುವ ವಿಜಯದ ಬಗ್ಗೆ ಹೊಂದಿದ್ದ ನಂಬಿಕೆ, ಮೊಜಾರ್ಟನ ಕೃತಿಗಳನ್ನು ಜೀವಂತಗೊಳಿಸಿದೆ. ಅಂದಿನ ಕಾಲದ ಹಿರಿಯ ಚೇತನಗಳನ್ನು ಆಕರ್ಷಿಸುತ್ತಿದ್ದ 'ಫ್ರೀಮೇಸನ್ಸ್' ಎಂಬ ಭ್ರಾತೃ ಸಂಘವೊಂದರ ಸದಸ್ಯನಾದ. ಅದರ ಭಾವನೆಗಳು ಅವನ ಕಡೆಯ ಅಪೇರಾ 'ದ ಮ್ಯಾಜಿಕ್ ಫ್ಲೂಟ್'ನಲ್ಲಿ ಮಿಂಚಿದ್ದರೂ, ಅದು ಕೇವಲ ಯಕ್ಷಿಣಿಯ ಕಥೆ ಎಂದು ಪರಿಗಣಿತವಾಗಿದ್ದರೂ, ಅದಕ್ಕೆ ಅತ್ಯಂತ ಉತ್ಸಾಹಭರಿತ, ಮನವನ್ನು ಮುದಗೊಳಿಸುವ, ಸಂಗೀತವನ್ನು ನೀಡಿ

ದ್ದಾನೆ. ೧೭೯೧ರ ಸೆಪ್ಟೆಂಬರ್ ಮೂವತ್ತರಂದು, ಮೊದಲಬಾರಿಗೆ ಹಾಡಿದ ಈ ಆಪೇರಾ ಅಕ್ಟೋಬರ್ ಅತ್ಯಂದ ವೇಳೆಗೆ ೨೪ ಬಾರಿ ಪುನರಾವೃತ್ತಿಯಾಯ್ತು. ಮೊಜಾರ್ಟ್ ಆಗ ೩೫ ವರ್ಷದವ. ಆತ ಮುಂದೆ ಜೀವಿಸಲಿದ್ದುದು ಇನ್ನು ಕೇವಲ ೫ ವಾರಗಳು ಮಾತ್ರ!

ಜೀವನದ ಸಂಧ್ಯೆಯಲ್ಲಿ ಎಲ್ಲವೂ ಅಸ್ತ-ವ್ಯಸ್ತ. ಒಮ್ಮೆಗೇ ಎರಡು ಕೃತಿಗಳನ್ನು ರಚಿಸಬಹುದಾದಷ್ಟಿದ್ದ ಮೇಧಾವಿತನವೀಗ ಕುಂಠಿತವಾಗಿತ್ತು. 'ಬ್ರೇವೋ ಮೊಜಾರ್ಟ್' ಎಂಬ ಧ್ವನಿಗಳೀಗ ಉಡುಗಿಹೋಗಿದ್ದವು. ಸ್ಫೂರ್ತಿಗೊಂಡ ಮೊಜಾರ್ಟ್‌ನಿಂದ ೧೭೮೮ರ ಸುಡುಬೇಸಗೆಯಲ್ಲಿ ರಚಿತವಾದ ಕಡೆಯ ಮೂರು ಸಿಂಫೊನಿಗಳಲ್ಲೊಂದಾಗಿ, ಗಾಂಭೀರ್ಯದಿಂದ ಕೂಡಿದ 'ಜ್ಯೂಪಿಟರ್' ಒಂದೇಪಟ್ಟಿಗೆ ರಚಿತವಾದರೂ ಅವನ ಜೀವಿತಾವಧಿಯಲ್ಲಿ ಜನರಿಂದ ಕೇಳಲ್ಪಡಲೇ ಇಲ್ಲ. ಇಡೀ ದೇಶವನ್ನೇ ಸೂರೆಗೊಂಡ 'ಫಿಗಾರೊ' ವಿಯನ್ನಾದಲ್ಲಿ ಒಂಬತ್ತನೆಯ ಕಛೇರಿಯ ಅನಂತರ ಮತ್ತೆ ಕೇಳದಾಯ್ತು. ಪ್ರಾಹಾ ಹಾಗೂ ಇತರೆಡೆ ಯಶಸ್ಸಿನ ಜಯಭೇರಿ ಬಾರಿಸಿದ 'ಡಾನ್ ಗಿಯೋವನಿ' ವಿಯನ್ನಾದಲ್ಲೇಕೋ ಹೊಯ್ದಾಡಿತು.

ವಿಡಂಬನೆ ಎಂದರೆ, ಅರಮನೆಯಿಂದ ಆಚೆಗಟ್ಟಿದ್ದ ಆರ್ಕೋ ವಿಯನ್ನಾದ ತಿಕ್ಕಲುತನದ ಬಗ್ಗೆ ಮೊಜಾರ್ಟನನ್ನು ಎಚ್ಚರಿಸಿದ್ದ. ಮೊದಮೊದಲು ಅಲ್ಲಿ ಹೆಸರು, ಹಣವೆಲ್ಲಾ ಹರಿದುಬಂದರೂ, ಕೆಲತಿಂಗಳ ನಂತರ ವಿಯನ್ನಾದವರು "ಹೊಸ ರಾಗಗಳಿಗಾಗಿ ಕೇಳುತ್ತಾರೆ" ಎಂದು ಆಶಾವಾದಿಯಾಗಿದ್ದ ಮೊಜಾರ್ಟ್ ಕೂಡ ತಾನೀಗ ಜನಾಭಿಪ್ರಾಯದ ಮೇಲೆ ತನ್ನ ನಿಯಂತ್ರಣ ಕಳೆದುಕೊಂಡಿದ್ದೇನೆಂದು ಒಪ್ಪಿಕೊಳ್ಳಲೇಬೇಕಾಯಿತು.

ಈಗ ಮೊಜಾರ್ಟನ ಸಂಸಾರ, ಕಡಿಮೆ ಖರ್ಚಿನ ನಿವಾಸಕ್ಕೆ ಬದಲಿಸಬೇಕಾಯ್ತು. ಗಾರೆ ಕೆಲಸದ ಶ್ರೀಮಂತ ಮೈಖೇಲ್ ಪಕ್‌ಬರ್ಗ್ ಎಂಬುವವನನ್ನು ಸಾಲಕ್ಕಾಗಿ ಬೇಡಿ ಹತಾಶೆಯಿಂದ, ಮೊಜಾರ್ಟ್ ಬರೆದ ೨೧ ಪತ್ರಗಳು ಈಗ ಸಿಕ್ಕಿವೆ. ಆತ ಸಾಕಷ್ಟು ಸಾಲ ಕೊಟ್ಟು, ಸಹಾಯ ಮಾಡದಿದ್ದಲ್ಲಿ ಕಡುಬಡತನದಲ್ಲಿದ್ದ ನಾಲ್ಕು ಜನರ ಮೊಜಾರ್ಟನ ಸಂಸಾರದ ಪರಿಸ್ಥಿತಿ ತೀರ ಹದಗೆಡುತ್ತಿತ್ತು.

೧೭೯೧ರಲ್ಲಿ ಆಗಂತುಕನೊಬ್ಬ ಒಂದು ಶೋಕಗೀತೆಯನ್ನು ರಚಿಸಿಕೊಡುವಂತೆ ಮೊಜಾರ್ಟನನ್ನು ಕೇಳಿದ. ಆಧ್ಯಾತ್ಮಿಕ ಲೇಪದೊಂದಿಗೆ ಅತಿಸುಂದರ ಕೃತಿ ರಚನೆಗೆ ತೊಡಗಿದ ಮೊಜಾರ್ಟ್. ಆದರೆ, ಹಿಂದೆ ಅವನ ಕೃತಿಗಳಲ್ಲಿ ಕಂಡುಬರುತ್ತಿದ್ದ ಉತ್ಸಾಹಕಾರಕ ಶಕ್ತಿಯೀಗ ಅವನ ಕೈಬಿಟ್ಟಿತ್ತು. ಆಗಾಗ್ಗೆ ಬರುತ್ತಿದ್ದ ಜ್ವರ, ಕೀಲೂತ, ಮೂರ್ಛಾವಸ್ಥೆಯೊಂದಿಗೆ, ದುರ್ಬಲನಾದ ಮೊಜಾರ್ಟ್ ತನ್ನ ಚರಮಗೀತೆಯನ್ನೇ ತಾನು ಬರೆದುಕೊಳ್ಳುತ್ತಿದ್ದೇನೆಂದು ಹೇಳಿದ ಹೆಂಡತಿಗೆ. ಪ್ರಾರಂಭಿಸಿದ್ದ ಅವನ ಕೃತಿಗಳನ್ನು ಪಾರ್ಶ್ವವಾಯು ಅಪೂರ್ಣಗೊಳಿಸಿತ್ತು.

ಚಿಕ್ಕಂದಿನಿಂದಲೂ ಕಾಡುತ್ತಿದ್ದ ವಾತ-ಜ್ವರವೀಗ ಮತ್ತೆ ಮತ್ತೆ ಕಾಡಿಸತೊಡಗಿತು. "ಬಾಲ್ಯಾವಸ್ಥೆಯ ಸೂಕ್ಷ್ಮವಾದ ಹುಡುಗನ ಅಷ್ಟೊಂದು ಸುತ್ತಾಟ ಉಗ್ರವಾದ ಈ ರೋಗಕ್ಕವನನ್ನು ತುತ್ತಾಗಿಸಿತು" ಎಂದಿದ್ದಾರೆ, ಕಡೆಗಾಲದಲ್ಲಿ ಮೊಜಾರ್ಟ್

ಪಟ್ಟ ಕಷ್ಟವನ್ನು ಕಣ್ಣಾರೆ ಕಂಡ ಸ್ವಿಸ್ ಡಾಕ್ಟರ್ ಕಾರ್ಲ್ ಬಾರ್. ಮೊಜಾರ್ಟ್ ಸತ್ತಾಗ, ಎಷ್ಟೋ ದೇಹಗಳೊಂದಿಗೆ, ಗುರುತರಿಯದ ಸಮಾಧಿಯಲ್ಲಿ, ದಿವಾಳಿ ಎದ್ದವರಿಗಿಂತ ಸ್ವಲ್ಪ ಮೇಲ್ತರನಾದ ಅಂತ್ಯಕ್ರಿಯೆ ಮಾಡಲಾಯ್ತು.

ಇಂದು ಮೊಜಾರ್ಟನ ಅಮರ ಕೃತಿಗಳು ಪ್ರಪಂಚದಲ್ಲೆಲ್ಲಾ ಪ್ರತಿಧ್ವನಿಸುತ್ತಿವೆ. ಅನೇಕ ಕೃತಿಗಳು ಪಾಪ್ ಹಾಗೂ ರಾಕ್ ಸಂಗೀತಕ್ಕಳವಡಿಸಲ್ಪಟ್ಟು ಜೀವನದ ಸಂತೋಷಕ್ಕೆ ನಿರಂತರವಾದ ಕಾಣಿಕೆಯನ್ನಿತ್ತಿವೆ.



ಯಾವುದೇ ಉದ್ದೇಶದಿಂದ ಕಾರ್ಯಸಾಧನೆಗಾಗಿ ಕೆಟ್ಟ ಮಾರ್ಗ ಅನುಸರಿಸಬೇಕಾಗಿದ್ದರೆ ಅಂಥ ಕಾರ್ಯ ಸಾಧನೆಯನ್ನೇ ಕೈಬಿಡಿರಿ. ಒಳ್ಳೆಯ ಉದ್ದೇಶಗಳ ಸಾಧನೆಗೆ ಒಳ್ಳೆಯ ಕಾರ್ಯ ಮಾಡುವ ಸುಸಂದರ್ಭವನ್ನು ಮಾತ್ರ ಎಂದೂ ಕಳೆದುಕೊಳ್ಳಬೇಡಿ. ಕೆಟ್ಟತನದಿಂದ ಒಳ್ಳೆಯದಾಗುವದೆಂದು ಹೇಳಿದರೆ ಅಂಥ ಉದ್ದೇಶದ ಫಲವನ್ನು ನಂಬದಿರಿ.

—ಅಲ್ಫ್ರೆಡ್ ರಾಬರಿ

ಜನಾಂಗದ ಬಲ ಸುರಕ್ಷಿತತೆಗಳು ಆ ಜನಾಂಗದ ಯುವಜನರ ಸದ್ಗುಣ, ಚಾರಿತ್ರ್ಯಗಳ ಮೇಲೆಯೇ ಅವಲಂಬಿಸಿವೆ. ಆದ್ದರಿಂದ ಯುವಜನರಿಗೆ ಯೋಗ್ಯ ಮಾರ್ಗದರ್ಶನ ದೊರಕುವದನ್ನು ಜನಾಂಗ ನೋಡಿಕೊಳ್ಳಬೇಕು.

—ಜೆ. ಹಾವ್ಸ

ಕರುಣೆಯ ಒಳಸಂಚು

ಗ. ನಾ. ಭಟ್ಟ

"ದೇಶದಲ್ಲಿ ತಾಂಡವವಾಡುತ್ತಿರುವ ಅರಾಜಕತೆ, ಭ್ರಷ್ಟತೆ, ಅದಕ್ಷತೆ ಮುಂತಾದವುಗಳ ಎದುರು ಒಂದೇ ಒಂದು ರಕ್ಷಣೆ ಎಂದರೆ ರಾಷ್ಟ್ರದ ಆಡಳಿತೆಯನ್ನು ಮಿಲಿಟರಿಗೆ ವರ್ಗಾಯಿಸುವುದು" ಎಂಬ ಹತಾಶೆಯ ಧ್ವನಿ ಆಗ ಈಗ ಕೇಳಿಬರುವುದುಂಟು. ಇದು ಬಾಣಲೆಯಿಂದ ಬೆಂಕಿಗೆ ಹಾರುವಂಥ ಆತ್ಮಘಾತಕ ಮಾರ್ಗ ಏಕೆ? ಓದಿ ಈ ಅನುಭವ ಚಿತ್ರ.

ಸಹಾಯಕ

ವಾರ್ಸಾದ ಸಾಲಿಡ್ಯಾರಿಟಿಯ (ಒಗ್ಗಟ್ಟಿನ ಒಂದು ಸಂಘ) ಮುಖ್ಯ ಕಾರ್ಯಸ್ಥಾನದಲ್ಲಿ ಯಾವುದೋ ಟೈಪಿಂಗ್ ಕಾರ್ಯದಲ್ಲಿ ಮಗ್ನಳಾಗಿದ್ದಳು ಆ್ಯನಾ. ಈಕೆ ಕತ್ತೆತ್ತಿ ನೋಡಿದಾಗ ಹರಿದು ಚಿಂದಿ ಆಗಿದ್ದ ಬಟ್ಟೆ ತೊಟ್ಟಿದ್ದ ಯುವಕನೋರ್ವ ಕಂಡುಬಂದ. ಅವನೊಬ್ಬ ರಷ್ಯನ್ ಸೈನಿಕ. ಸೈನಿಕರಿಗೆ ನಿಯಮಿತವಾಗಿದ್ದ ದಾರುಣ ಶಿಸ್ತನ್ನು ಸಹಿಸಲಾಗದೇ ಕರ್ತವ್ಯ ವಿಮುಖವಾಗಿ ತಲೆತಪ್ಪಿಸಿಕೊಂಡು ಬಂದಿದ್ದ. ಆ್ಯನಾಳ ಸಹೋದ್ಯೋಗಿಯೋರ್ವ ಅವನನ್ನು ಅಲ್ಲಿಗೆ ಕರೆತಂದು "ಇವನನ್ನು ಸ್ವಲ್ಪ ದಿನಗಳವರೆಗೆ ಇರಿಸಿಕೊಳ್ಳಲಾಗುವುದೇ" ಎಂದು ಕೇಳಿದ್ದ.

ಸ್ವಲ್ಪವೂ ಯೋಚಿಸದೆ ಆಕೆ–ಅವನನ್ನಿರಿಸಿಕೊಳ್ಳಲು ಒಪ್ಪಿದಳು. ಇದು ನಡೆದ ಘಟನೆ ಡಿಸೆಂಬರ್ ೧೯೮೧. ಆಗ ಸುಮಾರು ೪೦,೦೦೦ ಸೋವಿಯತ್ ಸೈನಿಕರು ಪೋಲೆಂಡ್‌ನಲ್ಲಿ ತರಬೇತಿಗಾಗಿ ನೇಮಕಗೊಂಡಿದ್ದರು. ಆ ಸೈನ್ಯದಿಂದ ತಪ್ಪಿಸಿಕೊಂಡವರಾರೂ ಸಫಲರಾಗಿದ್ದುದನ್ನು ಆ್ಯನಾ ಕೇಳಿರಲಿಲ್ಲ.

ಸ್ವಲ್ಪ ಸಮಯದ ಬಳಿಕ ಆ್ಯನಾಳು ಆ ರಷ್ಯನ್ ಸೈನಿಕ ಅಲೆಗ್ಸಾಂಡರ್ ಯುಶ್ಚೆನಿಷೆವ್ ಸ್ಯಾಷಾನೊಡನೆ ವಾರ್ಸಾ ನಗರದಲ್ಲಿರುವ ತನ್ನ ಮನೆಗೆ ಟ್ರೈನಲ್ಲಿ ಹೊರಟಳು. ಆ್ಯನಾಳ ಕುಟುಂಬದವರು ಮೂಲತಃ ವೋವಾ ನಗರದವರಾಗಿದ್ದರು.

೧೯೮೫ರ ಆಗಸ್ಟ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ರುಡಾಲ್ಫ್ ಚೆಲ್ಮಿನ್‌ಸ್ಕಿ ಅವರ "ಕಾನ್‌ಸ್ಪಿರೆನ್ಸಿ ಆಫ್ ಕೈನ್ಡ್‌ನೆಸ್" ಎಂಬ ಲೇಖನದ ಅನುವಾದ.

ಇಂದು 'ಯುಕ್ರೈನ್' ಎಂದು ಕರೆಯಲ್ಪಡುವ ಪೂರ್ವ ಪೋಲೆಂಡ್‌ಗೆ ಅವರು ಬಂದು ನೆಲಸಿದ್ದರು. ೧೯೪೫ರಲ್ಲಿ ಸರ್ವಾಧಿಕಾರಿ ಸ್ಟಾಲಿನ್ ಈ ಪ್ರಾಂತಗಳನ್ನೆಲ್ಲಾ 'ಯುನೈಟೆಡ್ ಸ್ಟೇಟ್ ಸೋವಿಯೆತ್ ರಿಪಬ್ಲಿಕ್'ಗೆ ಸೇರಿಸಿಕೊಂಡಾಗ ಕಜಕಸ್ಥಾನದಲ್ಲಿದ್ದ ಅವಳ ಅಜ್ಜ ಹಸಿವೆಯಿಂದ ಬಳಲಿ ಸತ್ತಿದ್ದಳು. ಆ್ಯನಾಳ ಕುಟುಂಬದವರೆಲ್ಲಾ ಗಡೀಪಾರು ಮಾಡಲ್ಪಟ್ಟಿದ್ದರು. ಈ ಎಲ್ಲವರ ಹಿನ್ನೆಲೆಯಲ್ಲಿ, ರಷ್ಯನ್ನರ ಮೇಲಿನ ಅಸಹನೆಯಿಂದ ಅವಳ ತಾಯಿ "ರಷ್ಯನ್‌ನ್ನು ಕರೆತಂದಿದ್ದೀಯಾ" ಎಂದು ಅವಳನ್ನು ಸಂಶಯಾತ್ಮಕವಾಗಿ ಕೇಳಿದ್ದಳು.

ಆ್ಯನಾಳಿಗೆ ಈ ಅಪಾಯದ ಅರಿವಿತ್ತು. ಸೋವಿಯೆತ್ ಮಿಲಿಟರಿ ಬೇಹುಗಾರಿಕೆಯೇನಾದರೂ ಈ ಸೈನಿಕನನ್ನು ಪತ್ತೆಹಚ್ಚಿ ಹಿಡಿದಿದ್ದರೆ ಅವನು ಆ ಕೂಡಲೆ ಮರಣ ದಂಡನೆಗೆ ಗುರಿಯಾಗುತ್ತಿದ್ದನೆಂದು ಆಕೆಗೆ ಗೊತ್ತಿತ್ತು.

ಆ ರಷ್ಯನ್ ಸೈನಿಕನನ್ನು ಮನೆಯಲ್ಲಿ ಉಳಿಸಿಕೊಳ್ಳಬೇಕೆಂಬ ಆ್ಯನಾಳ ಬೇಡಿಕೆಗೆ ಅವಳ ತಂದೆ-ತಾಯಿಯರು ಮೊದಮೊದಲಿಗೆ ಆತಂಕವ್ಯಕ್ತಪಡಿಸಿದರು. ಕೊನೆಗೆ ಒಪ್ಪಿಗೆ ನೀಡಿದರು. ಅಲೆಗ್ಸಾಂಡರ್ ಯೂನಿಷೆವ್ ಸ್ಯಾಷಾ ಕೇವಲ ರಷ್ಯನ್ ಭಾಷೆಯೊಂದನ್ನೇ ತಿಳಿದವನಾಗಿದ್ದ. ಕೆಲವು ದಿನಗಳ ಅನಂತರ ಅವನ ಕರುಣಾಜನಕ ಕಥೆ ತಿಳಿದುಬಂತು.

ಸ್ಯಾಷಾ ನೈಋತ್ಯ ರಷ್ಯಾದಲ್ಲಿ ಕಮ್ಮಾರನೋರ್ವನ ಒಬ್ಬನೇ ಮಗನಾಗಿ ಹುಟ್ಟಿದ. ಸೈನಿಕನಾಗಿ ಜೀವನವೃತ್ತಿಯನ್ನು ಆಯ್ದುಕೊಳ್ಳುವುದು ಆ ಯುವಕನ ಕನಸಾಗಿತ್ತು. ಅವನ ೧೮ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಆತ ರೆಡ್ ಆರ್ಮಿಯನ್ನು ಒತ್ತಾಯದಿಂದ ಸೇರಿದಾಗ ಅವನ ಕನಸು ನಿಷ್ಠುರ ಸತ್ಯದೊಂದಿಗೆ ನನಸಾಯಿತು. ಸ್ಯಾಷಾನ ಮೊದಲ ಉದ್ಯೋಗ ನೇಮಕಾತಿ ಪೋಲೆಂಡಲ್ಲಿ ಆಯಿತು.

ಪೋಲೆಂಡಲ್ಲಿ ಅವನ ಹೊಸ ನೇಮಕಾತಿ ಆಗುತ್ತಿದ್ದಂತೆ ತನ್ನವರು ಯಾರೂ ಇಲ್ಲದ ಆತ ಅಲ್ಲಿ ಸೈನಿಕ–ಸಿಬ್ಬಂದಿಯವರಿಂದ ಮೃಗೀಯ ರ್ಯಾಗಿಂಗ್‌ಗೆ ಒಳಗಾದ. ಒಂದು ಮಧ್ಯಾಹ್ನ ಕುಡಿದು ಮತ್ತನಾದ ಸೇನಾ ಅಧಿಕಾರಿಯೋರ್ವ ಕಕ್ಕಸ್ಸಿನಲ್ಲಿ ವಾಂತಿ ಮಾಡಿ ಹಲ್ಲುಜ್ಜುವ ಬ್ರಷ್‌ನಿಂದ ಸ್ವಚ್ಛಗೊಳಿಸುವಂತೆ ಸ್ಯಾಷಾಗೆ ಆದೇಶಿಸಿದ.

"ನೀನು ಹಾಳಾಗಿ ಹೋಗು" ಎಂದು ಸ್ಯಾಷಾ ಮಾರ್ನುಡಿದ. ಒಂದು ತಿಂಗಳ ನಂತರ ಕಠಿಣದುಡಿಮೆಯ ಪಟಾಲಮಿನಲ್ಲಿದ್ದ ಆತ ವರಿಷ್ಠ ಸೈನಿಕರಿಂದ ಹೊಟ್ಟೆಯ ಮೇಲೆ ಮತ್ತು ಮರ್ಮಾಂಗಗಳ ಮೇಲೆ ನಿರ್ದಯವಾಗಿ ಒಡೆಯಲ್ಪಟ್ಟ, ಈ ಆಘಾತದಿಂದ ಆತ ಐದು ವಾರಗಳ ತನಕ ಸೈನಿಕ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆಗೊಳಗಾಗಬೇಕಾಯಿತು. ಅವನ ಬಿಡುಗಡೆಯಾಗುತ್ತಿದ್ದಂತೆಯೇ ಆ ಅಮಾನುಷ ಪೀಡೆ ಮತ್ತೆ ಆರಂಭವಾಯಿತು. ಇನ್ನೊಂದು ಸುತ್ತಿನ ಈ ಕ್ರೂರ ಸೈನಿಕಶಿಸ್ತಿಗೆ ತಾನು ಗುರಿಯಾದರೆ ತಾನು ಬದುಕಲಾರೆನೆಂದು ಸ್ಯಾಷಾ ತಿಳಿದ. ನವೆಂಬರ್ ೧೯೮೧, ಒಂದು ಚಳಿರಾತ್ರಿ ಈ ಯುವಕ ತನ್ನ ಕಾರ್ಯಾಲಯದ ಕಂಪೌಂಡಿನ ಬೇಲಿಯನ್ನು ಹತ್ತಿ, ದಾಟಿ, ಸಾಲಿಡ್ಯಾರಿಟಿಯ ಕಾರ್ಯಾಲಯಕ್ಕೆ ಬಂದ. ಪೋಲೆಂಡಿನಲ್ಲಿ ಸಾಲಿಡ್ಯಾರಿಟಿ

(ಒಗ್ಗಟ್ಟಿನ ಸಂಘ) 'ಕಮ್ಯೂನಿಸಂ' ಪ್ರಭಾವವನ್ನು ಪ್ರತಿಭಟಿಸುತ್ತಿತ್ತೆಂದು ಸ್ಯಾಷಾ ಮೊದಲೇ ತಿಳಿದಿದ್ದ. ಅವರಲ್ಲಿ ಯಾರಾದರೂ ತನಗೆ ಸಹಾಯಮಾಡಬಹುದೆಂದು ತಿಳಿದೇ ಆತ ಅಲ್ಲಿಗೆ ಬಂದಿದ್ದ.

ಸಾಲಿಡ್ಯಾರಿಟಿ ಸ್ಯಾಷಾ ನಿರುಪದ್ರವಕಾರಿಯೆಂದು ತಿಳಿದಕೂಡಲೆ ಅವನಿಗೆ ತನ್ನ ಸಂಘದ ಗುರುತುಚೀಟಿಯನ್ನು ನೀಡಿತು. ಹಾಗೆಯೇ ಅವನನ್ನು ವಾರ್ಸಾಕ್ಕೆ ಕರೆದುಕೊಂಡು ಬಂದು ಕೂಡಲೆ ಅವನನ್ನು ಯಾರಿಗೂಗೊತ್ತಾಗದೇ ಇದ್ದ ರೀತಿಯಲ್ಲಿ ರಷ್ಯಾಕ್ಕೆ ಕಳುಹಿಸುವ ಏರ್ಪಾಡಿನಲ್ಲಿ ತೊಡಗಿತು.

ಸ್ವಲ್ಪ ದಿನಗಳ ಬಳಿಕ ಅವರ ಯೋಜನೆ ನಾಟಕೀಯವಾಗಿ ಬದಲಾವಣೆಗೊಂಡಿತು. ಒಂದು ರವಿವಾರ ಬೆಳಿಗ್ಗೆ ಡಿಸೆಂಬರ್ ೧೩, ಆ್ಯನಾಳ ತಾಯಿ ಕ್ರೈಸ್ತ ಸಮಾಜದ ಧರ್ಮಪ್ರವಚನ ಕೇಳಲೆಂದು ರೇಡಿಯೋ ತಿರುಗಿಸಿದಳು. ಆದರೆ ಅವಳು, ಮನಸ್ಸಿಗೆ ಹಿತವನ್ನುಂಟುಮಾಡುವ ಧಾರ್ಮಿಕ ಪ್ರವಚನಕ್ಕೆ ಬದಲು ಸೇನಾನಾಯಕ—ಜೆರೆಜೆಲ್‌ಸ್ಕಿ—ಸಾಲಿಡ್ಯಾರಿಟಿ ಕಾನೂನು ಬಾಹಿರವಾಗಿ ನಡೆದುಕೊಂಡಿದ್ದರಿಂದ ರಾಜ್ಯಾದ್ಯಂತ ಲಷ್ಕರಿಶಾಸನ ಜಾರಿಗೊಳಿಸಿದ ಸಂಗತಿಯನ್ನು ಕೇಳಿದಳು.

ಈ ಮಾತನ್ನು ಕೇಳುತ್ತಿದ್ದಂತೆಯೇ ತಾನು ಸೈನ್ಯವ್ಯೂಹದಲ್ಲಿ ಸಿಕ್ಕಿಹಾಕಿಕೊಂಡೆನೆಂಬಂತೆ ಸ್ಯಾಷಾನ ಮುಖ ಬಿಳಿಚಿಕೊಂಡಿತು. 'ಪೋಲೆಂಡಿನಲ್ಲಿ ನೀವು ನನ್ನಿಂದ ತೊಂದರೆಗೊಳಗಾಗುತ್ತೀರಾ?' ಎಂದು ಆ್ಯನಾಳ ತಾಯಿಯನ್ನು ಕೇಳಿದ.

ಈ ಸುದ್ದಿಯಿಂದ ಆ್ಯನಾಳೂ ಜಾಗರೂಕಳಾಗಬೇಕಾಯಿತು. ಅವಳೂ ಈ ಪ್ರಕರಣದಲ್ಲಿ ಭಾಗಿಯಾಗಿದ್ದರಿಂದ ಯಾವ ಕ್ಷಣದಲ್ಲೂ ಅವಳು ಬಂಧಿಸಲ್ಪಡಬಹುದಿತ್ತು. ಅವರು ಸ್ಯಾಷಾನನ್ನು ನೋಡಿದ್ದರೆ ಅವನಿಗೆ ಸಹಾಯ ಮಾಡಿದ ಪ್ರತಿಯೊಬ್ಬರೂ ಅಪಾಯದ ದವಡೆಯಲ್ಲಿ ಸಿಲುಕುವರೆಂದು ಆ್ಯನಾ ಯೋಚಿಸಿದಳು. ಕೂಡಲೇ ಕಾರ್ಯತತ್ಪರಳಾಗುತ್ತಾ ಅವಳು ಸ್ಯಾಷಾನನ್ನು ಬೇರೊಂದು ಸುರಕ್ಷಿತ ಸ್ಥಳಕ್ಕೆ ಕಳುಹಿಸಲು ಏರ್ಪಾಟು ಮಾಡಿದಳು. ಅವನಿಗೆ ಶುಭ ಕೋರಲೂ ಸಾಕಷ್ಟು ಸಮಯವಿಲ್ಲದೆ ಆತುರತೆಯಲ್ಲಿ ಅವನನ್ನು ಸ್ಥಳಾಂತರಿಸಿದಳು.

"ನಿನ್ನ ಜವಾಬ್ದಾರಿಯನ್ನು ನೀನೇ ತೆಗೆದುಕೋ" ಎಂದು ಆ್ಯನಾ ಅವನಿಗೆ ನಿಷ್ಕಪಟವಾಗಿ ಹೇಳಿದಳು. ನೀವು ಮಾಡಿದ ಎಲ್ಲಾ ಉಪಕಾರಕ್ಕೆ ಅನಂತ ಕೃತಜ್ಞತೆಗಳೆಂದು ಹೇಳುತ್ತಾ ಸ್ಯಾಷಾ ಅಲ್ಲಿಂದ ಹೊರಟ.

ಇದಾದ ಎರಡು ವಾರಗಳ ಅನಂತರ ಪೋಲೀಸರು ವಾರ್ಸಾದಲ್ಲಿ ಆ್ಯನಾಳನ್ನು ಬಂಧಿಸಿದರು ಮತ್ತು ಅವಳ ಮನೆಯಲ್ಲಿರಬಹುದಾದ ಯಾವುದಾದರೂ ದಾಖಲೆಪತ್ರಗಳನ್ನು ಪರಿಶೋಧಿಸಲು ಅಧಿಕಾರಿಗಳನ್ನು ಕಳುಹಿಸಿದರು. ಆ ಅಧಿಕಾರಿಗಳು ಆ್ಯನಾಳ ಮನೆಯನ್ನು ಪ್ರವೇಶಿಸುವುದಕ್ಕೆ ಸ್ವಲ್ಪ ಮುಂಚೆ ಸ್ಯಾಷಾ ಮರೆತುಬಿಟ್ಟುಹೋಗಿದ್ದ ಕೆಲವು ಫೋಟೋಗಳನ್ನು ಆ್ಯನಾಳ ತಾಯಿ ಗಮನಿಸಿದಳು. ತತ್‌ಕ್ಷಣ ಆಕೆ ಅವನ್ನು ಬೆಂಕಿಗೆ ಎಸೆದಳು. ಪೋಲಿಸರು ಕೊಠಡಿಯಿಂದ ಕೊಠಡಿಗೆ ಹೋಗಿ ಹುಡುಕುವಷ್ಟರಲ್ಲಿ ಆ ಫೋಟೋಗಳು ಒಲೆಯಲ್ಲಿ ಸುಟ್ಟು ಬೂದಿಯಾಗಿದ್ದವು.

ಕಲಾವಿದೆ

ಮಮ್ಮಿ ಬೇಗ ಬನ್ನಿ. "ಚೆಕ್ಕ ತೊಂದರೆಗೊಳಗಾಗಿದೆ" ಈ ಮಾತನ್ನು ದೂರವಾಣಿ ಮೂಲಕ ಮಗಳಿಂದ ಕೇಳಿ, ರಿಸೀವರನ್ನು ಕೆಳಗಿಡುತ್ತಿದ್ದಂತೆ ಜೋಲಿನಾ ವಾಡೋಸ್ಕಿ ಯಾವುದೋ ತೊಂದರೆಗೊಳಗಾದಂತೆ ಕಂಡುಬಂದಳು. ಕೆಲವು ತಿಂಗಳುಗಳಿಂದ ತಾನು ಯೋಜಿಸಿದ ಕಾರ್ಯತಂತ್ರ ಮಾರಕ ಪರಿಣಾಮದತ್ತ ತಿರುಗಿದ್ದಕ್ಕೆ ಆಕೆ ವ್ಯಾಕುಲಿತಳಾದಳು.

ದಿನದಿಂದ ದಿನಕ್ಕೆ ಸ್ಯಾಷಾನ ಕುರಿತಾದ ಹುಡುಕಾಟ ಮತ್ತು ಸ್ಥಳಪರಿಶೀಲನೆ ಜೋರಾಗಿ ನಡೆಯತೊಡಗಿತು. ಎಲ್ಲಾ ಕಡೆಗೂ ವ್ಯಾಪಿಸಿದ ಸೈನ್ಯದ ದಂಡು ಹಾಗೂ ರಹಸ್ಯ ಪೋಲಿಸ್ ದಳದ ವರ್ತನೆಯಲ್ಲಿ ಸಾರ್ವಜನಿಕರೆಲ್ಲರೂ ಭಯದ ವಾತಾವರಣವನ್ನು ಕಂಡರು. ಅವರಿರುವ ಸ್ಥಳಗಳಲ್ಲಿ ಕಟ್ಟುನಿಟ್ಟಿನ ನಿಷೇಧಾಜ್ಞೆ ಜಾರಿಗೆ ಬಂದಿತು. ನಿಗದಿತ ಸಹಕಾರಿ ಸಂಘಗಳಲ್ಲಿ ಮಾತ್ರ ಆಹಾರ ದೊರೆಯತೊಡಗಿದವು. ದೂರವಾಣಿ ನಿಷೇಧಿಸಲ್ಪಟ್ಟಿತು. ಸಾಲಿಡ್ಯಾರಿಟಿಯ ಸಾವಿರಾರು ಸದಸ್ಯರು ಬಂಧನಕ್ಕೊಳಗಾದರು.

ಈ ಪತ್ತೆದಾರಿಕೆಯಿಂದ ತಪ್ಪಿಸಿಕೊಳ್ಳಲು ಜೋಲಿನಾ ಸ್ಯಾಷಾನಿಗೆ 'ಚೆಕ್ಕ' ಎಂದು ನಾಮಕರಣ ಮಾಡಿದಳು. ಈ ಕಾರ್ಯನಿಯೋಜನೆಯಿಂದಾಗಿ ಆಕೆ ತನ್ನ ತಂದೆ-ತಾಯಿಯರೊಡನೆ ದೂರವಾಣಿಯಲ್ಲಿ ಮುಕ್ತವಾಗಿ ಮಾತನಾಡಬಹುದಾಗಿತ್ತು.

ಜೋಲಿನಾಳು ವಾರ್ಸಾ ಪಟ್ಟಣದಲ್ಲಿ ಮಹಡಿಯೊಂದರಲ್ಲಿ ಚಿತ್ರಕಾರನಾದ ತನ್ನ ಗಂಡ ರಿಚರ್ಡ್ ಹಾಗೂ ನಾಲ್ಕು ವರ್ಷದ ಮಗ ಅಲೆಗ್ಸಾಂಡರ್‌ನೊಡನೆ ವಾಸಿಸುತ್ತಿದ್ದಳು. ಜೋಲಿನಾಳ ಕುಟುಂಬದ ಪ್ರತಿಯೊಬ್ಬರಿಗೂ ಸ್ಯಾಷಾ ಎಲ್ಲಿಯವನು ಮತ್ತು ಎಲ್ಲಿಗೆ ಆತ ಸಾಗಿಸಲ್ಪಡಬೇಕು ಎಂಬ ವಿಚಾರ ಮಾತ್ರ ಗೊತ್ತಿತ್ತು. ಇದರ ಹೊರತಾಗಿ ಬೇರೆ ಏನೂ ಅವರಿಗೆ ತಿಳಿದಿರಲಿಲ್ಲ.

ಸುಮಾರು ಮೂರು ತಿಂಗಳಿಂದ ಅವರ ಮನೆಯಲ್ಲಿ ವಾಸವಾಗಿದ್ದ ಸ್ಯಾಷಾ ಅವರಿಗೆ ಚೆನ್ನಾಗಿ ಹೊಂದಿಕೊಂಡಿದ್ದ. ಜೋಲಿನಾಳಿಗೆ ಕೆಲಸದಲ್ಲಿ ನೆರವಾದ. ಅವಳಿಗೋಸ್ಕರ ಈಸ್ಟರ್ ಎಗ್ ಮೇಲೆ ಸ್ಯಾಲಿಡಾರಿಟಿಯ ಧ್ಯೇಯವಚನವನ್ನು ಬರೆದುಕೊಟ್ಟ. ಕಾರ್ಯಾಲಯದಲ್ಲಿ ರಿಚರ್ಡ್‌ನಿಗೆ ಒಬ್ಬ ಸಹಾಯಕನಂತೆ ಉತ್ತಮ ಸೇವೆ ಸಲ್ಲಿಸಿದ. ಕ್ರಮವಾಗಿ ಅವನ ನಿಯತಕ್ರಮ ಕೆಲಸದಿಂದ ಅವನಲ್ಲಿ ಹುದುಗಿದ್ದ ಭಯ ದೂರವಾಯಿತು.

ಕ್ರಿಸ್ತನ ಪುನರುತ್ಥಾನದ ಹಬ್ಬ ಕಳೆದ ಒಂದು ದಿನ ಪೋಲಿಸ್ ತುಕಡಿಯೊಂದು ಮನೆ ಮನೆ ಶೋಧಿಸುತ್ತಾ ಬರುತ್ತಿರುವ ಸಂಗತಿ ಜೋಲಿನಾಳಿಗೆ ತಿಳಿಯಿತು. ಕೂಡಲೆ ಆಕೆ ತಾಯಿಗೆ ಫೋನ್ ಮಾಡಿ 'ಚೆಕ್ಕ'ನ್ನು ಕರೆದುಕೊಂಡು ಹೋಗೆಂದು ತಿಳಿಸಿದಳು. ಜೋಲಿನಾಳ ತಂದೆ ಕೂಡಲೆ ಕಾರಲ್ಲಿ ಬಂದು ಅವನನ್ನು ಕರೆದುಕೊಂಡು ಹೋಗಿ ವಾರ್ಸಾದ ಒಂದು ಚಿಕ್ಕ ಮನೆಯಲ್ಲಿ ಇರಿಸಿದ. ಸ್ಯಾಷಾನ ಭಯ ಮತ್ತೆ ಆರಂಭವಾಯಿತು.

ಯೋಜಕ

ಅಂದ್ರೆ ಚೇಸಿಲಿನ್ ಹೊರಗೆ ಹೋಗಲು ಸಿದ್ಧವಾಗುತ್ತಿದ್ದಾಗ ಹೊರಗೆ

ಯಾರೋ ಬಾಗಿಲು ಬಡಿದ ಸದ್ದಾಯಿತು. "ಯಾರಿಷ್ಟು ಬೇಗ" ಎನ್ನುತ್ತಾ ಬಾಗಿಲು ತೆರೆದ. ಪದೆ ಪದೆ ಹೆದರಿಕೊಳ್ಳುತ್ತಿದ್ದ, ಧೈರ್ಯಗುಂದಿದ್ದ, ಡಾಡಿಯುಳ್ಳ ಯುವಕನೋರ್ವ ತಲೆತಪ್ಪಿಸಿಕೊಂಡ ಕೈದಿಯ ತರಹ ಅಲ್ಲಿ ಬಂದು ನಿಂತಿದ್ದ. ಆ ಯುವಕ ಪೂರ್ವ ಪೋಲೆಂಡಿಂದ ಬಂದವನೆಂದು ಅವನ ಗುರುತುಚೀಟಿ ಹೇಳಿತು.

ಸ್ವಿಡಿಷ್‌ನ ಸಂಪರ್ಕ ವಿಭಾಗವೊಂದರಲ್ಲಿ 'ಪೊಲಿಶ್' ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಜೇಸಿಅನ್ ಎರಡು ಅಂತಸ್ತಿನ ಮಹಡಿ ಮನೆಯನ್ನು ಹೊಂದಿದ್ದ. ಅದು ವಾರ್ಸಾದ ಪ್ರತಿಷ್ಠಿತ ರಸ್ತೆಯಲ್ಲಿತ್ತು. ಅವನಿಗೆ ರಾಜಕೀಯದಲ್ಲಿ ಆಸಕ್ತಿಯಿರಲಿಲ್ಲವಾಗಿತ್ತು. ರಾಜಕೀಯದ ಯಾವುದೇ ಸಿಕ್ಕುಗಳೂ ಅವನಿಗೆ ಬೇಕಾಗಿರಲಿಲ್ಲವಾಗಿತ್ತು. ಆದರೆ ಜೂನ್ ೧೯೮೪ರಲ್ಲಿ ಸಾಲಿಡ್ಯಾರಿಟಿ ಸಂಪರ್ಕ ಅವನನ್ನು ಸಹಾಯಕ್ಕಾಗಿ ಕೇಳಿಕೊಂಡಾಗ ಅವನು ಹಿಂಜರಿಯಲಿಲ್ಲ.

ಆಗ ಲಷ್ಕರಿ ಶಾಸನ ರದ್ದುಗೊಂಡಿತ್ತು. ಆದರೆ ಆ ಶಾಸನ ಸ್ಯಾಷಾನ ತಲೆಯ ಮೇಲೆ ತೂಗುತ್ತಿರುವ ಕತ್ತಿಯೇ ಆಗಿತ್ತು. ಅದಕ್ಕಾಗಿ ಜೇಸಿಅನ್ ಫೋನಲ್ಲಿ ಮಾತನಾಡುವಾಗ ಜಾಗರೂಕವಾಗಿರುತ್ತಿದ್ದ. ಬಾಗಿಲಿಗೆ ಸಾಂಕೇತಿಕ ಬಡಿತವನ್ನು ಕೇಳದೆ ಬಾಗಿಲು ತೆರೆಯುತ್ತಿರಲಿಲ್ಲ. ಹೊರಗೆ ಹೆಚ್ಚು ಹೋಗುತ್ತಿರಲಿಲ್ಲ.

ಜೇಸಿಅನ್ ಸಹಜವಾಗಿಯೇ ಕಿಟಕಿಯಿಂದ ಸ್ಯಾಷಾನನ್ನು ಗಮನಿಸುತ್ತಿದ್ದ. ಫೋನ್ ಕೂಗಿದಾಗ ಸ್ಯಾಷಾ ಗಾಬರಿಗೊಳ್ಳುತ್ತಿದ್ದ. ಹತ್ತಿರದಲ್ಲಿ ಪಿಸುಗುಟ್ಟುವವನಂತೆ ವರ್ತಿಸುತ್ತಿದ್ದ.

ಒಂದು ಸಂಜೆ ಜೇಸಿಅನ್ ವಾರದ ಕೊನೆಯಲ್ಲಿ ಊರ ಹೊರಗೆ ಹೋಗುವುದಾಗಿ ಹೇಳಿದ. ಅಂತೆಯೇ ಒಂದು ಶುಕ್ರವಾರ ಜೇಸಿಅನ್, ಅವನ ಹೆಂಡತಿ ಎಲಿಝಬೆತ್, ಮಗ, ಮಗಳು ಮತ್ತು ಸ್ಯಾಷಾ ವಾರ್ಸಾದ ಉತ್ತರ ಭಾಗದಲ್ಲಿರುವ ಸರೋವರಕ್ಕೆ ಕ್ಯಾಂಪ್ ಹಾಕಿದರು. ತಮ್ಮ ಗಮ್ಯಸ್ಥಾನವನ್ನು ತಲುಪಲು ತಾಳ್ಮೆಯಿಲ್ಲದ ಜೇಸಿಅನ್ ಪ್ರಯಾಣ ಮಾಡುತ್ತಾ ತನಗೆ ಪ್ರತಿಬಂಧಕವಾಗಿದ್ದ ಕಾರೊಂದನ್ನು ಹಠಾತ್ತಾಗಿ ಹಿಂದೆ ಹಾಕಿದ. ಆ ಕಾರಿನಲ್ಲಿದ್ದಾತ, ಡ್ರೈವರ್ ಕೂತಸ್ಥಳಕ್ಕೆ ಮಾತ್ರ ಕಾಣುವಂತೆ ನೀಲಿಬೆಳಕನ್ನು ಬಿಟ್ಟು ಜೇಸಿಅನ್‌ಗೆ ನಿಲ್ಲುವಂತೆ ಹೇಳಿದ. ಸಮವಸ್ತ್ರದಲ್ಲಿಲ್ಲದ ಪೋಲಿಸೊಬ್ಬ ರೋಷಾವಿಷ್ಟನಾಗಿ ಕಾರ್ ಕಿಟಕಿಯ ಹತ್ತಿರಬಂದು ಎಲ್ಲಿ ನಿನ್ನ ಕಾಗದ ಪತ್ರಗಳು" ಎಂದು ಜೇಸಿಅನ್ನನನ್ನು ಕೇಳಿದ. ಹಿಂದಿನ ಆಸನದಲ್ಲಿ ಅಂಜಿಕೆಯಿಂದಿದ್ದ ಸ್ಯಾಷಾನೊಡನೆ ಕೂತಿದ್ದ ಎಲಿಝಬೆತ್‌ಳು ತೀಕ್ಷ್ಣವಾಗಿ ಯೋಚಿಸುತ್ತಿದ್ದ ತನ್ನ ಗಂಡ ಪೋಲೀಸ್‌ಗೆ ಏನಾದರೂ ಪ್ರತಿಕೂಲ ಮಾತುಗಳನ್ನಾಡಿ ತೊಂದರೆ ತಂದುಕೊಂಡಬಿಟ್ಟಾನೆಂದು ಹೆದರಿ, ಕೂಡಲೆ ಆ ಅಧಿಕಾರಿಗೆ "ಕ್ಷಮಿಸಿ" ಎಂದು ಕೇಳಿಕೊಂಡಳು. ಇಂತಹ ವಾಹನಗಳ ಓಡಾಟದಲ್ಲಿ ತನ್ನ ಗಂಡ ಅಸಾಧ್ಯವಾಗಿ ನಡೆದುಕೊಳ್ಳುವನೆಂದೂ ಇನ್ನುಮುಂದೆ ಅವನ ಮೇಲೆ ಒಂದು ಕಣ್ಣಿಟ್ಟಿರುವೆನೆಂದೂ ಅವನಿಗೆ ಭರವಸೆ ನೀಡಿ ಮುಂದೆ ಹೋಗಲು ಅವನಿಂದ ಅನುಮತಿ ಪಡೆದಳು.

ವಾರ್ಸಾಕ್ಕೆ ಹಿಂದಿರುಗಿದ ಮೇಲೆ ಸ್ಯಾಷಾ ಇಂತಹ ಉದ್ರಿಕ್ತವಾತಾವರಣದಲ್ಲಿ ತನಗೆ

ಆಶ್ರಯ ನೀಡಿದ ಜೇಸಿಅನ್‌ಗೆ ಕೃತಜ್ಞತೆ ಸಲ್ಲಿಸಿ ಒಂದು ವಾರದ ನಂತರ ಬೇರೆಡೆ ಹೊರಟುಹೋದ.

ಇದಾದ ಮೇಲೆ ಒಂದು ದಿನ ವಾರದ ಕೊನೆಯಲ್ಲಿ ಜೇಸಿಅನ್, ಫುಟ್‌ಬಾಲ್ ಆಟಗಾರರ ತಂಡದಲ್ಲಿ ತನ್ನ ಸಹ ಆಟಗಾರನಾಗಿರುವ ಒಬ್ಬನನ್ನು ಕೊನೆಯ ಆಟವನ್ನು ಯಾಕೆ ತಪ್ಪಿಸಿಕೊಂಡೆಯೆಂದು ಕೇಳಿದ. "ತಲೆಮರೆಸಿಕೊಂಡಿದ್ದ ಆ ರಷ್ಯನ್ ಸೈನಿಕನನ್ನು ಹುಡುಕುವುದರಲ್ಲಿ ಮನಸ್ಸು ನೆಟ್ಟಿರುವುದರಿಂದ" ಎಂದು ಆತ ಕೋಪದಿಂದ ಹೇಳಿದ.

ಅವನಾರು? ಹೇಗಿದ್ದಾನೆ? ಅವನ ಫೋಟೋ ಮುಂತಾದವುಗಳೇನಾದರು ನಿಮ್ಮ ಬಳಿಯಿವೆಯೇ?" ಎಂದು ಜೇಸಿಅನ್ ಕೇಳಿದ.

"ಖಂಡಿತವಾಗಿಯೂ, ಕೆಲವೊಮ್ಮೆ ಆತ ಗಡ್ಡಧಾರಿಯಾಗಿ, ಇನ್ನೊಮ್ಮೆ ಗಡ್ಡವಿಲ್ಲದವನಾಗಿ ಕಾಣಿಸಿಕೊಳ್ಳುತ್ತಾನೆ. ಅವನು ವಾರ್ಸಾದಲ್ಲಿಯೇ ಎಲ್ಲಿಯೋ ಅಡಗಿಕೊಂಡಿದ್ದಾನೆ." ಎಂದರು ಅವನ ಗೆಳೆಯರು. ಜೇಸಿಅನ್ ಕೇವಲ ಮುಗುಳ್ನಕ್ಕ.

ಅದೊಂದು ಸೆಪ್ಟೆಂಬರ್ ಬೆಳಗ್ಗೆ ಅಂಡ್ರೆಜೆರಫ್ ಮ್ಯಾಖಲ್‌ಸ್ಕಿಗೆ ಫೋನ್ ಕರೆಬಂತು. ಅವನ ಗೆಳೆಯ ನೋರ್ವ ಡೌನ್ ಟೌನ್ ಕೆಫೆಯಲ್ಲಿ ಕೂಡಲೆ ಭೇಟಿಯಾಗುವಂತೆ ತಿಳಿಸಿದ್ದ. ಅಂಡ್ರೆಜೆರಫ್ ತಲೆಮರೆಸಿಕೊಂಡಿದ್ದ ರಷ್ಯನ್ ಸೈನಿಕನೋರ್ವ 'ನನ್ನ ಬಳಿಯಿದ್ದಾನೆ ಅವನಿಗೆ ಉಳಿಯಲು ತುರ್ತು ಒಂದು ಸ್ಥಳಬೇಕಾಗಿದೆ. ಕೆಲವು ದಿನಗಳಿಂದ ಆತ ಹೆಣ್ಣುಮಗಳ ಕೊಠಡಿಯೊಂದರಲ್ಲಿ ವಾಸಿಸುತ್ತಿದ್ದಾನೆ. ಇದರಿಂದ ಅವಳಿಗೆ ತೊಂದರೆಯಾಗಿದ್ದು, ನಾವು ಬೇಗ ಅವನನ್ನು ಬೇರೆಡೆ ಇರಿಸದಿದ್ದರೆ ಅವಳೇ ಅವನನ್ನು ಹೊರಹಾಕುತ್ತಾಳೆ' ಎಂದು ಮ್ಯಾಖಲ್‌ಸ್ಕಿಗೆ ಸ್ಪಷ್ಟಪಡಿಸಿದ್ದ.

"ಆದರೆ ಹೇಗೆ?" ಎಂದು ಮ್ಯಾಖಲ್‌ಸ್ಕಿ ಯೋಚಿಸಿದ. ಒಂದು ವರ್ಷದ ಕೆಳಗಷ್ಟೇ ಸಾಲಿಡ್ಯಾರಿಟಿಯ ಚಟುವಟಿಕೆದಾರರು ಬಿಡುಗಡೆ ಹೊಂದಿದ್ದರು. ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗಿದ್ದ ಮ್ಯಾಖಲ್‌ಸ್ಕಿ ಸ್ಯಾಷಾನನ್ನು ರಕ್ಷಿಸುವುದು ತನ್ನ ಕರ್ತವ್ಯವೆಂದು ತಿಳಿದ. ಇತ್ತೀಚೆಗೆ ರಾಜಕೀಯ ಸೆರೆಯಾಳಾಗಿ ಬಿಡುಗಡೆ ಹೊಂದಿದ್ದ ಮ್ಯಾಖಲ್‌ಸ್ಕಿ ಪೋಲೀಸರ ಕಣ್ಗಾವಲಿನ ಪಟ್ಟಿಯಲ್ಲಿ ಇದ್ದ. ಹಾಗಾಗಿ ಅವನ ಸ್ವಂತ ಮನೆಯಲ್ಲಿ ಸ್ಯಾಷಾನಿಗೆ ತಾವಿಲ್ಲವಾಯಿತು. ಆದರೆ ಮ್ಯಾಖಲ್‌ಸ್ಕಿಯ ಗೆಳೆಯನ ತಾಯಿಯ ಮನೆಯ ಕೊಠಡಿಯೊಂದರಲ್ಲಿ ಉಳಿಯಲು ಅವಕಾಶವಾಯಿತು. ಆಕೆ ಮಾಜಿ ಉಪಮಂತ್ರಿಯಾಗಿರುವುದರೊಂದಿಗೆ ರಹಸ್ಯ ಪೋಲೀಸ್ ದಳದ ಮುಖ್ಯಸ್ಥನ ಹೆಂಡತಿಯಾಗಿದ್ದಳು. ಕೆಲವು ದಿನಗಳ ಹಿಂದೆ ಗಂಡನನ್ನು ಕಳೆದುಕೊಂಡಿದ್ದಳು. ರಷ್ಯನ್ ಯೋಧನನ್ನು ಉಳಿಸಿಕೊಳ್ಳಲು ಆಕೆಗೆ ಇಷ್ಟ ಇಲ್ಲವಾಗಿತ್ತು. ಆದರೆ ಅವಳ ಮಗ —ಅಮ್ಮಾ, ಇವನಿಗೆ ರಕ್ಷಣೆ ನೀಡುವುದು ಕಮ್ಯೂನಿಸಂನ ವಿಜಯಕ್ಕೋಸ್ಕರ ಈ ಎಲ್ಲಾ ವರ್ಷ ನೀ ಮಾಡಿದ ಕೆಲಸದ ತಪ್ಪಿನ ಫಲವೆಂದು ತಿಳಿ" ಎಂದು ಹೇಳಿ ಆಕೆಯನ್ನು ಒಪ್ಪಿಸಿದ್ದ.

ಸ್ಯಾಷಾನನ್ನು ಸುರಕ್ಷಿತವಾಗಿರಿಸಲು ಅವನಿಗೋಸ್ಕರ ಮ್ಯಾಖಲ್‌ಸ್ಕಿ ತನಗೆ ಗೊತ್ತಿರುವ ಎಲ್ಲಾ ಗೆಳೆಯರನ್ನೂ ಭೇಟಿಯಾದ. ಸುಮಾರು ಇಪ್ಪತ್ತು ಗೆಳೆಯರನ್ನು

ಭೇಟಿಯಾದರೂ ಸ್ಯಾಷಾನಿಗೆ ಆಶ್ರಯ ನೀಡಲು ಯಾರೂ ಮುಂದಾಗಲಿಲ್ಲ. ಈ ಮಧ್ಯದಲ್ಲಿ ಸ್ಯಾಷಾನನ್ನು ಹಿಡಿಯಲು ಸೋವಿಯತ್ ರಾಯಭಾರಿ ಪೋಲೆಂಡ್ ಸರಕಾರಕ್ಕೆ ವಿಶೇಷ ಒತ್ತಡ ತಂದಿರುವುದನ್ನು ಮ್ಯಾಖಲ್‌ಸ್ಕಿ ಗಮನಿಸಿದ್ದ.

"ಸ್ಯಾಷಾನನ್ನು ಉಳಿಸಿಕೊಳ್ಳಲು ಎಷ್ಟು ದಿನಗಳವರೆಗೆ, ಯಾರನ್ನು ಅಂತ, ಎಷ್ಟು ಕೇಳಲಿ" ಎಂದು ಮ್ಯಾಖಲ್‌ಸ್ಕಿ ತನ್ನೊಳಗೆ ತಾನೇ ಅಂದುಕೊಂಡ. ಇಷ್ಟರಲ್ಲೆ ಅವನ ತಾಳ್ಮೆ ಕುಸಿಯತೊಡಗಿತ್ತು. ಪ್ರತಿಯೊಂದು ಹೊಸ ವಿಳಾಸಕ್ಕೂ ಯತ್ನಿಸಿದ್ದ. ಎಲ್ಲೆಡೆಯಿಂದಲೂ ನಿರಾಕೃತ ಉತ್ತರವೇ ಬಂದಿತ್ತು. ಒಂದುಸಲ ಸ್ಯಾಷಾನನ್ನು ಕರೆದುಕೊಂಡು ಹೋಗಲು ಎಲ್ಲಿಯೂ ಸ್ಥಳ ದೊರೆಯದಾದಾಗ ಮ್ಯಾಖಲ್‌ಸ್ಕಿ ಹಾಗೂ ಸ್ಯಾಷಾ ಮ್ಯಾಖಲ್‌ಸ್ಕಿಯ ಕಾರಿನಲ್ಲೇ ಸಮಯ ಕಳೆದಿದ್ದರು. ಆ ಕಾರಿದ್ದ ಜಾಗವಾದರೂ ಎಂತಹದ್ದು ? ಹಿಮ ಬೀಳುತ್ತಿರುವ ಜನರಹಿತ ರಸ್ತೆ ಅದಾಗಿತ್ತು. "ಇದೇ ಎಲ್ಲದಕ್ಕಿಂತ ಸುರಕ್ಷಿತವಾದ ಜಾಗವೆಂದು" ಮ್ಯಾಖಲ್‌ಸ್ಕಿ ಒಮ್ಮೊಮ್ಮೆ ಯೋಚಿಸುತ್ತಿದ್ದ.

ಅರಣ್ಯಾಧಿಕಾರಿ

ಸೇನಾನಾಯಕ ಬಾಗುಸ್ಲಾ ಸ್ವ್ಯಾಚುರ್ ಪ್ರತಿದಿನ ಬೆಳಗ್ಗೆ ಕಾಡುಹಂದಿಯ ಬೇಟೆಗಾಗಿ ಕ್ಯಾಂಡಿನಸ್ ಅಡವಿಯ ಮಾರ್ಗವಾಗಿ ಪಾದಚಾರಿಯಾಗಿಯೇ ಬರುತ್ತಿದ್ದ. ಅಡವಿಗೆ ಬಂದ ಆತ ಅಲ್ಲಿರುವ ಯುರ್ಸುಜುಲಾ ಬಡಾಕ್‌ಳ ಹೋಟೆಲ್‌ಗೆ ಭೇಟಿಕೊಡದೆ ಹೋಗುತ್ತಿರಲಿಲ್ಲ. ಅಂದು ಸ್ವ್ಯಾಚುರಾ, ಸಿಕ್ಕಿದರೆ ಮನುಷ್ಯರನ್ನೇ ತಿಂದುಬಿಡುವಷ್ಟು ಹಸಿವೆಯಿಂದ ಯುರ್ಸುಜುಲಾ ಬಡಾಕಳ ಮೇಜಿನ ಬಳಿ ಬಂದು ಕೂತಿದ್ದ. ಈ ಅರಣ್ಯಾಧಿಕಾರಿ ಹಾಗೂ ಅವನ ಗೆಳೆಯರ ಮಧ್ಯದಲ್ಲಿ ಯುರ್ಸುಜುಲಾ ತನ್ನ ಅಡುಗೆ ಹಾಗೂ ಔದಾರ್ಯದಲ್ಲಿ ಪ್ರಖ್ಯಾತಳಾಗಿದ್ದಳು.

ಉತ್ತರದ ವಾರ್ಸಾದಲ್ಲಿ ಅಡಿವಿಯಿಂದ ಸುಮಾರು ೬೦ ಕಿ.ಮೀ. ಅಂತರದಲ್ಲಿ ಮರದ ಚಿಕ್ಕ ಮನೆಯೊಂದರಲ್ಲಿ ಹಲವು ವರ್ಷಗಳಿಂದ ಯುರ್ಸುಜುಲಾ ತನ್ನ ಗಂಡ ಆ್ಯಡಮ್ ಮತ್ತು ಇಬ್ಬರು ಹೆಣ್ಣು ಮಕ್ಕಳೊಂದಿಗೆ ವಾಸವಾಗಿದ್ದಳು. ತನ್ನ ಗಂಡನ ಸಲಹೆಮೇರೆಗೆ ಸರಕಾರಿ ವರಿಷ್ಠಾಧಿಕಾರಿಗಳಿಗೆ ಯುರ್ಸುಜುಲಾ ರುಚಿರುಚಿಯಾದ ಅಡುಗೆ ಮಾಡಿ ಹಾಕುತ್ತಿದ್ದಳು.

ಪೋಲೆಂಡಿನ ಉನ್ನತಾಧಿಕಾರಿಗಳು ಯುರ್ಸುಜುಲಾಳ ಕೋಳಿ ಸಾರಿನೊಂದಿಗೆ ರುಚಿಕರವಾದ ಊಟ ಮಾಡುತ್ತಿರುವಾಗ ಈ ರಷ್ಯನ್ ಸೈನಿಕ. ಅಲ್ಲಿಯೇ ಇದ್ದ ಚಿಕ್ಕ ಹಾಸಿಗೆಯ ಮೂಲೆಯೊಂದರಲ್ಲಿ ಕೂತು ಪುಸ್ತಕ ಓದುತ್ತಾ ಮೂರು ವರ್ಷ ಕಳೆದಿದ್ದ.

ಸ್ಯಾಷಾ ಈಗ 'ಜ್ಯಾಸೆಕ್' ಎಂದು ನಾಮಾಂತರವನ್ನು ಹೊಂದಿದ್ದ. ಅವನ ಉಚ್ಚಾರಣೆ ರಷ್ಯನ್ ಎನ್ನುವುದನ್ನು ಸೂಚಿಸುತ್ತಿದ್ದುದರಿಂದ ಯುರ್ಸುಜುಲಾ ತನ್ನ ಹೋಟೆಲ್‌ಗೆ ಬರುವ ಜನರಿಗೆ ಆತ ತನ್ನ ದೂರದ ಸಂಬಂಧಿಯೆಂದು ಪರಿಚಯಿಸುತ್ತಿದ್ದಳು.

ಸ್ಯಾಷಾ ತನ್ನ ಹೊಸ ಪೋಷಕ ಕುಟುಂಬದೊಂದಿಗೆ ಸಲುಗೆಯಿಂದಿದ್ದ. ಅವರ

ಎಲ್ಲ ಕೆಲಸಗಳಲ್ಲಿ ಸಹಕರಿಸುತ್ತಿದ್ದ. ಅವರುಣ್ಣುವುದನ್ನು ಹಂಚಿಕೊಳ್ಳುತ್ತಿದ್ದ. ಒಮ್ಮೆ 'ಜ್ಯಾಸೆಕ್' ಅವರೊಂದಿಗೆ ಕ್ರಿಸ್‌ಮಸ್ ಹಬ್ಬವನ್ನು ಆಚರಿಸಿದ.

ಡಿಸೆಂಬರ್ ಇಪ್ಪತ್ನಾಲ್ಕರ ಮುಂಜಾವಿನಲ್ಲಿ ಸೂರ್ಯನ ಹೊಂಗಿರಣ ಸುತ್ತೆಲ್ಲಾ ಹರಡುತ್ತಿದ್ದಂತೆ ಆ್ಯಡಮ್ "ಕ್ರಿಸ್‌ಮಸ್ ವೃಕ್ಷವನ್ನು" ಹೊರತೆಗೆಯುವುದನ್ನು ಸ್ಯಾಷಾ ಗಮನಿಸಿದ. ಅಂತೆಯೇ ಅವನ ಮಕ್ಕಳೂ ಕ್ರಿಸ್‌ಮಸ್ ವೃಕ್ಷವನ್ನು ಅಲಂಕರಿಸುವುದಕ್ಕೆ ಮನೆಯಲ್ಲಿ ತಯಾರಾದ ಆಭರಣದ ಪೆಟ್ಟಿಗೆಯನ್ನು ತೆರೆದರು. ಚಳಿ ಗಾಢವಾಗುತ್ತಿದ್ದಂತೆ ಆ ಹೆಣ್ಣು ಮಕ್ಕಳಿಗೆ ಸ್ಯಾಷಾ ಕಥೆ ಹೇಳಿ ಸಂತೋಷಪಡಿಸಿದ.

ಊಟಕ್ಕೆ ಮೊದಲು ಎಲ್ಲರೂ ವೃಕ್ಷವ ಬಳಿ ಸೇರಿದರು. ಆ್ಯಡಮ್ ತನ್ನ ಕುಟುಂಬವನ್ನು ಪ್ರಾರ್ಥನೆಯಲ್ಲಿ ತೊಡಗಿಸುವುದಕ್ಕೆ ಮೊಣಕಾಲೂರಿದ. ಸ್ಯಾಷನೂ ಪ್ರಾರ್ಥನೆಯನ್ನು ನಿಧಾನವಾಗಿ, ಆದರೆ ಪ್ರಾಮಾಣಿಕವಾಗಿ ಗಟ್ಟಿಯಾಗಿ ಹೇಳಿದ. "ಸ್ವರ್ಗದಲ್ಲಿರುವ ಓ ನನ್ನ ತಂದೆಯೇ"....ಆಮೇಲೆ ಆ್ಯಡಮ್ ಗ್ರಾಮ ಪುರೋಹಿತರಿಂದ ಕೊಡಲ್ಪಟ್ಟ ಪವಿತ್ರ ಬ್ರೆಡ್ಡನ್ನು ಎಲ್ಲರಿಗೂ ಹಂಚಿದ.

ಊಟದ ತರುವಾಯ ಉಡುಗೊರೆ ಹಂಚುವುದು ಆರಂಭವಾಯಿತು. ಉಡುಗೊರೆಯೊಂದು ತನ್ನ ಕೈಗೂ ಬಂದಾಗ ಸ್ಯಾಷ ಆಶ್ಚರ್ಯದಿಂದ "ತನಗೂ ಉಡುಗೊರೆಯೇ" ಎಂದು ತೊದಲಿದ. ಸ್ಯಾಷಾ ಅದನ್ನು ತೆರೆದು ನೋಡಿದ. ಅದರಲ್ಲಿ ಒಂದು ಸಿಗರೇಟ್ ಸ್ಯಾಕ್ ಹಾಗೂ ಕಾಫಿ ಬೀಜಗಳ ಚೀಲವೊಂದಿತ್ತು. ಸ್ಯಾಷಾ ಆಶ್ಚರ್ಯಗೊಂಡ. ಬಡಾಕಳ ಕುಟುಂಬದವರೇನೂ ಶ್ರೀಮಂತರಾಗಿರಲಿಲ್ಲ. ತಮ್ಮಲ್ಲಿರುವಷ್ಟರಲ್ಲೇ ಶಕ್ತ್ಯಾನುಸಾರ ಉಡುಗೊರೆ ನೀಡಿದ್ದರು. ತುಂಬಿದ ಕಣ್ಣೀರಿನಿಂದ ಭಾವುಕನಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿದ. ತನಗಾಗಿ ಅವರು ತೆಗೆದುಕೊಂಡ ಗಂಡಾಂತರವನ್ನು, ಮನೆಯಲ್ಲಿ ತನಗೆ ಕೊಟ್ಟ ಸ್ವಾತಂತ್ರ್ಯವನ್ನು, ತನಗಾಗಿ ಎಂತಹ ಉಪಕಾರವನ್ನು ಮಾಡಲು ಸಿದ್ಧರಾದ ಅವರ ಔದಾರ್ಯ ಮುಂತಾದವುಗಳನ್ನು ಸ್ಯಾಷಾ ಮನಸಾ ಸ್ಮರಿಸಿಕೊಂಡ. ಬರುವ ಅಳುವನ್ನು ಹೇಗೊ ತಡೆದುಕೊಂಡು ಅವರ ಮುಂದೆ ನಗುವನ್ನು ಪ್ರಕಟಿಸಿದ. ಅನಂತರ ವೃಕ್ಷದ ಸುತ್ತ ಹರ್ಷಗೀತೆಯನ್ನು ಹಾಡುತ್ತಾ ಅವರ ಜತೆ ಸೇರಿಕೊಂಡ.

ಗೆಲುವು

೧೯೮೪ ಜೂನ್ ೩೦ರ ಬೇಗ್ಗೆ ಅಂಡ್ರ್ರೆ ಮ್ಯಾಖಲ್‌ಸ್ಕಿ ತಿಂಡಿ ತಿನ್ನುತ್ತಿರುವಾಗ ಫೋನ್ ಕೂಗಿತು. ಆ ಕರೆ ಎವಿಲಾ ಎಂಬ ವೃದ್ಧೆಯದಾಗಿತ್ತು. "ದಯವಿಟ್ಟು ಇಲ್ಲಿಗೆ ಬಾ" ಸಮಯ ಬಂದಿದೆ ಎಂದಿದ್ದಳು.

ಮ್ಯಾಖಲ್‌ಸ್ಕಿ ಹೆಚ್ಚಿನ ಹಣಕ್ಕಾಗಿ ತನ್ನ ಫಿಐಟ್ ಕಾರನ್ನು ಮಾರಿದ. ಆಮೇಲೆ ಯಾರನ್ನಾದರೂ, ಎಲ್ಲಿಗಾದರೂ ಕಳುಹಿಸಲು ಶಕ್ತನೆನಿಸಿಕೊಂಡ ಯುಗೋಸ್ಲೊವಾದ ಗುಂಪಿನೊಡನೆ (ಸ್ಮಗ್ಲರ್) ಮಾತನಾಡಿ ಬರುವುದಕ್ಕಾಗಿ ತನ್ನ ಹೆಂಡತಿ ಆ್ಯನಾಳನ್ನು ಪ್ಯಾರಿಸ್‌ಗೆ ಕಳುಹಿಸಿದ. ಆ್ಯನಾ ಅವರಿಗೆ ಹಣ ನೀಡಿ, ಪೂ(ಲೆ (ಓ

ಹಿಂತಿರುಗಿ, ಅವರ ಸೂಚನೆಗಾಗಿ ಕಾಯುತೊಡಗಿದಳು. ಆದರೆ ಸ್ಮಗ್ಲರ್ ಗುಂಪಿನಿಂದ ಯಾವುದೇ ಸೂಚನೆಗಳಿಲ್ಲದೆ ಆರು ತಿಂಗಳುಗಳುರುಳಿದವು. ಫ್ರೆಂಚ್ ಸಂಬಂಧದಿಂದ ಪ್ರಯೋಜನವಾಗಲಾರದು ಎಂದುಕೊಂಡು ಮ್ಯಾಖಲ್‌ಸ್ಕಿ ಕಾತರನಾದ. ಹಣ ನಷ್ಟವಾಯಿತೆಂದುಕೊಂಡ.

ಆಮೇಲೆ ಒಂದುದಿನ ಫೋನ್ ಕರೆಬಂತು. ಕೂಡಲೆ ಮ್ಯಾಖಲ್‌ಸ್ಕಿ ಸ್ಮಗ್ಲರನ್ನು ಭೇಟಿಯಾದ. ತಮಗೆ ಮೂರು ಅವಶ್ಯಕತೆಗಳಿವೆಯೆಂದೂ, ಮೊದಲನೆಯದಾಗಿ ಆ ವ್ಯಕ್ತಿಯ ಒಂದುಜತೆ ಫೋಟೋ. ಎರಡನೆಯದಾಗಿ ದಾಖಲೆಗಳನ್ನು ಪರಿಶೀಲಿಸಲು ಏಕಾಂತ ಪ್ರಶಾಂತ ಸ್ಥಳ, ಮೂರನೆಯದಾಗಿ ಆ ಗಿರಾಕಿ (ಕ್ಲೈಂಟ್) ಬೇಕಾಗಿದ್ದಾನೆಂದೂ ಆ ಗುಂಪಿನ ನಾಯಕ ತಿಳಿಸಿದ. ಮಧ್ಯರಾತ್ರಿಯಲ್ಲಿ ಆ ಸ್ಥಳವನ್ನು ಬಿಡುವುದಾಗಿಯೂ ಆತ ತಿಳಿಸಿದ.

ಮ್ಯಾಖಲ್‌ಸ್ಕಿ ಅಷ್ಟರಲ್ಲೇ ಸ್ಯಾಷಾನ ಎರಡುಜತೆ ಫೋಟೋವನ್ನು ಹೊಂದಿದ್ದ. ಅಂತೆಯೇ ಅವರಿಗೆ ಯಾವುದೇ ತೊಂದರೆಯಿಲ್ಲದೆ ಕೆಲಸ ಮಾಡಲು ಪ್ರತ್ಯೇಕ ಕೊಠಡಿಯನ್ನು ಏರ್ಪಡಿಸಿದ. ಆದರೆ ಸ್ಯಾಷಾನೇ ಇರಲಿಲ್ಲ. ಕೆಲವು ತಿಂಗಳುಗಳ ಹಿಂದೆ ಬಡಾರ್ಕ್‌ಳ ಹೋಟೇಲ್ ಬಳಿ ಹೋದ ನೆನಪಿತ್ತು. ಆದರೆ ಆ ದಾರಿಯ ಗುರುತು ಮರೆತಿತ್ತು. ಇದರಿಂದ ಮ್ಯೂಖಲ್‌ಸ್ಕಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿತ್ತು. ಬಡಾರ್ಕ್‌ಳ ಹೋಟೆಲ್ ಬಳಿ ಹೋಗಿದ್ದ ಜಾಡನ್ನು ಕಂಡುಹಿಡಿಯುವುದರಲ್ಲಿ ಉಂಟಾದ ವ್ಯರ್ಥಪ್ರಯತ್ನದಿಂದ ಆತ ಸಿಡಿಮಿಡಿಗೊಳ್ಳುವಂತಾಯಿತು.

ಸಂಜೆ ಸಮೀಪಿಸುತ್ತಿತ್ತು. ಕೆಲವು ವಾರಗಳ ಹಿಂದೆ ವಾರ್ಸಾನ ಹೊರಗೆ ೩೦ ಕಿ.ಮೀ. ಅಂತರದಲ್ಲಿ ಹೊಲವೊಂದರಲ್ಲಿ ಸ್ಯಾಷಾ ಕೆಲಸ ಮಾಡುತ್ತಿದ್ದುದನ್ನು ಮ್ಯೂಖಲ್‌ಸ್ಕಿ ನೆನಪಿಸಿಕೊಂಡ. ಕೂಡಲೆ ಗೆಳೆಯನೊಬ್ಬನ ಕಾರನ್ನು ತೆಗೆದುಕೊಂಡು ಅಲ್ಲಿಗೆ ಹೊರಟ. ಮ್ಯಾಖಲ್‌ಸ್ಕಿ ಹೊಲವನ್ನು ಸಮೀಪಿಸಿದಾಗ ಸೂರ್ಯ ಮುಳುಗತೊಡಗಿದ್ದ. ಅಲ್ಲಿ ಒಂಟಿ ಹೆಂಗಸೊಬ್ಬಳು ರಬ್ಬರ್ ಬೂಟು ಹಾಕಿಕೊಂಡು, ತಾನುಟ್ಟ ನೀಲ್ಬಟ್ಟೆಯಿಂದ ಕೈ ಒರೆಸಿಕೊಳ್ಳುತ್ತಾ ನಿಂತಿದ್ದಳು. ಮ್ಯಾಖಲ್‌ಸ್ಕಿ ತಾನಂದುಕೊಂಡ ಜಾಗ ಇದೇ' ಅಂದುಕೊಂಡ. ಇವಳೇನಾದರೂ ಸ್ಯಾಷಾ ಗೊತ್ತಿಲ್ಲವೆಂದರೆ ಇದೇ ತನ್ನ ಕೊನೆಯ ಪ್ರಯತ್ನವೆಂದೂ ಅಂದುಕೊಂಡ.


"ಜ್ಯಾಸೆಕ್ ಎಲ್ಲಿದ್ದಾನೆಂದು ಗೊತ್ತೆ?" ಎಂದು ಕೇಳಿದ. ಆಕೆ 'ಹೌದೆಂದು' ಉತ್ತರಿಸಿದಳು. ಮ್ಯಾಖಲ್‌ಸ್ಕಿಗೆ ದೊಡ್ಡ ಭಾರವನ್ನು ಕಳೆದುಕೊಂಡಂತಾಯಿತು. ಜ್ಯಾಸೆಕ್ (ಸ್ಯಾಷಾ) ಹೊಲದಲ್ಲಿದ್ದ.

ಪೋಲೆಂಡನ್ನು ಸೇರಿ ಸ್ಮಗ್ಲರ್‌ಗಳಿಗೆ ಸ್ಯಾಷಾನನ್ನು ಒಪ್ಪಿಸುವಾಗ ಮಧ್ಯರಾತ್ರಿಗೆ ಕೆಲವೇ ನಿಮಿಷಗಳಿದ್ದವು. ಅಂತಿಮವಾಗಿ ರಾತ್ರಿ ೨ ಗಂಟೆಗೆ ಅವರು ಹೊರಡಲು ಸಿದ್ಧರಾದರು. ಅಷ್ಟೊಂದು ದಿನಗಳವರೆಗೆ ತನ್ನನ್ನು ರಕ್ಷಿಸಿದ್ದ ಮ್ಯಾಖಲ್‌ಸ್ಕಿಯ ಕೈ ಕುಲುಕುತ್ತಾ, ಸ್ಯಾಷಾ 'ಕೃತಜ್ಞತೆ'ಯನ್ನು ಸಲ್ಲಿಸಿದ. 'ಮತ್ತೆ ನೋಡೋಣ'ವೆಂದು ಹೇಳಿದ. ಬೆಳಗಾಗುವುದರೊಳಗೆ ಅವರು ಪೋಲೆಂಡಿನ ಗಡಿ ದಾಟಿದರು. ಮಧ್ಯಾಹ್ನದ

ೀಳಿಗೆ ಫೋನ್ ಕರೆಬಂತು. ಸಂದೇಶ ಸಂಕ್ಷಿಪ್ತ
ವಾಗಿತ್ತು. "ಪ್ಯಾಕೇಜ್ ಸುರಕ್ಷಿತವಾಗಿ
ಲುಪಿದೆ" ಎಂದು.

ಇದು ಶುಭಾಂತವಾಗಿ ಕೊನೆಗೊಂಡಿತ್ತು.
ಸ್ಯಾಬಿಲ್‌ಸ್ಕಿಗೆ ಯಾವುದೋ ಅಪರಿಮಿತ
ವಾದವನ್ನು ಕಳೆದುಕೊಂಡ ಅನುಭವ
ವಾಯಿತು.

ಅಲೆಗ್ಸಾಂಡರ್ ಯಾಸಿಜೀವ್ ಸ್ಯಾಷಾ
ಈಗ ಫ್ರಾನ್ಸ್‌ನಲ್ಲಿ ಟ್ರಕ್‌ವೊಂದರ ಚಾಲಕ
ನಾಗಿ ಉತ್ತಮ ಜೀವನ ನಡೆಸುತ್ತಿದ್ದಾನೆ.
ಳೆದ ಫೆಬ್ರವರಿ ೧೬ (೧೯೯೫) ರಂದು
ರಾಸ್ತಾದ ರೆಸ್ಟೊರೆಂಟೊಂದರಲ್ಲಿ ಅಂದ್ರೆ
ಜೇಜ್, ಜೇಸಿಲಿಸ್, ಯುಸರ್ಜುಲಾ,
ಲ್ಯಾಡಮ್, ಜೋಲಿನಾ ವಾಡೋವಸ್ಕಿ
ಮುಂತಾದವರು ಸೇರಿದ್ದರು. ಅಂದು ಸ್ಯಾಷಾ
ಗೌರವಾನ್ವಿತ ಅತಿಥಿಯಾಗಿ ಬಂದಿದ್ದ.
ಸೈನಿಕನಾಗಿದ್ದಾಗಿನ ಭೀತಿ ಈಗ ಇರಲಿಲ್ಲ
ವಾಗಿತ್ತು. ೩೨ ವರ್ಷ ವಯಸ್ಸಿನ ಗುಲಾಬಿ
ರಂಗಿನ ಕೆನ್ನೆಯ ಪ್ರಬುದ್ಧನಾಗಿದ್ದ. ಆ
ಅತಿಥೇಯ ಹೋಟೆಲ್‌ನಲ್ಲಿ ಆ ಎಲ್ಲರನ್ನೂ
ಸ್ಯಾಷಾ ಸ್ಮರಿಸಿಕೊಂಡಿದ್ದು ಹೀಗೆ—"ನನ್ನ
ಉಳಿವಿಗೆ ಸಹಾಯ ಮಾಡಿದ ಈ ಎಲ್ಲರನ್ನೂ
ನಾನೆಂದೂ ಮರೆಯಲಾರೆ. ಇವರಿಲ್ಲವಿದ್ದಿ
ದ್ದರೆ ನಾನು ಬದುಕುತ್ತಿರಲಿಲ್ಲ."



ಪ್ರೇಮ ಸ್ವಾತಂತ್ರ್ಯಗಳೆರಡೂ ಭಗವಂತನ ಲೀಲೆಯ ಕೌತುಕಗಳಲ್ಲೆರಡಾಗಿವೆ. ಒಂದು ಬದುಕನ್ನು ಹರ್ಷಗೊಳಿಸಿ ಆಕರ್ಷಣೆ ನೀಡಿದರೆ, ಇನ್ನೊಂದು ಆನಂದದ ನೈಲ್ಲವನ್ನು ರುದ್ರಭೂಮಿಯನ್ನಾಗಿ ಪರಿವರ್ತಿಸುವ ಶಕ್ತಿಯುಳ್ಳದ್ದು.

—ಶ್ರೀ ಅರವಿಂದ

ವಿಶಿಷ್ಟ ಹಾಗೂ ವಿಚಿತ್ರ ಸಾಧನೆಗಳ ದಾಖಲೆ ಗ್ರಂಥ ಗಿನ್ನಿಸ್

ಗೋಪಾಲ ಆಶ್ರಿತ

ಇದು ಅತಿ ದೊಡ್ಡದು, ಇದು ಅತಿ ಉದ್ದ, ಇದು ಅತಿ ಎತ್ತರವಾದದ್ದು, ಇದು ಅತಿ ಹಳೆಯದಾದದ್ದೆಂದು ಇಲ್ಲಿ ಹೇಳಲಾಗಿದ? ಇದನ್ನು ಹೇಳುವುದೇ ಗಿನ್ನಿಸ್ ಮತ್ತು ಇದರಲ್ಲಿ ಸೇರುವುದೇ ಒಂದು ವಿಶೇಷ.

ತಲೆಯ ಮೇಲೆ ಒಂದು ಹಾಲಿನ ಶೀಶೆ (೦.೫೭ ಲೀಟರ್)ಯನ್ನಿಟ್ಟುಕೊಂಡು, ಅದು ಬೀಳದಂತೆ ಎಚ್ಚರ ವಹಿಸಿ ಪುಣೆಯಿಂದ ಲೋಣಾವಾಲಾ ಮಧ್ಯದ ೬೪.೬೪ ಕಿ.ಮೀ. ಅಂತರವನ್ನು ಕ್ರಮಿಸಿದ್ದ ಭಾರತದ ಮಿಲಿಂದ ದೇಶಮುಖನ ಹೆಸರು ೧೯೯೧ರ ಗಿನ್ನಿಸ್ (ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್) ಸಂಪುಟದಲ್ಲಿ ಸೇರಿತು. ಇದು ಅವನ ಶ್ರಮಕ್ಕೆ ದೊರೆತ ಪ್ರತಿಫಲ. ಅಸಾಧಾರಣ ಸಾಧನೆಗಳ ಉಗ್ರಾಣವೆನ್ನಲಾಗುವ ಈ ಗ್ರಂಥವಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್ (ಚಂದ್ರನ ಮೇಲೆ ಪಾದಾರ್ಪಣ ಮಾಡಿದ ಮೊದಲ ಮಾನವ). ೨೬ ಗಾಲಿಗಳನ್ನು ಹೊಂದಿಸಲಾದ ೩೦.೪೮ ಮೀಟರ್ ಉದ್ದ ಲಿಮೋಸಿನ್ ಮೋಟಾರು ಮತ್ತು ಒಂದೇ ಸಲಕ್ಕೆ ೫೨.೫೩ ಮೀಟರಿನಷ್ಟು ಉದ್ದವಾದ ಸೇಬು ಹಣ್ಣಿನ ಸಿಪ್ಪೆಯನ್ನು ಸುಲಿದ ವಾಲ್ಕಾಟನ (ನ್ಯೂಯಾರ್ಕ್) ಕೆಥೆವ್ಯಾಫ್ಲರರಂಥವರ ಪಂಕ್ತಿಯಲ್ಲಿ ದೇಶಮುಖನ ಹೆಸರು ಸೇರಿಕೊಂಡಿದೆ.

ಯಾವ ಸಂಗತಿಯೂ ಗಿನ್ನಿಸ್ಸಿನಿಂದ ಮುಚ್ಚಿಡಲಸಾಧ್ಯ. ಈ ಗ್ರಂಥವಲ್ಲಿ ದಾಖಲಾಗದ ಯಾವ ದಾಖಲೆಯೂ ಇಲ್ಲ: ಅತಿ ದೂರದವರೆಗಿನ ಎಸೆತ (ಭಲ್ಲೆ, ಇಟ್ಟಿಗೆ. ಮೊಟ್ಟೆಗಳು). ಅತಿ ಹೆಚ್ಚು ವರ್ಷ ಬಾಳಿದ ವ್ಯಕ್ತಿ (ಜಪಾನಿನ ಶಿಗೆಚಿಯೊ ಇಜುಮಿ– ೧೨೦ ವರ್ಷ ಮತ್ತು ೨೩೭ ದಿನ ಬದುಕಿದ್ದನು) ಅಥವಾ ಒಬ್ಬ ವ್ಯಕ್ತಿ ಬಹಳ ಸಮಯದವರೆಗೆ ಸತತವಾಗಿ ಹಾಡಿದ್ದು (೨೬೨ ಗಂಟೆಗಳು) ಮುಂತಾದವು. ಸಣ್ಣ ಸಣ್ಣದ್ದನ್ನೇ ಗಂಭೀರವಾಗಿ ತೆಗೆದುಕೊಳ್ಳುವುದು ಮತ್ತು ಅಳೆಯಲಸಾಧ್ಯವಾದದ್ದನ್ನು

೧೯೯೧ರ ಸೆಪ್ಟೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಇಮ್ಯಾನುಲ್ ಫೆರ್ರಿಕ್ಸ್ ಅವರ "ಇನ್‌ಸೈಡ್ ದಿ ಬುಕ್ ಅಫ್ ಸೂಪರ್ ಸೂಪರ್‌ಲೇಟೀವ್ಸ್" ಎಂಬ ಲೇಖನದ ಅನುವಾದ.

ಅಳೆಯಲೆತ್ನಿಸುವುದು ಬ್ರಿಟಿಷರ ಗುಣಧರ್ಮವಾಗಿದೆ ಎಂದು ಅವರ ಬಗ್ಗೆ ನಗೆ ಚಾಟಲು ಮಾಡುವವರುಂಟು. ಟ್ರೊಯ್ ನಗರದ ಹೆಲನ್ನಳು ಬರೆದ ಅಧ್ಯಾಯದಲ್ಲಿ ಒಂದು ಇಂಥ ಹಾಸ್ಯ ಚಟಾಕಿ ಇದೆ. ಹೆಲನ್ನಳ ಸೌಂದರ್ಯ ಸಾವಿರ ಹಡಗುಗಳು ಮುನ್ನುಗ್ಗುವಂತೆ ಮಾಡಿತೆಂಬ ಅಳತೆಗೋಲನ್ನು ತೆಗೆದುಕೊಂಡರೆ, ಒಂದು ಹಡಗು ಮುನ್ನುಗ್ಗುವಂತೆ ಮಾಡಲು ಬೇಕಾಗುವ ಸೌಂದರ್ಯದ ಅಳತೆಗೆ ಮಿಲಿ ಹೆಲನ್ ಎನ್ನಬೇಕೆ?

೧೯೫೫ರಲ್ಲಿ ಸ್ಥಾಪಿತವಾದ ಈ ಸಂಸ್ಥೆ ಇಲ್ಲಿನವರೆಗೆ ಸುಮಾರು ೭೫ ದಶಲಕ್ಷ ಪುಸ್ತಕಗಳನ್ನು ಮಾರಿದೆ. ಇದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಎಷ್ಟು ಖ್ಯಾತಿ ಪಡೆದಿದೆಂದರೆ, 'ಗಿನ್ನಿಸ್' ಎಂಬ ಶಬ್ದ ವಿಶ್ವದ ಎಲ್ಲ ಭಾಷೆಗಳ ಮನೆಮಾತಾಗಿದೆ. ಸ್ಪರ್ಧಾಭಾವಕ್ಕೆ ಈ ಗ್ರಂಥ ದಾರಿದೀಪವಾಗಿದೆ. ವಿಶ್ವದ ಅತಿ ದಪ್ಪ ಮತ್ತು ಅತಿ ಎತ್ತರದ ಡೇಲಿ (ಮೆಕ್ಸಿಕೋದ ಬಣ್ಣ ಬಣ್ಣದ ಒಂದು ಗಿಡ) ೫.೧ ಮೀ.) ಬೆಳೆಸಿದ ಫ್ರಾನ್ಸಿನ ಆಂದ್ರೆ ಗ್ಯುರಿಯ ಹೆಸರು ಈ ಗ್ರಂಥದ ಫ್ರೆಂಚ್ ಸಂಪುಟದಲ್ಲಿ ದಾಖಲಿಸಲಾಗಿದೆ. "ದಾಖಲೆಗಳಿರುವುದೇ ಮುರಿಯುವುದಕ್ಕಾಗಿ. ಮುಂದಿನ ವರ್ಷ ನಾನು ೮.೨೩ ಮೀಟರಿನಷ್ಟು ಎತ್ತರ ಬೆಳೆಸಿ ಹೆಸರುಗಳಿಸುವೆ" ಎಂದು ಆಂದ್ರೆ ಗ್ಯುರಿ ಹೇಳಿದ್ದಾನೆ.

ಪೂರ್ವ ಯುರೋಪಿನ ಜನರು ಲಂಡನ್ನಿಗೆ ಬರೆದು ಕಳಿಸುತ್ತಿರುವುದು ಕಾಲದಲ್ಲಾದ ಬದಲಾವಣೆ ಚಿಹ್ನೆ ಎನ್ನಬಹುದು. ಅದೇ ರೀತಿ ಕೊರಿಯಾದವರು ಸಿಯೋಲ್ ಒಲಂಪಿಕ್ಸ್ ಸ್ಪರ್ಧಾಮನೋಭಾವದಿಂದ ಪ್ರೇರಣೆ ಪಡೆದು ಬರೆಯುತ್ತಿದ್ದಾರೆ. ಕೆಲವು ವಿವಾದಾತ್ಮಕ ಅಂಶಗಳಿದ್ದಂಥ ಒಂದು ಸಂಪುಟ ೧೯೯೦ ಮೊದಲ ಸಲ ರಶಿಯನ್ ಭಾಷೆಯಲ್ಲಿ ಹೊರಬಂತು. ಈಗಾಗಲೇ ಸಾಧಿಸಿದ ದಾಖಲೆಗಳ ಜೊತೆ ಅತಿ ವಿಸ್ತಾರ ಭೂಭಾಗ, ಅತಿಭಾರವಾದ ಘಂಟೆ, ಅತಿ ಹಳೆಯ ಜೀವಾಣುಗಳು ಭವಿಷ್ಯದಲ್ಲಿ ಇನ್ನೂ ಕೆಲವು ದಾಖಲೆಗಳನ್ನು ಸ್ಥಾಪಿಸಲಿರುವ ಸೋವಿಯೆಟ್ ಸಂಘ, ಈಗ ಅತಿ ಹೆಚ್ಚು ದಾಖಲೆ ಸ್ಥಾಪಿಸಿದ ಅಮೆರಿಕೆ (ಯು.ಎಸ್.ಎ) ಯನ್ನು ಹಿಂದೆ ಹಾಕಲಾಗಿದೆ.

ಭಾರತದಿಂದ ಅನೇಕ ಮನವಿಗಳು (ಅವರ ಬಗ್ಗೆ ಲೇಖನದ ಕೊನೆಯಲ್ಲಿ ಪ್ರತ್ಯೇಕ ಕೊಟ್ಟಿದೆ) ಬರುತ್ತವೆ. ಅವುಗಳಲ್ಲಿ ಮಿಲಿಂದ ದೇಶಮುಖರಂಥವರ ಸಾಧನೆಯನ್ನು ಸ್ವೀಕರಿಸಲಾಗುತ್ತದೆ. ಒಬ್ಬ ವ್ಯಕ್ತಿ ತನ್ನ ಮನೆತನದ ಹೆಸರಿನಲ್ಲಿ ಅತಿ ಹೆಚ್ಚು ಸಂಖ್ಯೆಯ ಅಕ್ಷರಗಳಿವೆ ಎಂದು ಘೋಷಿಸಿದ್ದನ್ನು ಪರಿಗಣಿಸಿಲ್ಲ. ದುರ್ದೈವದ ಸಂಗತಿಯೆಂದರೆ ಅವನು ಅಂಥ ಹೆಸರಿನ ಮನೆತನದಲ್ಲಿ ಹುಟ್ಟಿರಲೇ ಇಲ್ಲ.

ಮೂಲ: ಈ ಗ್ರಂಥದ ಹುಟ್ಟಿಗೆ ಕಾರಣಕರ್ತರಾದವರು ಸ್ಕಾಟ್‌ಲ್ಯಾಂಡಿನ ಮೂವರು ವ್ಯಕ್ತಿಗಳು. ೧೯೫೧ರಲ್ಲಿ ಗಿನ್ನಿಸ್ ಮದ್ಯತಯಾರಿಕಾ ಸಂಸ್ಥೆಯ ನಿರ್ವಹಣಾಧಿಕಾರಿಯಾಗಿದ್ದ ಸರ್ ಹ್ಯೂಗ್ ಬೀವರ್ ಒಮ್ಮೆ ಬೇಟೆಗೆ ಹೋದಾಗ ತಾನು ಕಂಡ ಗೋಲ್ಡನ್ ಪ್ಲೋವರ್ ಎಂಬ ಹಕ್ಕಿಯೇ ಯುರೋಪಿನ ಅತ್ಯಂತ ವೇಗದಿಂದ ಹಾರುವ ಪಕ್ಷಿಯೆಂದು ಬೆರಗುಗೊಂಡ. ಈ ಬೆರಗಿನಿಂದಾಗಿ ಇಂಥ

ಪ್ರಶ್ನೆಗಳಿಗೆ ಉತ್ತರ ನೀಡಬಲ್ಲ ಮತ್ತು ಇಂಗ್ಲೆಂಡ್ ಹಾಗೂ ಸ್ಕಾಟ್‌ಲ್ಯಾಂಡಿನಲ್ಲಿರುವ ಸುಮಾರು ೮೦,೦೦೦ ಉಪಹಾರ ಗೃಹಗಳಲ್ಲಿ ಚರ್ಚಿಸಲು ಪ್ರಚೋದಿಸಬಲ್ಲ ಒಂದು ಪುಸ್ತಕ ಪ್ರಕಟಿಸುವ ವಿಚಾರ ಅವನಿಗೆ ಬಂತು. ಆಕ್ಸ್‌ಫರ್ಡಿನ ಹಳೆಯ ವಿದ್ಯಾರ್ಥಿ ಜಾಲದವರನ್ನು ಸಂಪರ್ಕಿಸಿ ೧೯೫೪ ರಲ್ಲಿ ಮ್ಯಾಕ್‌ವರ್ಟರ ಅವಳಿಗಳಾದ ನೊರಿಸ್ ಮತ್ತು ರಾಸ್‌ರನ್ನು ಭೇಟಿ ಮಾಡಿದನು. ಅಂಕೆ ಸಂಖ್ಯೆ ಬಗ್ಗೆ ಅತಿಯಾದ ಆಸಕ್ತಿಯಿದ್ದ ಈ ಅವಳಿಗಳು ತಮ್ಮದೇ ಆದ ಅಂಕೆ ಸಂಖ್ಯೆ ಕೇಂದ್ರ ಸ್ಥಾಪಿಸಿದ್ದರಲ್ಲದೆ ಬಿ.ಬಿ.ಸಿ.ಯಲ್ಲಿ ಕ್ರೀಡೆಗಳ ವೀಕ್ಷಕ ವಿವರಣೆ ನೀಡುತ್ತಿದ್ದರು. ೧೯೫೫ ರಲ್ಲಿ ಗಿನ್ನಿಸ್ ಗ್ರಂಥದ ಜನನವಾಯಿತು. ಕೇವಲ ೩ ತಿಂಗಳಲ್ಲಿಯೇ ಅದು ಅತಿ ಹೆಚ್ಚು ಸಂಖ್ಯೆಯಲ್ಲಿ ಮಾರಲಾದ ಪುಸ್ತಕವೆನಿಸಿಕೊಂಡಿತು. ಈಗ ನಿವೃತ್ತಿ ಹೊಂದಿ ಕೇವಲ ಸಲಹೆಗಾರನಾಗಿರುವ ನೊರಿಸ್ ಮ್ಯಾಕ್‌ವರ್ಟರ್ "ಜನರಿಗೆ ಅತ್ಯುತ್ತಮ, ಅತಿದೊಡ್ಡ ಮತ್ತು ಅತಿ ಸಣ್ಣ ವಸ್ತುಗಳ ಬಗ್ಗೆ, ಇತರ ಸಾಧಾರಣ ವಸ್ತುಗಳಿಗಿಂತ ಯಾವಾಗಲೂ ಹೆಚ್ಚಿನ ಆಸಕ್ತಿಯಿರುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಹಿಂದಿನ ವರ್ಷ ಸುಮಾರು ೬ ಮಿಲಿಯನ್ ಪೌಂಡಿನಷ್ಟು ವಹಿವಾಟಾಗಿದ್ದರೂ ಲಂಡನ್ನಿನ ಮಧ್ಯಮ ವರ್ಗದ ಬಡಾವಣೆಯಾದ 'ಎನ್ಫೀಲ್ಡಿಂಬಲ್ಲಿ' ಒಂದು ಅತಿ ಸಾಮಾನ್ಯ ಎರಡಂತಸ್ತಿನ ಕಟ್ಟಡದಲ್ಲಿ ಇದರ ಕಾರ್ಯಾಲಯವಿದೆ. ಇಲ್ಲಿ ಕೆಲಸ ಮಾಡುವ ೪೦ ಜನರಲ್ಲಿ, ನಾಲ್ಕು ಜನರಿಗೆ ಮಾತ್ರ ದಾಖಲೆಗೆ ಸಂಬಂಧಿಸಿದ ಮನವಿ, ಮಾಹಿತಿ ಪತ್ರಗಳನ್ನು ಸ್ವೀಕರಿಸಿ ಅವುಗಳನ್ನು ಗ್ರಂಥದಲ್ಲಿ ಸೇರಿಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಅಧಿಕಾರವಿದೆ. ಇದು ಸುಲಭದ ಕೆಲಸವಲ್ಲ; ಗಿನ್ನಿಸಿನಲ್ಲಿ ಪ್ರಕಟಿಸಲಾದ ೧೫೦೦೦ ದಾಖಲೆಗಳಲ್ಲಿ ಪ್ರತಿ ವರ್ಷ ಸುಮಾರು ೩೦೦೦ ದಾಖಲೆಗಳನ್ನು ಮುರಿದು, ಹೊಸ ದಾಖಲೆಗಳು ನಿರ್ಮಾಣಗೊಳ್ಳುತ್ತವೆ. ಈ ಗ್ರಂಥದಲ್ಲಿ ಸೇರುವುದೆಷ್ಟು ಕಠಿಣವೋ, ಅದು ಶಾಶ್ವತವಾಗಿ ಉಳಿಯುವುದೂ ಅಷ್ಟೇ ಕಠಿಣ. ಕೆಲವೊಂದು ಅಪವಾದಗಳಿವೆ. ಉದಾ: ರೊನಾಲ್ಡ್ ರೇಗನ್ನನ ಮಾಜಿ ಪತ್ನಿಯಾಗಿದ್ದ ಜೇನ್‌ವೇಯಮನ್ ಸ್ಥಾಪಿಸಿದ, ಚಿತ್ರ ಇತಿಹಾಸದಲ್ಲಿನ ಅತಿ ದೀರ್ಘ ಚುಂಬನದ, ದಾಖಲೆಯನ್ನು ಇನ್ನೂ ಮುರಿಯಲಾಗಿಲ್ಲ. ಪ್ರತಿ ದಿನ ಎನ್ಫೀಲ್ಡಿಗೆ ಬರುವ ೨೦೦ ಕ್ಕೂ ಹೆಚ್ಚು ಪತ್ರಗಳಿಗೆ ಸಿಬ್ಬಂದಿ ವರ್ಗದವರು ಉತ್ತರ ಬರೆದು ಹಾಕುತ್ತಾರೆ. ಇವುಗಳಲ್ಲಿ ಕಾಲು ಭಾಗದಷ್ಟು ಪತ್ರಗಳು ೧೦ ವರ್ಷದ ಮಕ್ಕಳಿಂದ ಬಂದಿರುತ್ತವೆ. ತಮ್ಮ ನಾಯಿ ಹೆತ್ತ ಮರಿಗಳ ಸಂಖ್ಯೆಯನ್ನೇ ಅತಿ ಹೆಚ್ಚೆಂದು ದಾಖಲಿಸಲು ಕೆಲವರು ಬರೆದಿರುತ್ತಾರೆ. ಮತ್ತೆ ಕೆಲವರು ತಮ್ಮ ಅಜ್ಜಿಯೇ ದೀರ್ಘಾಯುಷಿ ಎಂದು ದಾಖಲಿಸಲು ಕೇಳುತ್ತಾರೆ ಅಥವಾ ತಮ್ಮ ಮನೆಯಲ್ಲಿರುವ ಹಳೆಯ ಕಾಡುಸೊಪ್ಪಿನ ಸಸ್ಯದಲ್ಲಿರುವ ಟೊಂಗೆಗಳ ಸಂಖ್ಯೆ ವಿಶ್ವದಲ್ಲಿಯೇ ಅತಿ ಹೆಚ್ಚೆಂದು ಗಿನ್ನಿಸ್ ಪುಸ್ತಕದಲ್ಲಿ ಸೇರಿಸುವಂತೆ ಕೇಳಿಕೊಳ್ಳುತ್ತಾರೆ.

ಯಾವುದೇ ತೆರನಾದ ಭೌತಿಕ ಅಪಾಯ ಒಡ್ಡುವುದು ಅಥವಾ ಮರುಕ ಹುಟ್ಟಿಸುವ ಅಂಶವನ್ನು ಈ ಸಂಪಾದಕರು ಪರಿಗಣಿಸ

ವುದಿಲ್ಲ. ಈ ಸಂಸ್ಥೆಗೆ ತನ್ನದೇ ಆದ ಒಂದು ನೀತಿ ನಿಯಮವಿದೆ. ಈ ಅಂಶವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಕೆಲವೊಂದು ಸಂಗತಿಗಳನ್ನು ಈಗಲೂ ಚರ್ಚಿಸಲಾಗುತ್ತದೆ. ಉದಾ: ಬೆನ್‌ಜಾನ್‌ಸನ್ (೯.೭೯ ಸೆಕೆಂಡುಗಳಲ್ಲಿ) ೧೦೦ ಮೀಟರ್ ಓಡಿದ ದಾಖಲೆ ಕೊನೆಗೂ ಅಚ್ಚಾಯಿತು. ಆ ವೀರನನ್ನು ಉದ್ದೀಪಕ ಔಷಧಿ ಸೇವನೆಯ ಪರೀಕ್ಷೆಗೆ ಒಳಪಡಿಸಿ ಅವನನ್ನು ಅನರ್ಹನನ್ನಾಗಿ ಮಾಡಿದ್ದೂ ಬರೆಯಲಾಯಿತು.

ಈ ಗ್ರಂಥದ ಸಂಪಾದಕರಾಗಿರುವ ೩೯ ವರ್ಷದ ಡೊನಾಲ್ಡ್ ಮ್ಯಾಕ್‌ಫರ್ಲಾನ್‌ಗೆ, ಯಾವ ದಾಖಲೆಗಳನ್ನು ಪ್ರಕಟಿಸಬೇಕೆಂದು ನಿರ್ಣಯ ತೆಗೆದುಕೊಳ್ಳುವಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. ಹೆಚ್ಚು ಜನ ಸಂಚಾರವಿರುವ ರಸ್ತೆಗಳ ಮೇಲೆ ವೇಗವಾಗಿ ವಾಹನ ಓಡಿಸುವುದು ಅಪಾಯಕಾರಿಯಾಗಬಲ್ಲದೆಂದು ಅಂಥ ದಾಖಲೆಯನ್ನು ಸ್ವೀಕರಿಸುವುದಿಲ್ಲ. ಸಣ್ಣ ಸಣ್ಣ ಪ್ಯಾರಾಶೂಟ್ ಮೂಲಕ ಹಾರುವುದು ಮತ್ತು ಅತಿ ಎತ್ತರದಲ್ಲಿ ಅತಿ ತೆಳುವಾದ ತಂತಿಯ ಮೇಲೆ ನಡೆಯುವಂಥ ಅಪಾಯಕಾರಿ ದಾಖಲೆಗಳನ್ನು ತಿರಸ್ಕರಿಸಲಾಗುತ್ತದೆ.

ಬಕಾಸುರ: ೧೯೮೯ರಲ್ಲಿ (ಸಂಪುಟ ೩೫) 'ತಿನಿಸು ಬಾಕತನ'ದ ದಾಖಲೆ ಪುಸ್ತಕವನ್ನು ಪ್ರಕಟಿಸಲಾಯಿತು. ಮಾಂಸದ ತುಂಡುಗಳನ್ನು ತಿನ್ನುವವರು, ದಪ್ಪ ಶೇವಿಗೆಯನ್ನು ತಿನ್ನುವವರು, ಗೋಮಾಂಸ, ಹಂದಿಮಾಂಸ ಮತ್ತು ಇತರ ಯಾವುದೇ ತಿನಿಸನ್ನು ಅತಿಯಾಗಿ ತಿಂದು ದಾಖಲೆ ಸ್ಥಾಪಿಸಿದವರ ಹೆಸರುಗಳು ಈಗ ಕಾಣಿಸುವುದಿಲ್ಲ. "ಈ ದಾಖಲೆಗಳು ಈಗಿನ ಕಾಲಮಾನಕ್ಕನುಗುಣವಾಗಿಲ್ಲ.... ಸಾರ್ವಜನಿಕರ ಆರೋಗ್ಯಕ್ಕೆ ಇದರ ನೇರ ಸಂಬಂಧವಿದೆ...." ಎಂದು ಮ್ಯಾಕ್‌ಫರ್ಲಾನ್ ಹೇಳಿದ್ದಾನೆ. ಪದೆ ಪದೇ ಅದೇ ಜನರು 'ತಿನಿಸು ಬಾಕತನ'ಕ್ಕೆ ಹೆಸರು ಪಡೆದು ದಾಖಲೆ ಸ್ಥಾಪಿಸಿದ್ದನ್ನು ಕಂಡು ತನಗೆ ಬೇಜಾರಾಗಿದೆ ಎಂದು ಅವನೇ ಹೇಳಿದ್ದಾನೆ. ಆದರೆ ಪೀಟರ್ ಡೌಡಸ್ವೆಲ್ ಎಂಬ ಒಬ್ಬ ದೊಡ್ಡ ಹೊಟ್ಟೆಯ ಬ್ರಿಟಿಷ್ ಟ್ರಕ್ ಚಾಲಕನ ಹೆಸರನ್ನು ಮಾತ್ರ ಉದ್ಧರಿಸಿದ್ದಾನೆ. ಐಸ್ ಕ್ರೀಮ್, ಜೆಲ್ಲಿಕೇಕ್, ಆಲೂಗಡ್ಡೆ, ಬೀರ್ ಮುಂತಾದ ತಿನಿಸು ಮತ್ತು ಪಾನೀಯ ಸೇವಿಸಿ ಪೀಟರ್ ೨೫ ದಾಖಲೆಗಳ ವೀರನಾಗಿದ್ದಾನೆ. ಈ ತಿನಿಸು ಬಾಕತನದಲ್ಲಿ 'ಮಹಾನ್ ಸರ್ವಭಕ್ಷಕ' (ದಿ ಗ್ರೇಟೆಸ್ಟ್ ಆಮ್ನಿವರಸ್) ನೆಂದು ಮೈಕೆಲ್ ಲೊಟಿಟು ಅಥವಾ ಶ್ರೀಮಾನ್ ಮ್ಯಾನ್‌ಗೆಟ್‌ಟ್ ಎಂಬ ಫ್ರಾನ್ಸ್ ದೇಶದ ನಾಗರಿಕ (ಜನನ ೧೯೫೦) ಸ್ಥಾಪಿಸಿದ್ದಾನೆ. ೯ನೆಯ ವಯಸ್ಸಿನಿಂದಲೇ ಇವನು ಸಿಹಿ ತಿಂಡಿಗಳ ಬದಲಾಗಿ ಗಾಜು ಮತ್ತು ಉಕ್ಕಿನ ವಸ್ತುಗಳನ್ನು ತಿಂದು ಅರಗಿಸಿಕೊಂಡದ್ದುಂಟು. ೧೯೬೬ ರಿಂದ ಅವನು ೧೦ ಸೈಕಲ್ಲುಗಳನ್ನು, ಒಂದು ಸಾಮಾನು ಸಾಗಿಸುವ ಎಳೆ ಬಂಡಿಯನ್ನು, ೭ ಟಿ.ವಿ.ಗಳನ್ನು, ೬ ಗೊಂಚಲು ದೀಪ (ಚ್ಯಾಂಡಿಲರ್)ಗಳನ್ನು ಒಂದು ಹೆಣದ ಚಟ್ಟವನ್ನು (ಹಿಡಿ ಸಮೇತ), ಒಂದು ಚಿಕ್ಕ ವಿಮಾನವನ್ನು (ಭಾಗ್ಯಕ್ಕೆ ಅದರ ಚಾಲಕನನ್ನು ಬಿಟ್ಟು) ತಿಂದು ಅರಗಿಸಿಕೊಂಡಿದ್ದಾನೆ.

ಹೊಸ ವಿಚಾರಗಳನ್ನು ಹುಡುಕಿ ದಾಖಲಿಸಬೇಕೆಂಬ ಉದ್ದೇಶವಿಟ್ಟುಕೊಂಡ,

ಗಿನ್ನಿಸ್ ಗ್ರಂಥದ ತಂಡ ಈಗ ಜೀವಪರಿಸರ ವಿಜ್ಞಾನ (ಇಕಾಲಜಿ)ದ ಕಡೆಗೆ ವಿಶೇಷ ಗಮನ ಹರಿಸಿವೆ. ೧೯೯೧ರ ಸಂಪುಟದಲ್ಲಿ, 'ಪ್ರಾಣಿಗಳು' ಮತ್ತು 'ನಿಸರ್ಗ' ಎಂಬ ಅಧ್ಯಾಯಗಳನ್ನು ವಿಶದೀಕರಿಸಿದೆ. ಈ ಸಂಪುಟದಲ್ಲಿ ಯಾವ ಪ್ರಾಣಿಗಳು ವಿನಾಶದ ಹಂತ ತಲುಪಿವೆ ಎಂದು ವಿವರಿಸಲಾಗಿದೆ. ಅಲ್ಲದೆ ಅತಿ ಹೆಚ್ಚಿನ ಸಂಖ್ಯೆಯ (ರೊಲ್ಸ್ ರಾಯ್ಸ್) ವಾಹನಗಳನ್ನು ಸಂಗ್ರಹಿಸಿದವರ ಮತ್ತು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗಾಜಿನ ಶೀಶೆಯ ಬಿರಡೆಗಳನ್ನು ಸಂಗ್ರಹಿಸಿದವರ ಹೆಸರನ್ನೂ ಸೇರಿಸಲಾಗಿದೆ.

ಪ್ರತಿಯೊಬ್ಬ ಸಂಪಾದಕನಿಗೆ ಅವನದೇ ಆದ ಶೈಲಿ ಹಾಗೂ ಕಾರ್ಯವೈಖರಿಯಿರುತ್ತದೆ. ಮ್ಯಾಕ್‌ಫರ್ಲಾನರ ಸಂಪಾದಕತ್ವದ ಅವಧಿಯಲ್ಲಿ ವಿಶೇಷ ಮಾಹಿತಿ ಸಂಗ್ರಹಕ್ಕೆ ಮಹತ್ವ ನೀಡಲಾಗಿದೆ. ಇಲ್ಲಿ ವಿಕಾರ ಅಥವಾ ವೈಚಿತ್ರ್ಯಗಳಿಗೆ ಅವಕಾಶವಿಲ್ಲ. ಅದರಲ್ಲೂ, ಕ್ರೀಡೆಗಳಲ್ಲಿ ಭೌತಿಕ ಸಂಯಮದ ದಾಖಲೆಗಳನ್ನು ಮುರಿಯುವುದು ಕಠಿಣವಾಗುತ್ತಲಿದೆ. "ಇಂದು ಅಂಗಸಾಧನೆಯ ದಾಖಲೆಗಳು, ಮನುಷ್ಯ ಶಕ್ತಿಯ ಮಿತಿಗೆ ಹತ್ತಿರವಾಗುತ್ತಲಿವೆ" ಎಂಬುದು ನೊರಿಸ್‌ಮ್ಯಾಕವ್ಹರ್ಟರನ ಅಭಿಪ್ರಾಯ. "ಇವುಗಳನ್ನು ಮುರಿಯಲು ಬಹಳ ಸಮಯ ಹಿಡಿಯುತ್ತದೆ ಮತ್ತು ಇಲ್ಲಿ ಅಂತರಗಳು ಕೂಡಾ ಬಹಳ ಸೂಕ್ಷ್ಮವಾಗುತ್ತಲಿವೆ" ಎಂದು ಅವನ ವಾದ.

ಒಂದೇ ಒಂದು ಘಟನೆ ಅಥವಾ ಅಸಾಧಾರಣ ಜಾಣ್ಮೆಯನ್ನು ಒಂದು ದಾಖಲೆಯಿಂದ ಪರಿಗಣಿಸಬೇಕಾಗಿಲ್ಲ. ಎಂತಲೇ ಮ್ಯಾಕ್‌ಫರ್ಲಾನನ ಸಂಪಾದಕೀಯ ಮಂಡಳಿಯವರು ಇಂಥ ವಿವರಗಳನ್ನು ಪರಿಷ್ಕರಿಸುವದರ ಜೊತೆಗೆ, ವಿಶ್ಲೇಷಿಸುವದರಲ್ಲಿಯೇ ಸಾಕಷ್ಟು ಸಮಯ ವಿನಿಯೋಗಿಸುತ್ತಾರೆ. ತಮ್ಮ ದಾಖಲೆಯ ಬಗ್ಗೆ ಅಭ್ಯರ್ಥಿಗಳು ಸಮರ್ಥಿಸಬೇಕಾದರೂ ಈ ಮಂಡಳಿ ಮಾತ್ರ ಶ್ರಮವಹಿಸಿ ಕೆಲಸ ಮಾಡಬೇಕಾಗುತ್ತದೆ. ವರ್ಣರಂಜಿತ ಭಾವಚಿತ್ರಗಳು, ಸಮಾಚಾರ ಪತ್ರಿಕೆಯಲ್ಲಿ ಪ್ರಕಟಗೊಂಡ ಆಯ್ದ ಭಾಗಗಳು ಮತ್ತು ಇಬ್ಬರು ಸಾಕ್ಷಿದಾರರ ಪ್ರತ್ಯೇಕ ಪ್ರಮಾಣ ಪತ್ರಗಳನ್ನು ಈ ಅಭ್ಯರ್ಥಿಗಳು ಸಲ್ಲಿಸಬೇಕೆಂಬ ನಿಯಮವಿದೆ. ಬಹಳ ಅವಸರದಿಂದ ಮಾತನಾಡುವ ವ್ಯಕ್ತಿಯೆಂದು ಬಿರುದು ಗಳಿಸುವುದು ಈಗ ಸಾಮಾನ್ಯ ಸಂಗತಿ 'ಆದರೆ ಇದನ್ನು ನಿರ್ಣಯಿಸುವುದು ಬಹಳ ಕಠಿಣ'. ಅವರು ಮಾತಾಡುವುದು ಸರಿಯಾಗಿ ಅರ್ಥವಾಗುವದನ್ನು ಅಳೆಯುವುದು ಹೇಗೆ?" ಎಂದು ಮ್ಯಾಕಫರ್ಲಾನ್ ಪ್ರಶ್ನಿಸುತ್ತಾರೆ. ಈಗ ಹೆಚ್ಚೆಚ್ಚು ಜನರು ತಮ್ಮ ಬಂಧುಗಳೊಬ್ಬರು ದೀರ್ಘಾಯುಷಿಗಳೆಂದು ಘೋಷಿಸುವಂತೆ ಲಂಡನ್ನಿಗೆ ಪತ್ರ ಬರೆಯುತ್ತಿದ್ದಾರೆ. "ಈಗ ಆಯುಷ್ಯವೃದ್ಧಿಯಾಗಿ ಬಹಳಷ್ಟು ಜನರು ೧೧೦ ವರ್ಷಗಳಿಗಿಂತ ಹೆಚ್ಚು ವರ್ಷ ಬಾಳುತ್ತಲಿದ್ದಾರೆ. ಆದರೆ ಅವರ ವಯಸ್ಸನ್ನು ಖಚಿತಪಡಿಸುವುದು ಹೇಗೆ?....ಅವರು ತಮ್ಮ ನಾಮಕರಣದ ಅಥವಾ ಜನನ ತಾರೀಖಿನ ಪತ್ರ ತಂದರೂ, ಅದು ಅವರದೇಯೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ" ವೆಂದು ಮ್ಯಾಕಫರ್ಲಾನರ ಅಭಿಪ್ರಾಯ.

ಆದರೆ ಯಾವುದೇ ವಿಷಯವನ್ನು ಗಿನ್ನಿಸ್ ಗ್ರಂಥದಲ್ಲಿ ಸೇರಿಸಬೇಕಾದಲ್ಲಿ ಅದರ ಸತ್ಯಾ

ಸತ್ಯತೆಯ ಬಗ್ಗೆ ಮ್ಯಾಕಫರ್ಲಾನ್ ವಿಶೇಷ ಗಮನ ಹರಿಸುತ್ತಾರೆ. ಈ ಗ್ರಂಥದಲ್ಲಿ ಹೆಸರು ಸೇರ್ಪಡೆಯಾಗುವುದರಿಂದ ವಿಶ್ವಖ್ಯಾತಿ ಬರದಿದ್ದರೂ, ಇದರ ಮೂಲಕ ಸಮಾಜ ಹಾಗೂ ವೃತ್ತಿಯಲ್ಲಿ ಅಭಿವೃದ್ಧಿ ಹೊಂದಬಹುದಾಗಿದೆ. ಮೋಟಾರು ವಾಹನಗಳನ್ನು ಮಾರುವಲ್ಲಿ ಬಹಳ ನಿಪುಣ (ಒಂದು ತಿಂಗಳಿಗೆ ೧೭೪ ವಾಹನಗಳು)ನೆಂದು ಖ್ಯಾತಿಗಳಿಸಿದ ಜ್ಯೊಗಿರಾರ್ಡ್ ತನ್ನ ವ್ಯವಹಾರಕ್ಕೆ ರಾಜಿನಾಮೆ ನೀಡಿ, 'ಮಾರಾಟ' ವಿಷಯ ಕುರಿತು ಮೂರು ಪುಸ್ತಕಗಳನ್ನು ಬರೆದು ಪ್ರಕಟಿಸಿದನು. ಅವುಗಳಲ್ಲಿ ಎರಡಂತೂ ಕೂಡಲೇ ಬೆಸ್ಟ್ ಸೆಲ್ಲರ್‌ಗಳೆಂದು ಮಾರಲಾದವು. ಕೆಲವೊಂದು ವಿಲಕ್ಷಣ ದಾಖಲೆಗಳೂ ವೃತ್ತಿಯಲ್ಲಿ ಯಶತರುತ್ತವೆ. ಈ ಪುಸ್ತಕದಲ್ಲಿ ದಾಖಲಾದ ನಂತರ, ಮೈಕೆಲ್ ಲೊಟಿಟೊ ಒಬ್ಬ ಮೇನೆಜೇರನನ್ನು ತನ್ನ ಕೆಲಸಕ್ಕಾಗಿ ನೇಮಿಸಿಕೊಂಡನು. ಈಗ ಜವಾನಿನಿಂದ ಹಿಡಿದು ಅಮೆರಿಕದಲ್ಲೆಲ್ಲ ಪ್ರವಾಸಮಾಡಿ ತನ್ನ ಲೋಹ ತಿನ್ನುವ (ಮೆಟಲ್ ಈಟಿಂಗ್) ಪ್ರದರ್ಶನ ನೀಡುತ್ತಿದ್ದಾನೆ.

ಈ ದಾಖಲೆಗಳು ಜಾಹಿರಾತು ಮಾಡುವ ಜನರನ್ನಂತೂ ಕೂಡಲೇ ಆಕರ್ಷಿಸುತ್ತವೆ. ಅವರು ಈ ವೀರರನ್ನು ಚಮತ್ಕಾರಿಕ ರೈತರಿರಲಿ ಅಥವಾ ಬಹಳ ತ್ವರಿತಗತಿಯಲ್ಲಿ ಹೆಣೆಯುವವರಾಗಿರಲಿ—ತಮ್ಮ ಉತ್ಪನ್ನ—ಅದು ರಸಗೊಬ್ಬರವೇ ಇರಲಿ ಅಥವಾ ಹೆಣೆಯುವ ಕಡ್ಡಿಯೇ ಇರಲಿ—ಅವುಗಳ ಗುಣಮಟ್ಟ ಹೊಗಳಲಿಕ್ಕೆ ಬಳಸಿಕೊಳ್ಳ ಬಯಸುತ್ತಾರೆ. ಒಂದು ವೇಳೆ, ವಿಲಿಂದ ದೇಶಮುಖನ ದಾಖಲೆ ಭದ್ರವಾಗಿ ನಿಂತಿತೆಂದರೆ, ಅವನ ಹಾಲಿನ ಶೀಶೆ, ಅವನ ಜೀವನದ ಗತಿಯನ್ನೇ ಬದಲಿಸಬಹುದು.

ಗಿನ್ನಿಸ್‌ನಲ್ಲಿ ಪ್ರವೇಶ ಪಡೆದ ಭಾರತೀಯರ ದಾಖಲೆಗಳು

ಅತಿ ಚಿಕ್ಕದಾದ ಬೆಕ್ಕುಗಳು, ಅತಿ ಹೆಚ್ಚಿನ ಜನಸಂದಣಿಗಳು, ಅತಿ ದೊಡ್ಡ ಸೌರಗಡಿಯಾರಗಳನ್ನು ಎಲ್ಲಿ ನೋಡಲು ಸಾಧ್ಯ? ಅಥವಾ ಅತಿ ಉದ್ದವಾದ ಉಗುರುಗಳನ್ನು ಬೆಳೆಸಿದ ವ್ಯಕ್ತಿ, ಒಂದು ವರ್ಷದಲ್ಲಿ ಅತಿ ಹೆಚ್ಚು ಮಳೆಯಾಗುವ ಸ್ಥಳ ಮತ್ತು ಅತಿ ಎತ್ತರ ಪ್ರದೇಶದಲ್ಲಿ ರಸ್ತೆ ಸೇತುವೆಗಳಿರುವುದೆಲ್ಲಿ? ಸಹಜವಾಗಿ ಸಿಗುವ ಉತ್ತರವೆಂದರೆ ನಮ್ಮ ಭಾರತ. ಇಂಥವೇ ಸುಮಾರು ೧೦೦ ದಾಖಲೆಗಳನ್ನು, ೧೯೯೧ರ ಗಿನ್ನಿಸ್ ಸಂಪುಟದಲ್ಲಿ ಕಾಣಬಹುದು.

ಕ್ರೀಡೆ

ಸುನಿಲ್ ಗವಾಸ್ಕರ್ ವಿಶ್ವದ ಅತಿ ಹೆಚ್ಚು ಓಟಗಳಿಸಿದ (೧೦,೧೨೨) ಮತ್ತು ಅತಿ ಹೆಚ್ಚು (೩೪) ಶತಕಗಳನ್ನು ಬಾರಿಸಿದ ಕ್ರಿಕೆಟ್ ಪಟು. ಅದರಂತೆ ಅವೆಚುರ್‌ಸ್ಕೋರ (೧೪೬)ರ ದಾಖಲೆ ಸ್ಥಾಪಿಸಿದ್ದು ಗೀತ್‌ಸೇಠಿ.

ಮಾತಿನ ಮಲ್ಲರು

ಎಸ್. ಈ. ಜಯರಾಮನ್ (ಎಂಬ ಮದ್ರಾಸಿಗ ೧೯೮೯ ರ ಜೂನ್ ತಿಂಗಳಲ್ಲಿ ಸತತವಾಗಿ ೩೬೦ ಗಂಟೆಗಳವರೆಗೆ ಮಾತಾಡಿ ಪ್ರಸಿದ್ಧನಾದನಲ್ಲದೆ, ಈ ದಾಖಲೆ ಗ್ರಂಥದಲ್ಲಿ ಅವನ ಹೆಸರು ಕಾಣಿಸಿಕೊಂಡಿತು. ಆರ್. ಮೀನಾಕ್ಷಿ ಸುಂದರಂ ಎಂಬ ಇನ್ನೊಬ್ಬ ಭಾರತೀಯ, ಒಮ್ಮೆ ರಾತ್ರಿಯ ಊಟದ ನಂತರ ೪೦ ಗಂಟೆಗಳವರೆಗೆ ಸತತ ಭಾಷಣಮಾಡಿ ಗಿನ್ನಿಸ್ ದಾಖಲೆ ಸ್ಥಾಪಿಸಿದ್ದಿದೆ.

ಚಾಕಚಕ್ಯತೆ

ಶಕುಂತಲಾದೇವಿ ಯಾರೋ ಸೂಚಿಸಿದ ೧೩ ಅಂಕಿಯ ಎರಡು ಸಂಖ್ಯೆಗಳನ್ನು ೨೮ ಸೆಕೆಂಡುಗಳಲ್ಲಿ ಗುಣಿಸಿದಳು. ಚಂಡೀಗಢದ ವಿ. ಆರ್. ಪಿ. ರಾಮನ್ ೪೮೧ ಗಂಟೆ ಮತ್ತು ೩೦ ನಿಮಿಷಗಳವರೆಗೆ ಡಿಸ್ಕೊ ನೃತ್ಯ ಮಾಡಿ ದಾಖಲೆ ಸ್ಥಾಪಿಸಿದ್ದನ್ನು ಈ ಗ್ರಂಥದಲ್ಲಿ ಸೇರಿಸಲಾಗಿದೆ. ಒಂದೇ ಒಂದು ಅಕ್ಕಿಕಾಳಿನ ಮೇಲೆ ೬೩೮ ವ್ಯಕ್ತಿ ಚಿತ್ರಗಳನ್ನು ಬರೆದ ಜೈಪುರದ ಸುರೇಂದ್ರನ ದಾಖಲೆಯನ್ನು ಇಲ್ಲಿ ಸೇರಿಸಲಾಗಿದೆ.

ಶಾರೀರಿಕ ಬೆಳವಣಿಗೆ

ಹೊಸದಿಲ್ಲಿಯ ಕಾರಾಗೃಹದಲ್ಲಿ ಬಂದಿಯಾಗಿದ್ದ ದಿವಂಗತ ಕರ್ಣರಾಮಭೀಲ ೨೩೮.೮ ಸೆಂ. ಮೀಟರ್ ಉದ್ದವಿದ್ದ ತನ್ನ ಮೀಸೆಗೆ, ಸಾಸಿವೆ ಎಣ್ಣೆ, ಬೆಣ್ಣೆ ಮತ್ತು ಕೆನೆ ಲೇಪನ ಮಾಡಿ ಅದರ ಆಕಾರ ಕಾಪಾಡಿಕೊಂಡನಲ್ಲದೆ, ಗಿನ್ನಿಸ್ ದಾಖಲೆಯನ್ನು ಸ್ಥಾಪಿಸಿದ. ಇದೇ ರೀತಿಯಲ್ಲಿ ತಂಜಾವೂರಿನ ಸ್ವಾಮಿ ಪಂದರಸನ್ನಿಧಿ ಎಂಬುವವನು ತನ್ನ ತಲೆ ಕೂದಲನ್ನು ಬಹಳ ಎಚ್ಚರಿಕೆಯಿಂದ ೭೯೨ ಸೆಂ. ಮೀಟರ್ ಉದ್ದ ಬೆಳೆಸಿದ್ದು ಕೂಡಾ ಒಂದು ದಾಖಲೆ.

ಕೆಲವು ಸ್ವಾಭಾವಿಕ ಚಮತ್ಕಾರಗಳು

ಅಲ್ಮೋರಾದ ಕಿಶನ್ ಜೋಷಿ ೬೫೭ ಸೆಂ. ಮೀಟರ್ ಎತ್ತರದ ಒಂದು ದೈತ್ಯಾಕಾರದ ಮೆಣಸಿನಕಾಯಿ ಗಿಡ ಬೆಳೆಸಿದನು. ೨೪೭೫ ಕ್ಯಾರೆಟ್ ತೂಕದ ರಾಜರತ್ನವೆಂಬ ಮಾಣಿಕ್ಯ ವಿಶ್ವದಲ್ಲಿಯೇ ಅತಿ ದೊಡ್ಡ ಮಾಣಿಕ್ಯವೆನಿಸಿಕೊಂಡಿದೆ.

ನಾಯಕರು ಮತ್ತು ಖಳನಾಯಕರು

೧೭೯೦ ರಿಂದ ೧೮೪೦ ರ ಅವಧಿಯಲ್ಲಿ ೯೩೧ ಜನರನ್ನು ಕತ್ತುಹಿಸುಕಿ ಕೊಂದ ಬೆಹರಾಮ ಎಂಬ ವ್ಯಕ್ತಿ ಅತಿ ಹೆಚ್ಚು ಕೊಲೆಗಳನ್ನು ಮಾಡಿ

ದ್ದೊಂದು ಜಾಗತಿಕ ದಾಖಲೆಯಾಗಿದೆ. ಕೆಲವು ಭಾರತೀಯರು ತಮ್ಮ ಒಳ್ಳೆಯ ಕಾರ್ಯಗಳಿಂದಲೂ ಗಿನ್ನಿಸ್ ಗ್ರಂಥದಲ್ಲಿ ಪ್ರವೇಶ ಪಡೆದದ್ದುಂಟು. ದಣಿವರಿಯುದ ನೇತ್ರತಜ್ಞ ಡಾ|| ಎಂ. ಸಿ. ಮೋದಿ, ೬,೦೦೦೦೦ ಶಸ್ತ್ರ ಚಿಕಿತ್ಸೆ ಮಾಡಿದ್ದೊಂದು ದಾಖಲೆ. ಸುಮಾರು ೮೬ ವರ್ಷಗಳಷ್ಟು ದೀರ್ಘ ಕಾಲದ ದಾಂಪತ್ಯಿಕ ಜೀವನ ನಡೆಸಿದ ಕೀರ್ತಿ ಸರ್ ಟೆಮುಲ್ಜಿ ಭಿಕಾಜಿ ನಾರಿಮನ್ ಮತ್ತು ಅವರ ಪತ್ನಿಯವರಿಗೆ ಸಲ್ಲುತ್ತದೆ. ಇದೂ ಕೂಡಾ ಒಂದು ವಿಶ್ವ ದಾಖಲೆ.



ಗೆಲ್ಲುವದೊಂದೇ ಯಶಸ್ಸಲ್ಲ. ಎಂದೆಂದೂ ಸೋಲುವದೆಂದರೆ ನಮ್ಮ ಅಶಕ್ತತೆಯೆಂದು ತಿಳಿಯಬಾರದು. ನಾವು ಸೋತ ಸಲಕ್ಕೊಮ್ಮೆ, ಪುನಃ ಮೇಲೇಳುವ ಪ್ರಯತ್ನ ಮಾಡುತ್ತೇವಲ್ಲ? ಆ ಪ್ರಯತ್ನದಲ್ಲಿಯೇ ಹೆಚ್ಚಿನ ಕೀರ್ತಿ ಇರುವದು.

—ಗೋಲ್ಡ್‌ಸ್ಮಿಥ್

ನಮ್ಮ ಪ್ರಗತಿ ಪ್ರತಿಷ್ಠೆಗಳನ್ನು ನೋಡಿ ಆಶ್ಚರ್ಯ ಪಡುವವರನ್ನು ನಾವು ಹತ್ತಿರ ಕರೆದುಕೊಳ್ಳುತ್ತೇವೆ. ಇತರರ ಪ್ರತಿಷ್ಠೆಗಳನ್ನು ನೋಡಿ ನಾವು ಆಶ್ಚರ್ಯ ಪಟ್ಟರೂ ಅವರನ್ನು ಪ್ರೀತಿಸುವುದಿಲ್ಲ. ಹತ್ತಿರ ಕರೆದುಕೊಳ್ಳುವದಿಲ್ಲ.

—ರೊಚೆಫೊರಿಲ್ಡ್

ಕರ್ತವ್ಯದ ಪ್ರಶ್ನೆ

ಪ್ರೊ॥ ಕೆ. ಆರ್. ಉಡುಪ

ದಕ್ಷಿಣ ಚೈನಾದ ಒಂದು ಆಸ್ಪತ್ರೆಯಲ್ಲಿ ೧೯೮೯ ನೇ ಡಿಸೆಂಬರ್ ೨೪ ರಂದು ಕಡು ಮುಂಜಾನೆ, ಅಗತ್ಯ ಕೆಲಸಗಳ ಒತ್ತಡ ತುಂಬ ಇತ್ತು. ೨೪ ವರ್ಷ ಪ್ರಾಯದ ಸ್ತ್ರೀರೋಗ ಮತ್ತು ಪ್ರಸವ ಶಾಸ್ತ್ರ ತಜ್ಞೆಯಾದ ನಾನು, ಕಳೆದ ರಾತ್ರಿ ಶಸ್ತ್ರ ಪ್ರಯೋಗಗೈದು ಎರಡು ಹೆರಿಗೆಗಳನ್ನು ಮತ್ತು ಕಷ್ಟಕರವಾದ ಒಂದು ಫೋರ್ಸೆಪ್ಸ್ (ಇಕ್ಕುಳ) ಹೆರಿಗೆಯನ್ನು ಮಾಡಬೇಕಾಗಿತ್ತು. ನನ್ನ ಮೇಲ್ವಿಚಾರಕರು (ಸುಪರ್‌ವೈಸರ್) ಹೊಸ, ಭಯಂಕರ ಜವಾಬ್ದಾರಿಯನ್ನೂ ರಾತ್ರಿ ಪಾಳಿಯ ನನ್ನ ಮೇಲೆ ಹೇರಿದ್ದರು.

ಸರಿಯಾದ ಆಹಾರ ನಿದ್ರೆಗಳಿಲ್ಲದೆ, ಈ ಕೆಲಸಗಳ ಒತ್ತಡದಿಂದಾಗಿ ತುಂಬ ದಣಿದಿದ್ದೆ. ಕೊನೆಯದಾಗಿ, ವೈದ್ಯರ ವಿಶ್ರಾಂತಿ ಕೋಣೆಯನ್ನು ರಾತ್ರಿ ಒಂದು ಗಂಟೆಗೆ ಸೇರಿದಾಗ, ಉಂಡು ಹಾಯಾಗಿ ಮಲಗಲಿಕ್ಕೆ ತುಂಬಾ ಆಸೆಯಾಗಿತ್ತು. ಹಾಗೆ, ಹಾಸಿಗೆಯಲ್ಲಿ ಬಿದ್ದುಕೊಂಡಾಗ-ಇಂದು ಮೂರು ಜೀವಗಳನ್ನು ಈ–ಲೋಕಕ್ಕೆ ನಾನು ಸ್ವಾಗತಿಸಿದೆ ಎಂದು ವಿಸ್ಮಯಾನಂದವೂ ಆಯಿತು. ಆಗ ನನ್ನ ತಂದೆಯವರ ನೆನಪಾಯಿತು. ಅವರೂ ಡಾಕ್ಟರರಾಗಿದ್ದರು. ಅವರ ಮಾಸಿಕ-ವೇತನದ ಇಮ್ಮಡಿ ಬೀದಿ ಗುಡಿಸುವವರಿಗೆ ಸಿಗುತ್ತಿತ್ತು. ಇದೂ ಚೀನಾ ದೇಶದಲ್ಲಿ! ಆದರೆ ಅವರು ಹೇಳುತ್ತಿದ್ದರು- 'ಜನರ ಪ್ರಾಣ ರಕ್ಷಣೆ–ಅತ್ಯಂತ ಉದಾತ್ತ ಕೆಲಸ'.

ನನ್ನ ತಂದೆ ನಮ್ಮ ಪ್ರಾಂತದಲ್ಲೇ ಜನಪ್ರಿಯ ವ್ಯಕ್ತಿ. ನಮ್ರತೆಗೆ ಹೆಸರಾದವರು. ಆತ, ಸಾದಾ ಸಮವಸ್ತ್ರ ಧರಿಸಿಕೊಂಡು, ಅಗ್ಗವಾದ ಜಿಪ್ ಹರಿದ, ವಿಸಿಯಲ್ ಚೀಲದಲ್ಲಿ ವೈದ್ಯಕೀಯ ಸಾಧನಗಳನ್ನು ತುಂಬಿಸಿಕೊಂಡು ಹೋಗುತ್ತಿದ್ದರು. ಕುಟ್ಟುವುದಕ್ಕೆ ಬಳಸುವ ಸುತ್ತಿಗೆ ಮರದ ಹಿಡಿಯದಾಗಿತ್ತು. ಅದನ್ನೆಸೆಯಲು ಒಪ್ಪುತ್ತಿರಲಿಲ್ಲ. ಅವರು ಹೇಳುತ್ತಿದ್ದರು– 'ವೈದ್ಯಕೀಯ ಸಾಧನಗಳು ಒಬ್ಬ ಡಾಕ್ಟರನ್ನು ಮಾಡುವುದಿಲ್ಲ. ಅಗತ್ಯ ಬೇಕಾದ್ದು ವೈದ್ಯ ವಿಜ್ಞಾನದ ಅರಿವು ಮತ್ತು ದಯೆ'.

೧೯೯೫ರ ಡಿಸೆಂಬರ್ ತಿಂಗಳಿನ "ರೀಡರ್ಸ್ ಡೈಜೆಸ್ಟ್" ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಡಾ॥ ಯುನ್‌ವಾಂಗ್ ಅವರ, 'ತನ್ನ ಅನುಭವ ಕಥನ'ದ ಕನ್ನಡ ಅನುವಾದ.

ಮಧ್ಯ ರಾತ್ರಿಯ ವಿಷಮ ಪರಿಸ್ಥಿತಿ:

ಹೀಗೆ ಯೋಚಿಸುತ್ತಿದ್ದವಳಿಗೆ ನಿದ್ರೆಯು ಮಂಪರು ಬಂತು. ಅಂದು ಕ್ರಿಸ್‌ಮಸ್ ಹಿಂದಿನ ದಿನವಾಗಿತ್ತು. ಮಿಲಿಯಗಟ್ಟಲೆ ಚೀನಿಯರಂತೆ ನಾವು ಕ್ರಿಶ್ಚಿಯನ್‌ರಾಗಿದ್ದೆವು. ನನಗೆ ಆ ಹಿಂದಿನ ದಿನಗಳ ನೆನಪು ಬಂತು. ಈ ಪುಣ್ಯದಿನವನ್ನು ಒಟ್ಟಾಗಿ ಆಚರಿಸುತ್ತಿದ್ದೆವು. ಸಣ್ಣ ಮರಕ್ಕೆ ದೀಪಾಲಂಕಾರ ಮಾಡಿ 'ಮೌನ ರಾತ್ರಿಯ ಹಾಡನ್ನು ಸಣ್ಣ ಸ್ವರದಲ್ಲಿ ಹಾಡುತ್ತ, ನಮ್ಮ ನೆರೆಮನೆಯವರು ಸರ್ಕಾರಕ್ಕೆ ದೂರು ಕೊಡದಂತೆ ನೋಡಿಕೊಳ್ಳುತ್ತ, ಕ್ರಿಸ್ತ ಜನನದ ಕಥೆಯನ್ನು ಕಿವಿಯಲ್ಲಿ ಪಿಸುಗುಟ್ಟುತ್ತ ಕಳೆದಿದ್ದೆವು....ಆ ಕ್ರಿಸ್ತನನ್ನು ಬೆಳಗ್ಗೆ ಕಾಣುವೆ ಎಂದು ನಿದ್ರಾಪರವಶಳಾದೆ.

ಬಾಗಿಲ 'ಕಟಕಟ' ಶಬ್ದ ನನ್ನನ್ನು ಎಚ್ಚರಿಸಿತು. ಆಸ್ಪತ್ರೆಯ ಸೂಲಗಿತ್ತಿ ನನ್ನನ್ನು ಎಬ್ಬಿಸಿ 'ಬಾ' ಎಂದು ಗಟ್ಟಿಯಾಗಿ ಕರೆದು 'ನೀನೊಂದು ಅಗತ್ಯ ಕೆಲಸ ಈಗಲೇ ಮಾಡಬೇಕಾಗಿದೆ' ಎಂದು ನುಡಿದಳು.

ಅವಳನ್ನು ಅವಸರದಿಂದ ಹಿಂಬಾಲಿಸಿದೆ. ಅಷ್ಟರಲ್ಲಿ ಈಗ ತಾನೇ ಹುಟ್ಟಿದ ಮಗುವಿನ ಅಳುವ ಶಬ್ದ ಕೇಳಿಬಂತು. ಹೆರಿಗೆ ಕೋಣೆ ಹೊಕ್ಕಾಗ, ಮಂಚಕ್ಕೆ ಕಟ್ಟಿಹಾಕಿದ ಹೆಂಗಸೊಬ್ಬಳು ಕುಳಿತುಕೊಳ್ಳುವುದಕ್ಕೆ ಹೋರಾಡುತ್ತಿದ್ದಳು. 'ಬೇಡಾ–ಬೇಡಾ' ಎಂದು ಸ್ಥಳೀಯ ಭಾಷೆಯಲ್ಲಿ ಬೊಬ್ಬಿಡುತ್ತಿದ್ದಳು.

ಇಪ್ಪತ್ತರ ವಯಸ್ಸಿನ ಆ ಸೂಲಗಿತ್ತಿ ಕೂದಲನ್ನು ಜಡೆ ಕಟ್ಟಿಕೊಂಡು, ಕಪ್ಪು ಮೊಡವೆ ತುಂಬಿದ ಮುಖದವಳಾಗಿದ್ದಳು. ದೊಡ್ಡ ಬಾಟ್ಲಿಯಿಂದ ಐಯೊಡಿನನ್ನು ಏಳು ಸೆಂಟಿ ಮೀಟರಿನ ಸೂಜಿಯ ಮೂಲಕ ಸಿರಿಂಜಿಗೆ ಎಳೆಯುವುದಕ್ಕೆ ಶುರು ಮಾಡಿದಳು, ಅವಳು—ಆ ಹೆಂಗಸಿನ ಗರ್ಭಪಾತಕ್ಕಿರುವ ಔಷಧಸಾಧನಗಳೆಲ್ಲ ವ್ಯರ್ಥವಾಯಿತು. ಎಂಟು ತಿಂಗಳ ಗರ್ಭಿಣಿ ಆ ತಾಯಿಗೆ ಈಗಾಗಲೇ ಒಂದು ಮಗು ಇದೆ. ಚೀನಾದ ಕುಟುಂಬ ನಿಯಂತ್ರಣ ಕಾನೂನು ಪ್ರಕಾರ ಎರಡನೆಯ ಮಗು ಅಪರಾಧ. ಸ್ಥಳೀಯ ಕುಟುಂಬ ಯೋಜನಾಧಿಕಾರಿ ಆ ಹೆಂಗಸನ್ನು ಬಂಧಿಸಿ ಈ ಆಸ್ಪತ್ರೆಗೆ ತಳ್ಳಿದ್ದಾರೆ. ಆ ತಾಯಿಗೆ ಗರ್ಭಪಾತಕ್ಕಿರುವ ರಿವಾನೊಲ್ ಇಂಜೆಕ್ಷನ್ ಚುಚ್ಚಲಾಯಿತು. ಆದರೆ ಜೀವಂತ ಮಗು ಹುಟ್ಟಿತು. ಛಳಿ ತುಂಬಿದ ದೂರದ ಶೌಚಗೃಹದಿಂದ ಅಳುವ ಕೀಚಲು ಧ್ವನಿ ಆ ಮಗುವಿನದ್ದೇ ಆಗಿದೆ' ಎಂದು ವಿವರಿಸಿದಳು.

ಮುಂದುವರಿದು ಆಕೆ ಹೇಳಿದಳು— 'ಅದನ್ನು ಗುಂಡಿ ತೋಡಿ ಹೂತುಹಾಕು' ಎಂಬುದಾಗಿ, ಅದಕ್ಕಾಗಿರುವ ಆಳನ್ನು ಕೇಳಿದೆ. ಸಮೀಪದ ಸಣ್ಣ ಗುಡ್ಡ ಇಂತಹ ಮಕ್ಕಳಿಗೆ ಅನಧಿಕೃತ ಶ್ಮಶಾನವಾಗಿ ಪರಿಗಣಿಸಲ್ಪಡುತ್ತಿದೆ. 'ಧಾರಾಕಾರವಾಗಿ ಜಡಿ ಮಳೆ ಬರುತ್ತಿರುವಾಗ ಹೇಗೆ ಹೂಳಲಿ?' ಎಂದು ಬಿಟ್ಟುಹೋಗಿದ್ದಾನೆ." ಎಂದು ಗತ ಪುರಾಣ ಹೇಳಿದಳು.

ಈಗ ನನಗೆಲ್ಲ ಅರ್ಥವಾಯಿತು. 'ಗರ್ಭಪಾತದ ಯಾವ ಶಿಶುವೂ ಬದುಕಬಾರದು' ಎಂದು ನೋಡಿಕೊಳ್ಳುವುದು ಜವಾಬ್ದಾರಿ ಹೊತ್ತ ಪ್ರಸವಶಾಸ್ತ್ರಜ್ಞೆಯಾದ ನನ್ನ ಕರ್ತವ್ಯವಾಗಿತ್ತು. ಅದಕ್ಕೆ

ರುವ ಸಾಧನ ಐಯೊಡಿನ್ ಅಥವಾ ಆಲ್ಕೋಹಾಲ್ ಇಂಜೆಕ್ಷನ್ ಮಗುವಿನ ನೆತ್ತಿಯ ಮೆತ್ತಗಾದ ಭಾಗಕ್ಕೆ ಆಳವಾಗಿ ಚುಚ್ಚುವುದಾಗಿದೆ. ಕೆಲವೇ ಸೆಕೆಂಡುಗಳಲ್ಲಿ ಮೃತ್ಯು ಬಂದೇ ಬರುತ್ತದೆ.

ಇದು ಕಾನೂನು :

ಸೂಲಗಿತ್ತಿ ಸಿರಿಂಜನ್ನು ನನ್ನತ್ತ ಚಾಚಿದಳು. ನಾನು ಗಾಬರಿಯಿಂದ ಮರಕಟ್ಟಿದಂತಾದೆ. ಮೂರು ತಿಂಗಳೊಳಗಿನ ಗರ್ಭಪಾತ ನಡೆಸುವಾಗ ನಾನು ಹಿಂಜರಿಯುತ್ತಿರಲಿಲ್ಲ. ಆದರೆ ಇದು ಹಾಗಲ್ಲ. ನಾನು ಈ ಆಸ್ಪತ್ರೆ ಸೇರಿದ ಕಳೆದ ಒಂದು ವರ್ಷದಲ್ಲಿ ನನಗಿಂತಲೂ ಹಿರಿಯ ವೈದ್ಯರು ಇಂತಹ ಕೆಲಸ ನಡೆಸುವಂತೆ ನಾನು ನೋಡಿಕೊಂಡಿದ್ದೆ.

ಸಮೀಪದ ಹಾಸಿಗೆಯಲ್ಲಿದ್ದ ಆ ಮಗುವಿನ ತಾಯಿ ನನ್ನನ್ನು ಪ್ರಾರ್ಥನಾ ದೃಷ್ಟಿಯಿಂದ ನೋಡುತ್ತಿದ್ದಳು. ಆ ಇಂಜೆಕ್ಷನ್ ಸೂಜಿ ಯಾವುದಕ್ಕಿದೆ ಎಂಬುದನ್ನವಳು ಅರಿತಿದ್ದಳು. ಅದು ಎಲ್ಲ ಹೆಂಗಸರಿಗೂ ಗೊತ್ತು. 'ಕರುಣೆ ತೋರಿ' ಎಂದಳತೊಡಗಿದಳು.

ತಾಯಿ ಅಳುತ್ತಿರುವಾಗಲೇ ನಾನು ಥಳಿ ತುಂಬಿದ ಶೌಚಾಲಯ ಸೇರಿದೆ. ಅಲ್ಲಿ ಉಸಿರಾಡಲಿಕ್ಕಾಗದಷ್ಟು ಕಡುಥಳಿ ಇತ್ತು. 'ಸತ್ತ ಮಕ್ಕಳು' ಎಂದು ಬರೆದ ಚೀಲಗಳ ಕಸದ ರಾಶಿಯಲ್ಲಿ ಇನ್ನೊಂದು ಕಪ್ಪು ಚೀಲವನ್ನು ಎಸೆಯ ಬಂದಿದ್ದರು. ಆದರೆ ಆ ಚೀಲ ಅಲುಗಾಡತೊಡಗಿತು. ಚೀಲದೊಳಗಿಂದ ಗಟ್ಟಿಯಾಗಿ ಅಳುವ ಕೀರಲು ಸದ್ದು ಕೇಳಿಬರುತ್ತಿತ್ತು. ನಾನು ಸೂಲಗಿತ್ತಿಗೆ ವಿನಯದಿಂದ ಆ ಚೀಲವನ್ನು ತೆರೆಯಹೇಳಿದೆ.

ತಿಂಗಳು ತುಂಬುವ ಮೊದಲೇ ಹುಟ್ಟಿದ—'ಜೀವನ–ಮರಣ'ಗಳ ನಡುವೆ ತಾಕಲಾಡುವ, ಜೀವಚ್ಛವ ಎಂದದನ್ನು ಭಾವಿಸಿದ್ದೆ. ಅದಕ್ಕೆ ಬದಲಾಗಿ ತುಂಬಿ ಚಂದ ಗಂಡುಮಗು, ಎರಡು ಕೆ. ಜಿ. ಭಾರದ, ತನ್ನ ಎರಡೂ ಮುಷ್ಟಿಗಳನ್ನು ಆಡಿಸುತ್ತಿರುವ ಜೀವ, ತನ್ನ ಕಾಲುಗಳಿಂದ ಒದೆಯುತ್ತಿದೆ. ಅದರ ತುಟಿ, ಸ್ವಚ್ಛಗಾಳಿ ಇಲ್ಲದ್ದರಿಂದ ಸ್ವಲ್ಪ ಕಂದು ಬಣ್ಣದಿಂದಿದೆ.

ಮಗುವಿನ ತಲೆಯನ್ನು ಒಂದು ಕೈಯಿಂದ ಮೃದುವಾಗಿ ಪೂಸಿದೆ. ಇನ್ನೊಂದು ಕೈಯಿಂದ ನೆತ್ತಿಯ ಮೃದು ಭಾಗವನ್ನು ಬೆರಳಿಂದ ಮುಟ್ಟಿದೆ. ಅಲ್ಲಿಯ ಚರ್ಮ ಆಶ್ಚರ್ಯಕರವಾಗಿ ಬಿಸಿಯಾಗಿತ್ತು. ಅದು ಕಿರುಚಿದಾಗ ಆ ಭಾಗ ತಡಪಡಿಸುತ್ತಿತ್ತು. ನನ್ನ ಹೃದಯ ಬಡಿತ ಹೆಚ್ಚಾಗುತ್ತ ಬಂತು. 'ಇದೊಂದು ಜೀವ; ಜೀವಂತ ಮಾನವ!' ನಾನು ಯೋಚಿಸಿದೆ— ಥಳಿ ತುಂಬಿದ ನೆಲದಲ್ಲಿ ಇದು ಸತ್ತೇ ಹೋಗುತ್ತದೆ.

ಇನ್ನೊಂದು ಭಾಗದಲ್ಲಿದ್ದ ಹೆರಿಗೆ ಕೋಣೆಯಿಂದ ಅದರ ತಾಯಿ ಕೂಗಿದಳು— 'ಡಾಕ್ಟರ್ರೇ ನಿಲ್ಲಿಸಿ ; ದಯವಿಟ್ಟು ನಿಲ್ಲಿಸಿರಿ.'

ಮಿಡ್‌ವೈಫ್ ಸಿದ್ಧವಾದ ಗ್ಲಾಸ್ ಸಿರಿಂಜನ್ನು ನನ್ನ ಕೈಯಲ್ಲಿಟ್ಟಳು. ವಿಸ್ಮಯಕರವಾಗಿ ಅದು ಭಾರವೆನಿಸಿತು. 'ಇದು ನನ್ನ ನಿತ್ಯದ ಕೆಲಸ' ಎಂದು ನನ್ನಷ್ಟಕ್ಕೇ ಹೇಳಿಕೊಂಡೆ. 'ಇದು ತಪ್ಪಲ್ಲ; ಇದು ನನ್ನ ಕರ್ತವ್ಯಪಾಲನೆ.'

ಆ ಮಗು ಬಲವಾಗಿ ಕಾಲಿಂದ ಒದೆಯಿತು. ಏನಾಶ್ಚರ್ಯ! ನನ್ನ ಕೈಯಲ್ಲಿದ್ದ

ಇಂಜೆಕ್ಷನ್ ಸಿರೆಂಜ್ ಕೆಳಗೆ ಬಿದ್ದು ಮಗುವಿನ ಹೊಟ್ಟೆಯ ಸಮೀಪವೇ ಒಡೆದು ಹೋಯಿತು. ನಾನು ಬೆಚ್ಚಿಬಿದ್ದೆ. 'ಇಂದು ಕ್ರಿಸ್‌ಮಸ್ ಈವ್! ಈ ಪುಣ್ಯ ದಿನದಂದು ನಾನು ಇಂತಹ ಘೋರ ಪಾಪ ಮಾಡಲಾರೆ!'

ನಾನು ಮಗುವಿನ ತುಟಿಯನ್ನು ತೋರ್ಬೆರಳಿಂದ ಪೂಸಿದೆ. ಅದು ತನ್ನ ತಲೆಯನ್ನು ತಿರುಗಿಸಿ ಬೆರಳನ್ನು ಚೀಪತೊಡಗಿತು. 'ಅದು ಹಸಿದಿದೆ'; ಬದುಕಬಯಸುತ್ತಿದೆ' ಎಂದು ಯೋಚಿಸಿದೆ.

'ಈ ಮಗುವನ್ನು ಪ್ರಸೂತಿಗೃಹಕ್ಕೆ ಕೊಂಡುಹೋಗಿ ಶೀಘ್ರ ಶುಶ್ರೂಷೆ ಮಾಡು. ಅದಕ್ಕೆ ನಾನು ಮೇಲ್ವಿಚಾರಕರ ಅನುಮತಿಯನ್ನು ತೆಗೆದುಕೊಂಡು ಬರುತ್ತೇನೆ' ಎಂದು ಮಿಡ್‌ವೈಫ್‌ಗೆ ಹೇಳಿ ಹೊರಟೆ.

ವಯಸ್ಸಿನಲ್ಲಿ ಐವತ್ತರ ಉತ್ತರಾರ್ಧದಲ್ಲಿರುವ ಹಿರಿಯ ಮಹಿಳೆ ನಮ್ಮ ಮೇಲ್ವಿಚಾರಕಿ, ಎರಡು ಮಕ್ಕಳ ತಾಯಿ—ಈ ಮಗುವಿಗೆ ಕೇಡು ಬಯಸಳು ಎಂದು ದೃಢವಾಗಿ ನಂಬಿದೆ. ಮಧ್ಯರಾತ್ರಿಯ ಎರಡು ಗಂಟೆಯ ಸಮಯ, ಮೇಲ್ವಿಚಾರಕಿ ಮನೆ ಬಾಗಿಲು ತಟ್ಟಿದೆ. ನಿದ್ದೆಗಣ್ಣಲ್ಲಿದ್ದಾಕೆ, ಗರಗರ ಸದ್ದುಗೈವ ಬಾಗಿಲು ತೆರೆದಾಗ ನಾನು ಸಂಕ್ಷೇಪವಾಗಿ ಹೇಳಿದೆ. "ನಾವು 'ರೈವನಾಲ್' ಇಂಜೆಕ್ಷನ್ ಕೊಟ್ಟರೂ ಗರ್ಭಪಾತವಾಗದೆ, ಗಂಡುಮಗು ಜೀವಂತ ಹುಟ್ಟಿದೆ. ಆ ಮಗುವನ್ನು ಶೀಘ್ರ ಶುಶ್ರೂಷೆಗೆ ಕಳಿಸಲೇ?"

'ಎಷ್ಟಕ್ಕೂ ಸಾಧ್ಯವಿಲ್ಲ.' ಅವಳು ಹಾಸಿಗೆಯಲ್ಲೇ ಉತ್ತರಿಸಿದಳು. 'ಇದು ಎರಡನೇ ಮಗು.'

'ಆದರೆ ಅದು ಆರೋಗ್ಯವಾಗಿದೆ. ದಯವಿಟ್ಟು ಬಂದು ನೋಡುವಿರಾ?'

ಸ್ವಲ್ಪ ಮೌನವಾಗಿದ್ದು ಕೋಪದಿಂದ ಉತ್ತರಿಸಿದಳು—'ಈ ವಿಚಾರದಲ್ಲಿ ಯಾಕೆ ನನ್ನನ್ನು ಕಾಡುತ್ತೀಯಾ? ಸರ್ಕಾರದ ನೀತಿ ನಿನಗೆ ಗೊತ್ತಿದೆ.'

ಅವಳ ಸ್ವರವೇ ನನ್ನನ್ನು ಭಯಗೊಳಿಸಿತು. 'ಕ್ಷಮಿಸಿ' ಎಂದು ಹೇಳಿ ಗೇಟು ಹಾಕಿಕೊಂಡು ಹೊರಟೆ.

ಮರುದಿನದ ಸ್ಟಾಫ್ ಮೀಟಿಂಗ್‌ನಲ್ಲಿ—ಸಂತಾನ ನಿಯಂತ್ರಣ ಕಾರ್ಯ ಬಹು ಮುಖ್ಯವಾದುದೆಂಬುದನ್ನು ನಮ್ಮ ಮೇಲ್ವಿಚಾರಕಿ ಪುನಃ ಪುನಃ ಒತ್ತಿ ಹೇಳಿದರು. ಅವರು ಆಗಾಗ್ಗೆ ಹೇಳುತ್ತಿದ್ದರು—'ನೆರೆ ಆಸ್ಪತ್ರೆಯ ಜವಾನನೊಬ್ಬ ಸರ್ಕಾರದ ಪರ್ಮಿಟ್ ಇಲ್ಲದೆ, ಮಗುವಿನ ಜನನಕ್ಕೆ ಆಸ್ಪದ ಕೊಟ್ಟ ಅಪರಾಧಕ್ಕಾಗಿ ಕಠಿಣ ಜೈಲುವಾಸ ಅನುಭವಿಸುತ್ತಿದ್ದಾನೆ. ಇತ್ತೀಚೆಗೆ ಅಂತಹ ಭಯಂಕರ ಘಟನೆ ಜವಾನನಿಂದಾಗಿದೆ.'

'ಅವನೊಬ್ಬ ಹೆಚ್ಚು ಮಾತಾಡದ, ಐವತ್ತು ವಯಸ್ಸಿನ ಕುರೂಪಿ ಜವಾನ. ಅವನ ಏಕಮಾತ್ರ ಕೆಲಸ—ಎಳೆಯ ಮಕ್ಕಳನ್ನು ಹೊಂಡ ತೋಡಿ ಹೂಳುವುದು. ಒಂದು ಶಿಶುವಿನ ಹೆಣವ ಗಂಟನ್ನು ಹೂತು ಬಂದರೆ ಮೂವತ್ತು ಯುವಾನ್ (ರೂ. ೧೩೦/-) ಸಿಗುತ್ತದೆ. ಅವನು ಸರಾಸರಿ ನಾಲ್ಕು ಮಕ್ಕಳನ್ನು ದಿನಕ್ಕೆ ಹೂಳುತ್ತಾನೆ. ಪ್ರತಿಫಲವಾಗಿ ಬರುವ ಹಣ, ಡಾಕ್ಟರರ ಸಂಬಳದ ಇಮ್ಮಡಿ ಮೀರುತ್ತದೆ. ನನ್ನ ಸಹೋದ್ಯೋಗಿಯ ಹತ್ತಿರ 'ಯಾಕೆ ಹೀಗೆ?' ಎಂದು ಕೇಳಿದೆ. ಏಕೆಂದರೆ—ಆ

ಕೆಲಸ ಮಾಡಲು ಅವನಲ್ಲದೆ ಯಾರೂ ಒಪ್ಪುವುದಿಲ್ಲ. ಆ ಕೆಲಸದ ಹೆಚ್ಚಿನ ವಿವರ ಕೇಳಿದಾಗ ಆಕೆ ಹೇಳಿದಳು 'ಎಷ್ಟೋ ವೇಳೆ ಗರ್ಭಪಾತ ವಿಫಲವಾದಾಗ, ಆತನ ಕೆಲಸ ಜೀವಂತ ಮಗುವನ್ನೇ ಹೂಳಬೇಕು. ಅನಂತರ ಏನಾಗುತ್ತದೋ ಏನೋ? ಅಂತು ಸಂತಾನ ನಿಯಂತ್ರಣ ಕಾನೂನನ್ನು ಅಕ್ಷರಶಃ ಪಾಲಿಸಲೇಬೇಕು.

ನನ್ನ ಸಹೋದ್ಯೋಗಿ ಇನ್ನೊಂದು ಘಟನೆ ತಿಳಿಸಿದಳು. ಒಂದೆರಡು ವಾರಗಳ ಹಿಂದೆ, ಸೂಲಗಿತ್ತಿಯೊಬ್ಬಳು ಗರ್ಭಪಾತ ವಾದ ಪಿಂಡ ಒಂದನ್ನು ಹೂಳುವುದಕ್ಕೆ ಜವಾನನಿಗೆ ಕಳಿಸಿದಳು. ಆತ ತಾತ್ಕಾಲಿಕ ವಾಗಿ ಮಾಳಿಗೆಯ ಮೆಟ್ಟಲಡಿಯಲ್ಲಿ ಮುಚ್ಚಿಟ್ಟು ಹೊರಹೋದ. ಅಷ್ಟರಲ್ಲಿ ಆ ಶಿಶು ಚೇತರಿಸಿ ಅಳುವುದಕ್ಕೆ ಶುರು ಮಾಡಿತು. ನಿತ್ಯದಂತೆ ಪೋಲಿಸರು ಮಗು ಕಿರುಚುವುದನ್ನು ಕೇಳಿ ಮೇಲ್ವಿಚಾರಕಿ ಯನ್ನು ಪ್ರಶ್ನಿಸಿದ. 'ಅದು ಕಾನೂನು ಬಾಹಿರ ಶಿಶು. ಅದನ್ನು ಹೂಳಲಿಕ್ಕೆ ಕಳಿಸಿ ದ್ದೇವೆ. ಜವಾನನನ್ನು ಈಗಲೇ ಕರೆಸಿ ತನ್ನ ಕೆಲಸ ಮಾಡುವಂತೆ ನಾನು ನೋಡಿ ಕೊಳ್ಳುತ್ತೇನೆ' ಎಂದು ಹೇಳಿ ಕಾನೂನನ್ನು ಸರಿಯಾಗಿ ಪಾಲಿಸದ್ದಕ್ಕೆ ಕ್ಷಮೆ ಕೇಳಿ ದರು.

ನಂತರದ ಸ್ಟಾಫ್ ಮೀಟಿಂಗಿನಲ್ಲಿ ಸೂಚನೆ ಕೊಡಲಾಯಿತು. 'ಇನ್ನು ಮುಂದೆ ಗರ್ಭಪಾತವಾದ ಕೂಡಲೇ ಆ ಪಿಂಡವನ್ನು ಹಾಗೆಯೇ ಹೂಳುವುದಕ್ಕೆ ಕಳಿಸಬೇಡಿ, ಅದು ಜೀವಂತವಾಗಿರಲೂ ಸಾಕು. ಅದಕ್ಕೆ ಮಾರಕ ಇಂಜೆಕ್ಷನ್ ಕೊಟ್ಟು ಹೂಳುವು ದಕ್ಕೆ ಕಳಿಸಿ.

ಈಗ, ನಾನು ಮುಂಜಾಗರೂಕತೆ ತೆಗೆದು ಕೊಂಡು ಪ್ರಸೂತಿ ಗೃಹಕ್ಕೆ ಸಾಗಿದೆ.

ಛಳಿಗಾಳಿಯಿಂದ ಮುಖವೆಲ್ಲ ಒರಟಾಗಿ ರುವ ರೈತನೊಬ್ಬ ನನ್ನ ಕೈಯನ್ನು ಗಟ್ಟಿ ಯಾಗಿ ಹಿಡಿದು ನಿಲ್ಲಿಸಿ 'ಡಾಕ್ಟರೇ, ಈ ಗಂಡು ಮಗುವಿಗಾಗಿ ಮೊದಲಿಂದಲೇ ಬಹುವಾಗಿ ಬಯಸಿದ್ದೆವು. ದಯಮಾಡಿ ಅದನ್ನು ಕೊಲ್ಲಬೇಡಿ' ಎಂದು ದೈನ್ಯದಿಂದ ಕಣ್ಣೀರು ಸುರಿಸುತ್ತ ಬೇಡಿಕೊಂಡ.

ಅವನಿಂದ ಬಿಡಿಸಿಕೊಂಡು ಮುಂದು ವರಿದು ಶೌಚಾಲಯಕ್ಕೆ ಹೋದೆ. ಈಗಲೂ ಆ ಮಗು ನೆಲದ ಮೇಲೆ ಜೀವಂತವಾಗಿದೆ. 'ನಾನು ಹೇಳಿದಂತೆ ಏಕೆ ಮಾಡಲಿಲ್ಲ?' ಎಂದು ಮಿಡ್‌ವೈಫನ್ನು ಕೇಳಿದೆ. 'ಈ ಮಗುವನ್ನು ಯಾವನು ಹೆಕ್ಕಿಕೊಂಡು ಹೋಗುತ್ತಾನೆ?' ಅವಳ ಯೋಚನೆ—'ಈ ಮಗುವನ್ನು ಬದುಕಲಿಕ್ಕೆ ಯಾರು ಬಿಡು ತ್ತಾರೆ' ಎಂಬುದಾಗಿತ್ತು.

ಅವಳು ವಿಸ್ಮಯದಿಂದ ನೋಡುತ್ತಿರು ವಾಗ, ಆ ಅಳುವ ಮಗುವನ್ನು ಎತ್ತಿ ಕೊಂಡು ಪ್ರಸೂತಿ ಗೃಹಕ್ಕೆ ಹೋದೆ. ಕಿರುಚುತ್ತಿರುವ ಶಿಶುವನ್ನು ಮೃದುವಾದ ಹಾಸಿಗೆಯ ಮೇಲೆ ಇಟ್ಟೆ.

ಈ ಕೆಲಸ ನಾನು ಮಾಡಲಾರೆ:

ಅಲ್ಟ್ರಾವೈಲೆಟ್ ಹೀಟ್ ಲ್ಯಾಂಪಿನಡಿ ಯಲ್ಲಿಟ್ಟು, ಆಕ್ಸಿಜನ್ ಟ್ಯೂಬನ್ನು ಮೂಗಿನ ಕೆಳಭಾಗಕ್ಕಿಟ್ಟಾಗ ಮಗುವಿನ ಕೈಕಾಲುಗಳು ನಸುಕೆಂಪಾದುವು, ಮೃದು ವಾದ ಹಾಸಿಗೆಯ ಮೇಲೆ ಮಗುವನ್ನು ಬೆಚ್ಚಗಾದ ಹೊದಿಕೆಯಿಂದ ಸುತ್ತಿದೆ.

ಅಷ್ಟರಲ್ಲಿ ಮಿಡ್‌ವೈಫ್ ಇನ್ನೊಂದು ಇಂಜೆಕ್ಷನ್ ತಯಾರಿಸಿದಳು. ಈಗಿನದು ಆಲ್ಕಹಾಲ್ ಇಂಜೆಕ್ಷನ್, ಅದನ್ನೊಂದು ಟ್ರೇದಲ್ಲಿಟ್ಟು ಹಾಸಿಗೆಯ ಬದಿಗಿಟ್ಟಳು. ಮಗುವಿನ ತಾಯಿ 'ದಯಮಾಡಿ ಈ ಕೆಲಸ ಮಾಡಬೇಡಿ' ಎಂದು ಮತ್ತೊಮ್ಮೆ ದೈನ್ಯದಿಂದ ಅತ್ತಳು. ಮಂಚದ ಸರಳನ್ನು ಹಿಡಿದುಕೊಂಡು ಮುಂದೆಬರುತ್ತ ಮಗುವನ್ನು ಸೆಳೆಯಬಂದಳು. ನಾನಾಗ ಅವಳತ್ತ ಬಂದು ತಡೆದೆ.

'ಶಾಂತಳಾಗು ತಾಯೀ' ಎಂದು ಅವಳನ್ನು ದಿಂಬಿಗೆ ಒರಗುವಂತೆ ಮಾಡಿದೆ. ಮೆಲ್ಲುನುಡಿಯಲ್ಲಿ ನಾನವಳಿಗೆ ಹೇಳಿದೆ. 'ನಿನ್ನ ಮಗುವಿಗೆ ಕೇಡು ಮಾಡುವುದಿಲ್ಲ. ನಾನು ಸಹಾಯಮಾಡಲು ಪ್ರಯತ್ನಿಸುತ್ತಿರುವೆ.' ಎಂದಾಗ ಆಕೆ ಅಳಲಿಕ್ಕೆ ಶುರುಮಾಡಿ 'ಪ್ರಿಯ ಡಾಕ್ಟರ್ರೇ, ಜೀವನಪರ್ಯಂತ ನಾನು ನಿಮಗೆ ಕೃತಜ್ಞಳಾಗಿರುವೆ' ಎಂದು ಕಣ್ಣೀರೊರಸಲಿಕ್ಕೆ ಶುರುಮಾಡಿದಳು.

ಅಷ್ಟರಲ್ಲಿ ಸೂಲಗಿತ್ತಿ ಕ್ಲಿಪ್ ಬೋರ್ಡನ್ನು ಹಿಡಿದುಕೊಂಡು ಬಂದಳು. 'ಏನನ್ನು ಬರೆಯಲಿ—ಈ ಕೇಸ್‌ಶೀಟಿನಲ್ಲಿ? ಈ ವರೆಗಿನ ರಿಪೋರ್ಟಿನಲ್ಲಿ ಮಧ್ಯರಾತ್ರಿ ೧-೩೦ಕ್ಕೆ ಒಂದು ಜೀವಂತ ಗಂಡು ಮಗುವಿನ ಹೆರಿಗೆ' ಎಂದು ಬರೆದಿದೆ. ಈ ಚಾರ್ಟನ್ನು ಭರ್ತಿ ಮಾಡಿ ನಾನು ಮನೆಗೆ ಹೋಗಬೇಕಾಗಿದೆ. ಎಂದಾಗ 'ಯಾವುದನ್ನೂ ಬರೆಯಬೇಡ'ಎಂದು ನಾನು ಕಟ್ಟುನಿಟ್ಟಾಗಿ ಹೇಳಿದೆ. ಸೋತು ಸುಣ್ಣವಾದ ಮಿಡ್‌ವೈಫ್ ಹಾಗೆಯೇ ಮನೆಗೆ ಸಾಗಿದಳು.

ನಾನು ಮಗುವಿನತ್ತ ನೋಡಿದೆ. ಅದರ ಮುಗ್ಧ ಮುಖ; ಕಪ್ಪುಗುಂಗುರು ಎಳೆ ಕೂದಲುಗಳಿಂದ ಸುತ್ತುವರಿದಿದೆ. 'ಇದರ ಜೀವನ—ದೇವರ ವರದಾನ' ನನಗನಿಸಿತು —'ಇದನ್ನು ಅಪಹರಿಸಲಿಕ್ಕೆ ಯಾರಿಗೂ ಹಕ್ಕಿಲ್ಲ.' ಈ ಯೋಚನೆ ದೃಢವಾಗಿ ನನ್ನ ಮನಸ್ಸನ್ನಾವರಿಸಿತು. 'ಇದನ್ನು ಇನ್ನಾರೋ ಹೇಳುತ್ತಿರುವಂತೆ ನನಗನಿಸಿತು. ದೇವರು ಈ ರೀತಿ ಮನುಷ್ಯರನ್ನು ಮಾತಾಡಿಸುತ್ತಾನೆಂದೂ ನನಗೆ ವಿಸ್ಮಯವಾಯಿತು.

ನಂತರದ ಎರಡು ಗಂಟೆ ಮಗುವನ್ನು ಕಾಯುತ್ತಿದ್ದೆ. ಕ್ರಮೇಣ ಅದು ವ್ಯೆಮುರಿಯುವುದನ್ನು ಬಿಟ್ಟು ಶಾಂತ ನಿದ್ರೆ ಮಾಡತೊಡಗಿತು.

ಕೊನೆಯದಾಗಿ, ಮೇಲ್ವಿಚಾರಕಿಯನ್ನು ಪುನಃ ನೋಡ ಹೋದೆ. 'ನನ್ನನ್ನು ಕ್ಷಮಿಸಿರಿ, ಈ ಕೆಲಸ ನಾನು ಮಾಡಲಾರೆ. 'ಇದು ಕೊಲೆ' ಎಂದು ನನಗನಿಸುತ್ತದೆ. ಕೊಲೆಗಾರಳಾಗಲಿಕ್ಕೆ ನಾನು ಬಯಸುವುದಿಲ್ಲ.'

ಮೇಲ್ವಿಚಾರಕಿ ಮಾತು ಗುಡುಗಿತು. 'ನೀನು ನಿನ್ನನ್ನು ಪ್ರಸವಶಾಸ್ತ್ರಜ್ಞೆ ಎಂದು ಹೇಗೆ ಹೇಳಿಕೊಳ್ಳುತ್ತೀ? ಈ ಸಮಸ್ಯೆಯನ್ನು ತತಕ್ಷಣ ಬಗೆಹರಿಸಲೇಬೇಕು! ಎಚ್ಚರಿಕೆ! ಪದೇ ಪದೇ ನನಗೆ ರಗಳೆ ಕೊಡಬೇಡ.'

ನನ್ನ ಹೃದಯ ಬಡಿತ ಜೋರಾಯಿತು. ನಾನು ಪ್ರಸೂತಿ ಗೃಹಕ್ಕೆ ಹಿಂದಿರುಗಿದೆ. ಮಗು ಈಗಲೂ ನಿದ್ರಿಸುತ್ತಿದೆ. ಆದರೆ, ಬಾಯನ್ನು ಬೆರಳಿಂದ ಮುಟ್ಟಿದಾಗ ತಲೆ ತಿರುಗಿಸಿ ಬೆರಳನ್ನು ಚೀಪತೊಡಗಿತು.

'ಈಗಲೂ ಹಸಿವೆ, ಮುದ್ದು ಮಗುವಿಗೆ' ಎಂದು ಪಿಸುಗುಟ್ಟಿದೆ. ನನಗೆ ಕಣ್ಣೀರು ಬಂತು.

ಕೂಡಲೇ 'ನಾನು ಒಬ್ಬಂಟಿಗ' ಎಂದು ಭಯವಾಯಿತು. ನನ್ನ ತಂದೆಯವರ ನೆನಪಾಯಿತು. ಅವರು ನನಗೆ ಸಹಾಯ ಮಾಡಬಲ್ಲರೇ?' ಪಡಸಾಲೆಯ ಫೋನಿಗೆ ದುಡ್ಡು ಹಾಕಿ ಅಪರರಾತ್ರಿಯಲ್ಲೂ ಡಯಲ್ ಮಾಡಿದೆ. ತಂದೆತಾಯಿಯವರು ಒಂದೇ ಫೋನಿನಿಂದ ಕೇಳುತ್ತಿದ್ದರು. 'ದೇವವಾಣಿಯನ್ನು ನಾನು ಕೇಳುತ್ತಿದ್ದೇನೆ. ಇದು ಒಂದು ಜೀವ! ನಾನು ಕೊಲೆಗೆ ಪಾಲುಗಾರಳಾಗಲಾರೆ.' ಎಂದು ಹೇಳಿ ಮುಗಿಸಿದೆ.

ಸುದೀರ್ಘ ಮೌನ ಆವರಿಸಿತು. ಕೊನೆಯದಾಗಿ ನನ್ನ ಅಪ್ಪ ಮಾತಾಡಿದರು. ಮೆಲುದನಿಯಲ್ಲಿ 'ನಾನು ನಿನ್ನ ವಿಚಾರದಲ್ಲಿ ಹೆಮ್ಮೆಪಡುತ್ತೇನೆ.' 'ನಾನೂ ಸಹ' ಅಮ್ಮ ಅಳುತ್ತ ದನಿಗೂಡಿಸಿದರು. 'ಆದರೆ ಜಾಗರೂಕಳಾಗಿರು. ಬರವಣಿಗೆಯಲ್ಲಿ ಯಾವುದನ್ನೂ ಕೊಡಬೇಡ. ರೆಕಾರ್ಡು ಶುದ್ಧವಾಗಿಡು. ಪಾರ್ಟಿಯವರು ನಿನಗೆ ಉದಾಹರಣೆಯಾಗಬಲ್ಲ ಕಠಿಣ ಸಜೆ ವಿಧಿಸಬಹುದು.'

ನನಗೆ ನೆನಪಾಯಿತು. ಚೀನಾದ ಸಾಂಸ್ಕೃತಿಕ ಕ್ರಾಂತಿ ಕಾಲದಲ್ಲಿ ನನ್ನ ತಂದೆಯವರನ್ನು ಬಂಧಿಸಿದ್ದರು. ನಾನಾಗ ಎಂಟು ವರ್ಷದವಳಾಗಿದ್ದೆ. ಅವರ ಅಪರಾಧ—ಕ್ರಾಂತಿ ವಿರೋಧಿಯೆಂದೆನಿಸಿದ್ದ ಅಧಿಕಾರಿಯನ್ನು ಔಷಧಿ ಕೊಟ್ಟು ಬದುಕಿಸಿದ್ದಕ್ಕೆ ನನ್ನ ತಂದೆಯವರಿಗೆ ಶಿಕ್ಷೆಯಾಗಿತ್ತು. ದೂರದ ಹಳ್ಳಿಗಾಡಿಗೆ ಅವರನ್ನು ಗಡಿಪಾರು ಮಾಡಿದ್ದರು. ನನ್ನ ತಾಯಿಯನ್ನು ಕೂಲಿಗಾರಳನ್ನಾಗಿ ಲೇಬರ್ ಕ್ಯಾಂಪಿಗೆ ಕಳಿಸಿದ್ದರು. ನಾಲ್ಕು ವರ್ಷದ ನನ್ನ ತಮ್ಮನನ್ನು ಮತ್ತು ನನ್ನನ್ನು ನಮ್ಮ ನೆರೆಮನೆಯಲ್ಲಿಟ್ಟಿದ್ದರು. ಆಗ ಶೋಚನೀಯ ಸ್ಥಿತಿಯಲ್ಲಿ ನಾವಿದ್ದೆವು. ನನ್ನ ತಾಯಿಗೆ ನೀಡಿದ ಚಿತ್ರಹಿಂಸೆ ಮತ್ತು ಉಪವಾಸಗಳ ಕಡುಕಹಿ ಅನುಭವ ನಮ್ಮ ನೆನಪಿಂದ ಹೋಗಿಯೇ ಇಲ್ಲ.

ನನ್ನ ನಿರ್ಧಾರ ನಡುಗತೊಡಗಿತು. ಅಷ್ಟರಲ್ಲಿ ನನ್ನ ಅಪ್ಪ, ಫೋನಿನಲ್ಲಿ 'ನೀನು ದೇವರ ಮಗಳು. ಹಾಗೆಯೇ ಈ ಮಗು ಕೂಡ, ನೀನು ಈ ಮಗುವನ್ನು ಕೊಂದರೆ ನಿನ್ನ ತಮ್ಮನನ್ನು ಕೊಂದಂತೆಯೇ.'

ನಾನು ಬಾಡಿಹೋಗಿದ್ದೆ. ಆದರೂ ಮೆಟರ್ನಿಟಿ ವಾರ್ಡಿಗೆ ಧಾವಿಸಿದೆ. ಅಲ್ಲೆಲ್ಲಾ ಅಸ್ತವ್ಯಸ್ತವಾಗಿತ್ತು. ಪ್ರಸೂತಿಗೃಹಕ್ಕೆ ಬೀಗ ಹಾಕಿತ್ತು. ಮಗುವಿನ ತಂದೆ ಕಿರುಚಾಡುತ್ತ ಬಾಗಿಲಿಗೆ ತಲೆ ಬಡಿದುಕೊಳ್ಳುತ್ತಿದ್ದ. 'ನನ್ನ ಮಗುವನ್ನು ಕೊಲ್ಲಬೇಡಿ–ಬೇಡಿ'—ಎಂದು ಕೂಗಾಡುತ್ತಿದ್ದ. ಹಿಂದಿನ ಬಾಗಿಲಿಂದ ನಾನು ಪ್ರಸೂತಿಗೃಹ ಸೇರಿದೆ. ಅಲ್ಲಿ, ಮಗುವಿನ ಹಾಸಿಗೆಯ ಪಕ್ಕದಲ್ಲಿ ನನ್ನ ಮೇಲ್ವಿಚಾರಕಿ ಕೈಯಲ್ಲಿ ಇಂಜೆಕ್ಷನ್ ಸಿರಿಂಜ್ ಹಿಡಕೊಂಡು ನೆತ್ತಿಯ ಮೃದು ಭಾಗವನ್ನು ಬೆರಳಿಂದ ಹುಡುಕುತ್ತಿದ್ದರು. ಮಗುವಿನ ಹೊದಿಕೆ, ಆಕ್ಸಿಜನ್ ಟ್ಯೂಬ್ ಮುಂತಾದುವನ್ನು ತೆಗೆದುಹಾಕಲಾಗಿತ್ತು. ಆ ಮಗು ಭಯಂಕರವಾಗಿ ಅಳುತ್ತಿತ್ತು.

'ಇಂಜೆಕ್ಷನ್ ಕೊಡಬೇಡಿ' ಎಂದು ಬೊಬ್ಬಿಡುತ್ತ ನಾನು ಸಿರೆಂಜನ್ನು ಕಿತ್ತು

ಕೊಂಡೆ. ಮೇಲ್ವಿಚಾರಕಿ ನನ್ನನ್ನು ದುರುಗುಟ್ಟಿ ನೋಡಿ, ಭಯಸೂಚಕ ದನಿಯಲ್ಲಿ ಹೇಳಿದರು. 'ನೀನು ಹೀಗೆ ಅವಿಧೇಯತೆ ತೋರಿದರೆ, ಇನ್ನು ನೀನು ಎಂದಿಗೂ ಡಾಕ್ಟರಿಕೆ ಮಾಡಲಾರೆ.'

'ನಾನು ಡಾಕ್ಟರಿಕೆ ಮಾಡದಿದ್ದರೂ ಚಿಂತಿಲ್ಲ. ನಾನು ಕೊಲೆಗಾರಳಾಗಲಾರೆ' ಎಂದು ನಾನೂ ಉತ್ತರಿಸಿದೆ. ನನಗೊಂದು ಮಗುವನ್ನು ಪಡೆಯುವ ಹಕ್ಕನ್ನು ಬಿಟ್ಟುಕೊಡುವೆ. ಆದರೆ ನಾನೀ ಮಗುವನ್ನು ಕೊಲ್ಲಲಾರೆ.' ನನಗಾಗ ಹೊಳೆಯಿತು— 'ಯಾಕೀ ಮಗುವನ್ನು ದತ್ತು ತೆಗೆದುಕೊಳ್ಳಬಾರದು?'

'ನೀನು ಸಂಪೂರ್ಣ ತಲೆ ಕೆಟ್ಟವಳಾಗಿದ್ದೀ' ಎಂದು ಗದರಿಸಿ ಮೇಲ್ವಿಚಾರಕಿ, ಹೊರ ಹೋದಳು. ಪುನಃ ನಾನು ಮಗುವನ್ನೆತ್ತಿಕೊಂಡು ಉಪಚರಿಸಿದೆ. ಆಕ್ಸಿಜನ್ ಟ್ಯೂಬನ್ನು ಜೋಡಿಸಿದೆ. ಅವನು ಸುಮ್ಮನಾದನು. ಅವನ ಕೆಂಬಣ್ಣ ಪುನಃ ಮೂಡಿ ಬಂತು.

ಮರುದಿನ ಮುಂಜಾನೆ ಎಂಟು ಗಂಟೆಗೆ ಆಡಳಿತಾಧಿಕಾರಿ ಆಸ್ಪತ್ರೆಯ ಕಛೇರಿಗೆ ಬಂದರು. ಅವರಿಗೆ ನಡೆದ ವರದಿಯನ್ನು ಕೊಡಲಾಗಿತ್ತು. ಕಛೇರಿಗೆ ನನಗೆ ಕರೆಬಂತು. 'ನಿನ್ನ ಕರ್ತವ್ಯಪಾಲನೆಗೆ ನೀನೇಕೆ ಒಪ್ಪಲಿಲ್ಲ?' ಎಂದು ಆಕ್ಷೇಪಿಸಿದರು. 'ಈ ಜನ ನಿನ್ನ ಸಂಬಂಧಿಕರೇ? ಅಥವಾ ನೀನವರಿಂದ ಲಂಚ ತೆಗೆದುಕೊಂಡೆಯಾ?'

'ಅವರ ಭಾಷೆ ಮಾತಾಡಲಿಕ್ಕೆ ಸಹ ನನಗೆ ಬರುವುದಿಲ್ಲ. ಬೇಕಿದ್ದರೆ ನನ್ನ ಬಳಿ ಇದ್ದ ಹಣಕ್ಕಾಗಿ ಜಪ್ತಿ ಮಾಡಿಸಿ.'

ಅಷ್ಟರಲ್ಲಿ ಸ್ಥಳೀಯ ಕುಟುಂಬ ಯೋಜನಾ ಕಛೇರಿಯ ಹಿರಿಯ ಅಧಿಕಾರಿ, ಬೆಲೆ ಬಾಳುವ ಬ್ರೀಫ್ ಕೇಸನ್ನು ತೆರೆದು, ಒಂದು ಫೈಲನ್ನು ತೆಗೆದುಕೊಂಡರು. ಜನನ ನಿಯಂತ್ರಣ ವಿಚಾರದ ನಿರ್ದೇಶನ ಷರತ್ತನ್ನು ಓದಿದರು. ಅದು ಹೀಗಿತ್ತು. 'ಕುಟುಂಬ ಯೋಜನಾಧಿಕಾರಿಯ ಕರ್ತವ್ಯ ಪರಿಪಾಲನೆಗೆ ಅಡ್ಡಿಪಡಿಸುವವರು ಕಠಿಣ ಶಿಕ್ಷಾರ್ಹರಾಗುತ್ತಾರೆ.'

ಓದಿಯಾದ ನಂತರ ಆತ ನನ್ನನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿ ಹೇಳಿದ— 'ಈ ಮಗು ಬದುಕುವುದು ಕಾನೂನು ವಿರುದ್ಧ ಎಂದು ಈಗಲಾದರೂ ತಿಳಿಯಿತೇ?'

'ನಾವಾರಿಗೂ ಇದನ್ನು ನಿರ್ಣಯಿಸಲು ಹಕ್ಕಿಲ್ಲ.' ನಾನೆಂದೆ.

ಆ ಮನುಷ್ಯನಿಗೆ ಕೋಪ ಏರಿತು. 'ನಾವೀಗ ಸರ್ಕಾರದ ನೀತಿ ವಿಚಾರದಲ್ಲಿ ಮಾತಾಡುತ್ತಿದ್ದೇವೆ. ನೀನು ಸರ್ಕಾರೀ ಕಾನೂನನ್ನು ಮುರಿದಿದ್ದೀಯಾ?'

'ನಾನು ಹಾಗೆ ಮಾಡಿದ್ದೇನೆಂದೆಣಿಸುವುದಿಲ್ಲ.'

ಬಹಳ ಒಳ್ಳೆಯದು. ನಾವೀಗ ಹೋಗಿ ಆ ಮಗುವಿಗೆ ಮಾರಕ ಇಂಜೆಕ್ಷನ್ ಕೊಡುವ.'

'ಇಲ್ಲ, ನಾನೊಪ್ಪುವುದಿಲ್ಲ.' 'ಹಾಗಾದರೆ ನೀನು ಕಾನೂನನ್ನು ಮುರಿದೆ ಎಂದು ಒಪ್ಪಿಕೊಂಡೆ. ಇದಕ್ಕಾಗಿ ಈಗಲೇ ನಿನ್ನನ್ನು ಬಂಧಿಸಲಿಕ್ಕೆ ನನಗಧಿಕಾರ ಇದೆ.'

ಗಾಬರಿಯಾಗಿ, ನಾನು ಇಲ್ಲಿಂದ ನುಣುಚಿಕೊಳ್ಳಲು ಉಪಾಯ ಹುಡುಕತೊಡಗಿದೆ. 'ನಾನು ಕಳೆದ ೨೪ ಗಂಟೆ ಡ್ಯೂಟಿಯಲ್ಲಿದ್ದುದರಿಂದ ನನಗೆ ಸರಿಯಾಗಿ ಯೋಚಿಸಲಾಗಲಿಲ್ಲ. ನನಗೆ ತಲೆತಿರುಗುತ್ತಿದೆ. ನನ್ನ ಕೆಲಸದ ವೇಳೆ ಮುಗಿಯಿತು' ಕುಂದಿದ ಸ್ವರದಲ್ಲಿ ಹೇಳಿದೆ.

'ಇದು ಸತ್ಯವಲ್ಲ', ನಿನ್ನ ಕೆಲಸ ನೀನು ಮುಗಿಸಿಲ್ಲ.'

'ದಯೆ ತೋರಿಸಿರಿ' ಎಂದು ನಾನಾಗ ಅಳಲಾರಂಭಿಸಿದೆ. ಕೈಕಾಲು ನಡುಗಿತು; ಕಣ್ಣು ಕತ್ತಲೆ ಬೀರಿತು. ನೆಲದ ಮೇಲೆ ಬಿದ್ದೆ, ಅಷ್ಟು ಮಾತ್ರ ನೆನಪಿದೆ.'

ನನಗೆ ಎಚ್ಚರವಾದಾಗ ಡಾಕ್ಟರುಗಳ ವಿಶ್ರಾಂತಿ ಕೋಣೆಯ ಹೊರಜಗಲಿಯಲ್ಲಿದ್ದೆ. ಅಷ್ಟರಲ್ಲಿ ನಡುಮಧ್ಯಾಹ್ನವಾಗಿತ್ತು.

'ಆ ಮಗು' ಎಂದು ಕಿರುಚಿ, ಹಾರಿ ಕೊಂಡು ಪ್ರಸೂತಿಗೃಹಕ್ಕೆ ಓಡಿದೆ. ಆ ಕಿರು ಹಾಸಿಗೆ ಖಾಲಿಯಾಗಿತ್ತು. 'ಎಲ್ಲಿ' ಸೂಲ ಗಿತ್ತಿಯನ್ನು ಕೇಳಿದೆ. ಕುಟುಂಬ ಯೋಜನಾ ಕಛೇರಿಯ ಆ ಮನುಷ್ಯ 'ಇಂಜೆಕ್ಷನ್ ಕೊಡಿ' ಎಂದು ಆಜ್ಞಾಪಿಸಿದ....ಅವಳು ತುಂಬಿದ ಕಣ್ಣುಗಳನ್ನು ಅತ್ತ ತಿರುಗಿಸಿದಳು.

'ನನ್ನ ಎಲ್ಲ ಪ್ರಯತ್ನಗಳ ನಂತರವೂ ಆ ಚಿಕ್ಕ ಮಗುವನ್ನು ಕೊಂದರು.'

ಡಾ|| ಯಿನ್‌ವಾಂಗ್‌ಳನ್ನು ಚೈನಾದ ಕುಟುಂಬ ಯೋಜನಾ ಕಾನೂನನ್ನು ಮುರಿದುದಕ್ಕೆ—ದೂರದ ಭಯಂಕರ ಕಾಡಿಗೆ ಎತ್ತಂಗಡಿ ಮಾಡಿದರು. ಆಗ, ಆಕೆ ಅಮೆರಿಕಾದಲ್ಲಿ ರಾಜಕೀಯ ಆಶ್ರಯಕ್ಕಾಗಿ ಪ್ರಾರ್ಥಿಸಿಕೊಂಡು, ಕಟ್ಟಕಡೆಗೆ ಅಮೆರಿಕಾಕ್ಕೆ ಪಾರಾದಳು. ಆಕೆ ಹೇಳು ತ್ತಾಳೆ. 'ನಾನು ಅದೃಷ್ಟವಂತೆ. ನಾನು ಆತ್ಮಸಾಕ್ಷಿಯನ್ನು ಮುರಿದು ಜೀವನ ಸಾಗಿ ಸುವ ರಾಷ್ಟ್ರದಲ್ಲಿಲ್ಲ. ಚೀನಾದ ನನ್ನ ಸಹೋದ್ಯೋಗಿಗಳು ಅಷ್ಟು ಪುಣ್ಯವಂತರಲ್ಲ, ಅವರು ಆತ್ಮಶಕ್ತಿಯನ್ನೇ ಕೊಲ್ಲಲಿರುವುದು ದೊಡ್ಡ ದುರಂತ.

ಕಳೆದ ಒಂದು ದಶಮಾನದಲ್ಲಿ ಚೀನಾದ ಆಸ್ಪತ್ರೆಗಳಲ್ಲಿ ಹಸುಗೂಸುಗಳ ಕೊಲೆಗಳ ಸಂಖ್ಯೆ ಹೆಚ್ಚುತ್ತಿದೆ ಎಂಬ ಸುದ್ದಿ ಅಮೆರಿಕಾದ ವಾಶಿಂಗ್ಟನ್ ಪೋಸ್ಟರ್‌ನಲ್ಲಿ, ವಾಲ್ ಸ್ಟ್ರೀಟ್ ಪತ್ರಿಕೆಗಳಲ್ಲಿ ಮತ್ತು ಮಾನವಹಕ್ಕು ನಿರ್ವಹಣಾ ಪತ್ರಿಕೆಗಳಲ್ಲಿ ಪ್ರಚಾರವಾಗುತ್ತಿದೆ- ಡಾ|| ಯಿನ್‌ವಾಂಗ್ ಅವರ ವಿಸ್ತೃತ ಕಥೆ ಅಥವಾ ವ್ಯಥೆ—ತಿಂಗಳು, ದಿನಾಂಕಗಳೊಡನೆ ಪ್ರಕಟವಾದುದು ವಿಶ್ವಾಸಾರ್ಹ ಸತ್ಯಕಥೆಯಾಗಿದೆ.

'ಒಂದು ಸಂಸಾರ ಒಂದು ಮಗು' ನೀತಿ, ಅದರ ಹಿಂದಿನ ಕ್ರೌರ್ಯ ಚೀನಾದೇಶದ ಕಪ್ಪು ಚರಿತ್ರೆ–ಎಂದು ಕ್ಯಾಲಿಫೋರ್ನಿಯಾದ 'ಏಷ್ಯನ್ ಸ್ಟಡೀಸ್' ಸಂಸ್ಥೆಯ ನಿರ್ದೇಶಕ ಸ್ಟೀವನ್ ಮಾಸ್ಟರ್ ಮುಂತಾದವರು ಹೇಳುತ್ತಾರೆ.

ಆದರೆ ಮಾನವೀಯತೆಯನ್ನೇ ಕೊಲೆಗೈವ ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ 'ಪ್ರಾಪಂಚಿಕ ಮಹಿಳಾ ಸಮ್ಮೇಳನ' ನಡೆದುದು ಕುಹಯಾದ ಅಣಕವಲ್ಲವೇ?

ಮಹತ್ವಾಕಾಂಕ್ಷೆ ಕೆಟ್ಟದಲ್ಲ. ಮಹತ್ವಾಕಾಂಕ್ಷೆಯು ದೈವದೊಡನೆ ಸೆಣಸಾಡಲು ಮಾನವನಿಗೆ ಸ್ಫೂರ್ತಿಯನ್ನು ನೀಡುತ್ತದೆ.

—ಮಿಚೆಲ್

ನಾರುಹುಳುಗಳ ಸಂತೆಯಲ್ಲಿ-ನಾನು

ಡಾ॥ ಸ. ಜ. ನಾಗಲೋಟಿ ಮಠ

ಸುಮಾರು ೨೫ ವರ್ಷಗಳ ಹಿಂದೆ ನಾನು ಹಾಗೂ ನನ್ನ ಸ್ನೇಹಿತರು ಕೂಡಿಕೊಂಡು ಅಳವಂಡಿ ಎಂಬ ಹಳ್ಳಿಗೆ ಹೋಗಿ ಸಂಶೋಧನೆ ಕೈಗೊಂಡಿದ್ದೆವು. ಸಂಶೋಧನೆಯ ಕಾರ್ಯ ನಡೆದಾಗ ಹಲವಾರು ಸ್ವಾರಸ್ಯಕರ ಘಟನೆಗಳು ಜರುಗಿದ್ದವು. ಅವುಗಳನ್ನು ಈ ಲೇಖನದಲ್ಲಿ ಮೂಡಿಸಲು ಪ್ರಯತ್ನಿಸಲಾಗಿದೆ.

ಅಳವಂಡಿಯ ಹಾವು

೧೯೭೧ರಲ್ಲಿ ನಾನು ಮೈಕ್ರೋಬೈಯೋಲೋಜಿ ವಿಭಾಗದಲ್ಲಿದ್ದೆ. ಆ ವಿಷಯದ ಮೇಲೆ ಒಂದು ಮ್ಯೂಸಿಯಮ ನಿರ್ಮಿಸಲು ಪ್ರಯತ್ನಿಸುತ್ತಿದ್ದೆ. ಹಲವಾರು ಹುಳುಗಳನ್ನು ಅಂದರೆ ಮಾನವ ಪರಾನ್ನ ಜೀವಿಗಳನ್ನು ಸಂಗ್ರಹಿಸುತ್ತಿದ್ದೆ. ಒಂದು ದಿನ ಪೇಪರನ್ನು ನೋಡುತ್ತಿರುವಾಗ ಸಣ್ಣದೊಂದು ಸುದ್ದಿ ಪ್ರಕಟವಾಗಿತ್ತು. ಅಳವಂಡಿ ಎಂಬ ಹಳ್ಳಿಯಲ್ಲಿ ನಾರುಹುಣ್ಣಿನ ಪಿಡುಗು ತಲೆ ಎತ್ತಿದೆ. ನೂರಾರು ಜನರು ಬಳಲುತ್ತಿರುವರು ಸರಕಾರ ಗಮನ ಹರಿಸಬೇಕು; ಎಂದು ಅದರ ಸಾರಾಂಶ ಇತ್ತು. ಆ ವಿಷಯವನ್ನು ಕಲಿಸುತ್ತಿದ್ದ ನನಗೆ ಆ ಸುದ್ದಿ ಸ್ವಾರಸ್ಯಕರವೆನಿಸಿತ್ತು. ನಾರು ಹುಣ್ಣು, ಪಿಡುಗು ರೂಪ ಪಡೆಯಲು ಸಾಧ್ಯವೇ ಇಲ್ಲ ಎನಿಸಿತು. ಯಾಕೆಂದರೆ ಹುಳದ ಮರಿ ದೇಹ ಸೇರಿದ ಮೇಲೆ ಸುಮಾರು ೬ ತಿಂಗಳಿಂದ ವರ್ಷದವರೆಗೆ ಕಾಯಬೇಕು. ಅನಂತರ ಒಂದೊಂದಾಗಿ ಹೊರ ಬರುತ್ತವೆ. ಅದು ಹೇಗೆ ಪಿಡುಗು ಆಗುವದು ಎಂದು ನನ್ನ ತರ್ಕ. ಆ ಊರಿಗೆ ಹೋಗಬೇಕೆಂದು ನಿಶ್ಚಯಿಸಿದೆ. ಎರಡು ದಿನ ರಜೆ ಬರೆದು ಬಸ್ಸು ಹಿಡಿದುಕೊಂಡು ಅಳವಂಡಿಗೆ ಹೋದೆ.

ಅದೊಂದು ನರಕವಾಗಿತ್ತು. ಊರಲ್ಲಿ ಆಡ್ಡಾಡ್ಡುವವರು ಬಹಳ ಕಡಿಮೆ. ಅವರೂ ಕುಂಟುತ್ತ ನರಳುತ್ತ ನಡೆಯುವವರು. ಸಂದಿಗೊಂದಿಗಳಲ್ಲಿ ವಿಚಿತ್ರ ಗಬ್ಬು ವಾಸನೆ. ಅಲ್ಲಲ್ಲಿ ನರಳಾಟ. ಕಟ್ಟೆಯ ಮೇಲೆ ಕುಳಿತು ಮಾತನಾಡುವವರು ಕೆಲವರು. ಅವರೂ ನರಳುವವರೇ. ಒಂದೊಂದು ಮನೆಯೊಳಗೆ ಪ್ರವೇಶಿಸಿದರೆ ಗಬ್ಬು ವಾಸನೆ ಇನ್ನು ಗಟ್ಟಿಗೊಳ್ಳುತ್ತಿತ್ತು. ಕಸಕಡ್ಡಿ ಹಾಗೇಯೇ ಬಿದ್ದಿದ್ದವು. ಮೂಲೆಗೊಬ್ಬರಂತೆ ನರಳುತ್ತ ಬಿದ್ದ ಜನರು. ಹಾಸಿಗೆ ಅಸ್ತವ್ಯಸ್ತ. ಮೈಮೇಲಿನ ಅರಿವೆ ಅಸ್ತವ್ಯಸ್ತ. ನೊಣಗಳ ಸಾಮ್ರಾಜ್ಯವೇ ಸಾಮ್ರಾಜ್ಯ. ನಾವು ಮನೆಯೊಳಗೆ ಕಾಲಿಡಬೇಕಾದರೆ ನಮ್ಮನ್ನು ತಡೆಯುವವು ನೊಣಗಳು ಹಾಗೂ ವಾಸನೆ.

ಮಲಗಿದ್ದ ರೋಗಿಗಳು ದೈನ್ಯದಿಂದ ಕೂಗುತ್ತಿದ್ದರು. "ನೀರು ನೀರು" ಎಂದು ಬಾಯಿ ಬಿಡುತ್ತಿದ್ದರು. ಎಲ್ಲರಿಗೂ ನಾರು ಹುಣ್ಣು, ವಿವಿಧ ಗಾತ್ರದ ಹುಣ್ಣು, ಕೀವುಗಡ್ಡೆ, ಕುರುಗಳು. ಪ್ರತಿ ಹುಣ್ಣಿನಿಂದ ಬಿಳಿ ದಾರದ ಎಳೆಯಂತೆ ಹೊರಡುವ ನಾರು ಹುಳ. ಹುಣ್ಣಿನ ಗಬ್ಬು ವಾಸನೆ. ನಮಗೆ ಸಹ್ಯವಾಗದು. ಒಂದು ಸಲ ವಾಸನೆ ತೆಗೆದುಕೊಂಡರೆ ಉಬ್ಬಳಿಕೆ ಬರುತ್ತಿತ್ತು. ಆದರೆ ಜನ ತಾಳಿದ್ದರು. ಇದೆಲ್ಲ ಕಂಡು ಊರಲ್ಲಿ ನಾರು ಹುಣ್ಣಿನ "ಪಿಡುಗು" ಅಲ್ಲ "ಮಹಾ ಪಿಡುಗು" ಬಂದಿದೆ ಅನ್ನಿಸಿ ಬೆಳಗಾವಿಗೆ ಮರಳಿದೆ.

ನಾರು ಹುಣ್ಣು ರೋಗ ಪಿಡುಗು ಅಲ್ಲ ಎನ್ನುವದನ್ನು ಸಿದ್ಧ ಮಾಡಲು ಹೊರಟ ನಾನು ಮಹಾ ಪಿಡುಗು ಅನ್ನುತ್ತ ಮರಳಿದೆ. ಅಲ್ಲಿಯವರೆಗೆ ನನಗೆ ನಾರು ಹುಣ್ಣಿನ ಬಗ್ಗೆ ಪುಸ್ತಕದ ತಿಳುವಳಿಕೆ ಇತ್ತು. ಅಂದಿನಿಂದ ಪ್ರತ್ಯಕ್ಷ ಪರಿಚಯವಾಯಿತು. ಆಸಲ ಅಳವಂಡಿಯಲ್ಲಿ ನಾನು ಮೂರು ಸಾವಿರಗಳಿಗಿಂತ ಹೆಚ್ಚು ಹುಣ್ಣು ಹಾಗೂ ಹುಳುಗಳನ್ನು ಕಂಡೆ. ಪ್ರತ್ಯಕ್ಷ ಅನುಭವ ಕೊಡುವ ಜ್ಞಾನಕ್ಕೆ ಮೇರೆ ಇಲ್ಲವೆಂದೇ ಹೇಳಬೇಕು. ನನ್ನೊಡನೆ ೬ ಜನ ವಿದ್ಯಾರ್ಥಿಗಳು ೪ ಜನ ವೈದ್ಯರು ಬಂದರು. ಒಂದು ತಿಂಗಳು ಆ ಊರಲ್ಲಿ ಸೇವೆ ಮಾಡಿದೆವು. ಊರವರ ಕೃತಜ್ಞತೆಯನ್ನು ಅವರ ಕಣ್ಣುಗಳಲ್ಲಿಯೇ ಕಂಡು ಈಜಾಡಿದೆವು. ವೈದ್ಯವಿದ್ಯಾರ್ಥಿಗಳು ಹಾಗೂ ವೈದ್ಯರು ನನ್ನೊಡನೆ ಕೇವಲ ಒಂದೇ ಹೊತ್ತು ಊಟಮಾಡಿ ನೀರು ಚಹಾ ಎನ್ನದೇ ದುಡಿದರು. ನಾರು ಹುಣ್ಣು ಬರುತ್ತದೋ ಎಂಬ ಹೆದರಿಕೆ ಬೇರೆ. ನಾರು ಹುಣ್ಣಿನ ನೋವು, ಬಳಲುವವರಿಗಿಂತ ನೋಡುವವರಿಗೇ ಜಾಸ್ತಿ ಅನ್ನಿಸುವದು. ಅಂದು ನಮಗೆ ದೊರೆತ ಅನುಭವ ಏನು ಕೊಟ್ಟರೂ ಸಿಗದು.

ಮೀಸೆ ಹೊತ್ತ ಬಸುರಿ

ಅಳವಂಡಿಯಲ್ಲಿ ನಾರು ಹುಳದ ಬಗ್ಗೆ ಸಂಶೋಧನೆ ನಡೆಯುತ್ತಿದ್ದಾಗ ಮನೆ ಮನೆಗೆ ಹೋಗಿ ಪ್ರತಿ ರೋಗಿಯನ್ನು ಭೇಟಿಯಾಗಿ, ಔಷದ ಕೊಟ್ಟು ಮಾತನಾಡಿಸಿಕೊಂಡು ಬರುತ್ತಿದ್ದೆವು. ಒಂದು ದಿನ ಮಧ್ಯಾಹ್ನ ಒಂದು ಮನೆಗೆ ಹೋದೆ. ಹೇಗಿದ್ದೀರಿ? ಎಂದು ಓರ್ವ ಹೆಣ್ಣು ಮಗಳನ್ನು ವಿಚಾರಿಸಿದೆ. ಆಕೆ ಹೇಳಿದಳು "ಸಾಹೇಬ್ರ, ಎಡಕಾಲಿನ ನೋವು ಕಡಿಮೆ ಆಗಿದೆ. ಬಲಗಾಲಿನಲ್ಲಿ ಮೂಗು ಮೂಡಿದ್ದು ನಾರಿನ ಮೀಸೆ ಹೊರಗ ಬಂದೈತಿ." ನನಗೋ ನಾರು ಹುಳದ ಬಗ್ಗೆ ಸಂಪೂರ್ಣ ಪರಿಚಯವಿತ್ತು. ಹಲವಾರು ಗ್ರಂಥ ಓದಿದ್ದೆ. ಚಿತ್ರ ನೋಡಿದ್ದೆ. ಹುಳಗಳನ್ನು ಸಹ ಕಂಡಿದ್ದೆ. ಅದೇ ಊರಿನಲ್ಲಿ ನೂರಾರು ಹುಳಗಳನ್ನು ಕಂಡಿದ್ದೆ. ಆದರೆ ಹುಳದ ಮೀಸೆಯು ಬಗ್ಗೆ ಕೇಳಿದ್ದಿಲ್ಲ. ಯಾರೂ ಎಲ್ಲಿಯೂ ಇದರ ಬಗ್ಗೆ ಬರೆದಿದ್ದಿಲ್ಲ. ಮತ್ತೆ ಆ ಹೆಣ್ಣು ಮಗಳನ್ನು ಕೇಳಿದೆ "ಮೀಸೆ ಅಂದರೇನು?" ಆಕೆ ಸಲುಗೆಯಿಂದಲೇ ನಗುತ್ತ (ನೋವಿನಲ್ಲೂ) "ಸಾಹೇಬ್ರ ನಾರಿಗೆ ಮೀಸೆ ಇರುತ್ತದೆ. ನೀವು ನೋಡಿಲ್ಲ ಏನ್ರಿ?" ಚಿಕ್ಕ ಹುಡುಗನಂತೆ ಸಣ್ಣ ಮುಖ ಮಾಡಿ ನೋಡಿಲ್ಲ ಎಂದೆ. "ಬರ್ರಿ, ಇಲ್ಲಿ ಬರ್ರಿ, ಇಲ್ಲಿದೆ ನೋಡ್ರಿ" ಎಂದಳು. ಹೊಸ ನಾರು

ಹೊರಬರುವ ಸ್ಥಳದ ಗುಳ್ಳೆಯ ಮೂಗು ಚಿವುಟಿದಳು. ಅವರೊಳಗಿಂದ ಬಿಳಿಯ ಕೂದಲಿನಂತಹ ಬಹಳ ನವಿರಾದ ಒಂದು ಎಳೆಯು ಹೊರ ಬಂದಿತ್ತು. ಆಕೆ ಅದನ್ನು ಹಿಡಿದು ಜಗ್ಗಿ ತೋರಿಸಿದಳು. ಮೆಲ್ಲಮೆಲ್ಲನೇ ಜಗ್ಗುತ್ತ ನಾರು ಹುಣ್ಣಿನ ಮೇಲ್ಭಾಗ ಕಾಣುವಂತೆ ಮಾಡಿದಳು. ನೋಡಲು ಅದು ನಾರು ಹುಣ್ಣಿಗೆ ಬಂದ ವಿಾಸೆಯಂತೆ ಇತ್ತು. ನನಗೆ ಒಂದು ರೀತಿಯ ಗೊಂದಲ. ಇಂಥದನ್ನು ನಾನು ನೋಡಿಯೇ ಇಲ್ಲವಲ್ಲ. ಆಕೆಗೆ ವಿನಂತಿಸಿದೆ ನೀನು ಈ ವಿಾಸೆ ಹರಿಯ ಬಾರದು. ಎಚ್ಚರದಿಂದ ಜೋಪಾನವಾಗಿಡ ಬೇಕು. ನಾರು ಹುಳು ಹೊರಬಂದಂತೆ ವಿಾಸೆ ಹಾಗೂ ಹುಳು ಜೊತೆ ಇರುವಾಗಲೇ ನನಗೆ ಕೊಡಬೇಕೆಂದೂ, ಅಷ್ಟು ಮಾಡಿದರೆ ಆಕೆಗೆ ಬಹುಮಾನ ಕೊಡುವೆನೆಂದು ಹೇಳಿದೆ. ಆಕೆಗೆ ಸಂತೋಷವಾಯಿತು. ಮೂರು ನಾಲ್ಕು ದಿನಗಳಲ್ಲಿ ಅವನ್ನು ನನಗೆ ಕೊಟ್ಟಳು. ವಿಾಸೆ ಮತ್ತೆ ನಾರು ಹುಳು ವನ್ನು ತೆಗೆದುಕೊಂಡು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದೆ. ಅದರ ಚಿತ್ರಗಳನ್ನು ಬರೆದೆ. ಫೋಟೋ ತೆಗೆದೆ. ಅದನ್ನು ಕತ್ತರಿಸಿ ಸೂಕ್ಷ್ಮದರ್ಶನದಲ್ಲಿ ಪರೀಕ್ಷಿಸಿದೆ. ಪ್ರತಿ ಹೆಜ್ಜೆಗೆ ನನ್ನಲ್ಲಿ ಉತ್ಸಾಹ ಉಕ್ಕುತ್ತಿತ್ತು; ಹೊಸ ಸಂಗತಿ ಬೆಳಕಿಗೆ ಬರುತ್ತಿದ್ದವು. ಇದೇ ರೀತಿ ನಾನು ಹಲವಾರು ರೋಗಿ ಗಳಿಂದ 'ವಿಾಸೆ' ಹಾಗೂ ನಾರು ಹುಳು ಗಳನ್ನು ಪಡೆದುಕೊಂಡು ಹಲವಾರು ತಜ್ಞ ರಿಗೆ ತೋರಿಸಿದೆ. ಚರ್ಚಿಸಿದೆ. ರಾಷ್ಟ್ರೀಯ ಸಮ್ಮೇಳನಗಳಲ್ಲಿ ಮಾತನಾಡಿದೆ. ಎಲ್ಲರಿಗೂ ಆಶ್ಚರ್ಯ. ಎಲ್ಲರೂ ನಮ್ಮ ಸಂಶೋಧನೆ ಯನ್ನು ಹೊಗಳಿದರು. ಇದರ ವಿವರವನ್ನು ಬೇರೆ ಬೇರೆ ದೇಶಗಳಿಗೆ ಕಳುಹಿಸಿದೆ. ನನ್ನ ಟೋಪ್ಪಿಗೆಯಲ್ಲಿ ಈ ಸಂಶೋಧನೆಯೊಂದು ಬಣ್ಣದ ಗರಿಯಂತಾಯಿತು.

ನನಗೆ ಈ "ವಿಾಸೆಯ" ಅರಿವನ್ನು ಇರು ವನ್ನು ಕೊಟ್ಟಾಕೆ ಶಾಲೆಯನ್ನು ನೋಡದ ಗುಗ್ಗೂ ಹೆಣ್ಣು ಮಗಳು. ಆಕೆಗೆ ಅದೊಂದು ಮಾಮೂಲು ಸಂಗತಿಯಾಗಿತ್ತು. ಆ ಊರಿನ ಕೆಲವು ಹಿರಿಯರಿಗೆ ಈ "ವಿಾಸೆ"ಯ ಅರಿವು ಇತ್ತು. ಅವರು ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲು ತಯಾರಿದ್ದಿಲ್ಲ. ಅದು ನನ್ನ ಪಾಲಿಗೆ ಬಂದದ್ದು ನನ್ನ ಪುಣ್ಯ. ಇಂಥ ಹಲವಾರು ಸಂಗತಿಗಳನ್ನು ನಾವು ರೋಗಿಗಳಿಂದ ಕಲಿಯುತ್ತೇವೆ, ಕೇಳು ತ್ತೇವೆ. ಆದರೆ ಬಹಳ ಸಲ ಅವು ದಡ್ಡರ ಕಲ್ಪನೆಗಳೆಂದು ನಿರ್ಲಕ್ಷಿಸುತ್ತೇವೆ. ನಿಜವಾಗಿ ನಾವು ದಡ್ಡರು ಅವರು ಜಾಣರು.

ನಮಗೆ ಕಾಣುವ ನಾರುಹುಳು ಹೆಣ್ಣು ಹುಳು. ಗಂಡುಹುಳು ದೇಹದೊಳಗೆ ಮರಣ ಹೊಂದುತ್ತದೆ. ಕಾರಣ ಅದು ನಮಗೆ ಕಾಣುವುದಿಲ್ಲ. ಇನ್ನು ದೇಹದಿಂದ ಹೊರ ಬೀಳುವ ನಾರುಹುಳು ನಿಜವಾಗಿ ತುಂಬು ಗರ್ಭಿಣಿ. ಅದರ ಗರ್ಭದಲ್ಲಿ ಸಾವಿರಾರು ಮರಿಗಳಿರುತ್ತವೆ. ಅವುಗಳನ್ನು ನೀರಿನಲ್ಲಿ ಬಿಡಲು ತಾಯಿ ನಮ್ಮ ಚರ್ಮ ಕೊರೆದು ಹುಣ್ಣು ಮಾಡಿ ಮರಿಗಳನ್ನು ಬಿಡುತ್ತಾಳೆ. ಇದೇ ಕಾರಣಕ್ಕಾಗಿ ನಾರುಹುಳುವಿಗೆ ಗರ್ಭಿಣಿ ಎಂದೂ ಅದರ ಮುಖದ ಮುಂದಿ ರುವ ಎಳೆಗೆ ವಿಾಸೆ ಎಂದು ಕರೆದಿರುವೆ.

ಮೂಗಿನಲ್ಲಿ ನಾಗಪ್ಪ

ನಾರುಹುಣ್ಣಿನ ಮೇಲೆ ಸಂಶೋಧನೆ ಗಳನ್ನು ನಡೆಸುತ್ತಿರುವಾಗ ಹಲವಾರು

ಬೇರೆ ರೋಗಗಳೂ ಸಹ ನಮಗೆ ಎದುರಾಗುತ್ತಿದ್ದವು. ಒಂದು ದಿನ ಒಬ್ಬ ರೋಗಿ ಮೂಗು ಹಿಡಿದುಕೊಂಡು ನರಳುತ್ತ ಬಂದನು. ಒಂದು ತಿಂಗಳಿನಿಂದ ಅವನ ಮೂಗು ಬಂದಾಗಿತ್ತು. ಇಪ್ಪತ್ತು ದಿನಗಳಿಂದ ಮೂಗಿನಿಂದ ಕೀವು ರಕ್ತ ಸೋರುತ್ತಿತ್ತು. ಗಬ್ಬು ವಾಸನೆ. ಮೂಗು ಊದಿಕೊಂಡಿತ್ತು. ಮೂಗಿನ ಸುತ್ತಲಿನ ಮುಖವು ಊದಿಕೊಂಡು ವ್ಯಕ್ತಿಯ ಚರ್ಯೆಯನ್ನೇ ವಿಕಾರಗೊಳಿಸಿತ್ತು. ನೋವು ತಾಳಲಾರದಷ್ಟಿತ್ತು.

ಪರೀಕ್ಷಿಸಿದೆವು ಮೂಗಿನಲ್ಲಿ ದುರ್ಮಾಂಸ ಬೆಳೆದಿತ್ತು. ಮುಟ್ಟಿದರೆ ರಕ್ತ ಚಿಮ್ಮುವಂತಿತ್ತು. ಒಂದೇ ಸಮನೆ ಮೂಗಿನಿಂದ ಕೀವು ರಕ್ತ ಸೋರುತ್ತಿತ್ತು. ರೋಗಿಯು ಸೊರಗಿ ಹೋಗಿದ್ದನು. ನಿಶ್ಯಕ್ತನಾಗಿದ್ದನು. ನುಂಗಲು ಸಹ ತೊಂದರೆ ಇತ್ತು. ಉಸಿರಾಡಿಸುವದೇ ದುಃಸಾಧ್ಯವೆನಿಸಿತ್ತು. ನಮ್ಮಿಂದ ಅವನಿಗೆ ಯಾವ ಸಹಾಯ ಆಗದು ಎಂದು ನನ್ನೊಡನೆ ಬಂದ ಒಬ್ಬ ಕಿರಿಯ ವೈದ್ಯರ ಸಂಗಡ ರೋಗಿಯನ್ನು ಮೂಗಿನ ತಜ್ಞರ ಕಡೆಗೆ ಕಳುಹಿಸಿದೆ. ಬೇರೆ ಊರಲ್ಲಿದ್ದ ಅವರು ತಾಳ್ಮೆಯಿಂದ ಪರೀಕ್ಷಿಸಿ ಅದು ಕ್ಯಾನ್ಸರ ಇರಬಹುದು ಎಂದರು, ಬೈಯಾಪ್ಸಿ ತೆಗೆಯಲು ಅಪಾಯವಿದೆ ಏನೂ ಮಾಡಲು ಬಾರದು. ಬೇರೆ ಕೇಂದ್ರಗಳಿಗೆ ಕಳುಹಿಸಿರೆಂದು ವಿನಂತಿಸಿದರು. ಕಿರಿಯ ವೈದ್ಯರು ಹಾಗು ರೋಗಿ ನನ್ನ ಕಡೆಗೆ ಮರಳಿ ಬಂದರು. ನೋಡೋಣ ನೋಡೋಣ ಎಂದು ಹೇಳುತ್ತಲಿದ್ದೆವು. ಏನೂ ಮಾಡಲು, ಹೇಳಲು ಬಾರದಾಗಿತ್ತು. ಕೊನೆಗೆ ಅವನನ್ನು ಮುಂಬಯಿಗೆ ಕಳುಹಿಸಲು ನಿಶ್ಚಯಿಸಿ ವಂತಿಗೆ ಮಾಡಿ ಹಣ ಕೂಡಿಸಿ ಅವನನ್ನು ರೈಲಿನಿಂದ ಕಳುಹಿಸಲು ವ್ಯವಸ್ಥೆ ಮಾಡಿದೆವು. ರೋಗಿ ಊರಿಗೆ ಹೊರಟು ನಿಂತ. ಹೋಗುವ ದಿನ ನಮಸ್ಕಾರ ಮಾಡಿ ಹೋಗಲು ಬಂದ. ಬಾಗಿ ನಮಸ್ಕರಿಸಲು ಪ್ರಯತ್ನಿಸುವಾಗ ಅವನಿಗೆ ಸೀನು ಬಂದಿತು. ಜೋರಾಗಿ ಎರಡು ಮೂರು ಸಲ ಸೀತು ಬಿಟ್ಟ. ಮೂಗಿನಿಂದ ಕೀವು ರಕ್ತ ಸುರಿಯತೊಡಗಿದವು. ಅದನ್ನು ನಿಯಂತ್ರಿಸುವುದು ಹೇಗೆ ಎಂದು ವಿಚಾರಿಸುತ್ತಿರುವಷ್ಟರಲ್ಲಿ ಮೂಗಿನ ಹೊರಳೆಯಿಂದ ನಾಲ್ಕು ಇಂಚು ಬಿಳಿಯ ದಾರದಂತಿರುವ ನಾರುಹುಳ ಜೋತಾಡ ಹತ್ತಿತ್ತು. ರೋಗಿ ಹೌಹಾರಿ ಚೀರಿದ. ನಾವೆಲ್ಲ ಅದನ್ನು ನೋಡಿ ತಬ್ಬಿಬ್ಬಾದೆವು. ಆದರೆ ಅವನಿಗೆ ಆದದ್ದು ನಾರುಹುಣ್ಣು. ಕ್ಯಾನ್ಸರ ಗಂಟು ಅಲ್ಲವೆಂದು ತಿಳಿಯಿತು. ಅದೊಂದು ಸಂತೋಷದ ವಿಷಯವಾಗಿತ್ತು. ರೋಗಿಗೆ ಸಮಾಧಾನ, ನಮಗಂತೂ ದೇವರು ಪ್ರತ್ಯಕ್ಷವಾದ ಅನುಭವ.

ನಾಯಿಯನ್ನೇ ಕಚ್ಚಿದ ಹುಳು

ಒಂದು ದಿನ ಚಿಕ್ಕ ಬಾಲಕನೊಬ್ಬ ಬಂದು ನನ್ನೆದುರಿಗೆ ನಿಂತ. ಏನೋ ಹೇಳಲು ಪ್ರಯತ್ನಿಸಿದ. ಆದರೆ ಹೇಳಲು ಆಗದು. ಅವನು ಸುಮಾರು ೮–೯ ವರ್ಷದವನಿರಬಹುದು. ಚಿಕ್ಕಹುಡುಗರೊಡಗೆ ಚೆನ್ನಾಗಿ ಮಾತನಾಡಲು ನಮ್ಮಲ್ಲಿ ಡಾ|| ಹಫೀಜ ಎಂಬ ತರುಣ ವೈದ್ಯರಿದ್ದರು. ಅವರಿಗೆ ಮಾತನಾಡಲು ಹೇಳಿದೆ. ಅವರು ಹುಡುಗನೊಡನೆ ಸ್ನೇಹ ಬೆಳೆಸಿ ಮಾತನಾಡತೊಡಗಿದರು. ಹತ್ತು ಮಿನಿಟುಗಳಲ್ಲಿ ಅವ

ನೊಡನೆ ಒಂದು ಸಂದಿಯಲ್ಲಿ ಹೊರಟು ಹೋದರು. ನಮಗೇನೂ ತಿಳಿಯಲಿಲ್ಲ. ಅರ್ಧ ತಾಸಿನಲ್ಲಿ ಡಾ॥ ಹಫೀಜ ಮರಳಿದರು ಅವರೊಡನೆ ಅದೇ ಹುಡುಗ ಇದ್ದ ಅವನಿಗೆ ಚಡ್ಡಿಯೂ ಇದ್ದಿಲ್ಲ ಕೇವಲ ಅಂಗಿ ಇತ್ತು. ಅವನೊಡನೆ ಒಂದು ನಾಯಿಯೂ ಇತ್ತು. ಹಫೀಜ ಸ್ವಲ್ಪ ಆವೇಶಭರಿತರಾಗಿದ್ದರು. ಓಡುತ್ತಲೆ ಬಂದು ಸರ್, ಸರ್, ಬೇಗ ಬನ್ನಿರಿ ಎಂದು ಕರೆದರು. ನನಗೇನು ತಿಳಿಯದು ಮೆಲ್ಲನೆ ಚಾವಡಿಯಿಂದ ಇಳಿದು ರೋಡಿನ ಮೇಲೆ ಬಂದೆ. ಅವರು ನನಗೆ ನಾಯಿಯ ಗುದದ್ವಾರ ಹಾಗೂ ಯೋನಿ ದ್ವಾರದ ಕಡೆ ನೋಡಲು ಹೇಳಿದರು. ಇದೇನು ವಿಚಿತ್ರ ಎಂದು ಕೇಳಿದೆ. ಅದಕ್ಕವರು ಬೇಗನೇ ನೋಡಿರಿ ಎಂದರು, ನೋಡಿದೆ. ನೋಡಿ ಆವಾಕ್ಕಾದೆ! ಗುದ ಹಾಗೂ ಯೋನಿದ್ವಾರಗಳ ಸಮೀಪದಲ್ಲಿ ಒಂದು ಸಣ್ಣ ಗಾಯವಿತ್ತು. ಅದರಿಂದ ನಾರುಹುಳು ಹೊರಹಾಯ್ದು ಜೋತಾಡುತ್ತಿತ್ತು. ಆಶ್ಚರ್ಯವಾಯಿತು. ತಕ್ಷಣ ಫೋಟೋ ತೆಗೆದೆವು. ನಿಮಗೆ ಹ್ಯಾಗೆ ಗೊತ್ತಾಯಿತು? ಎಂದು ಹಫೀಜರನ್ನು ಕೇಳಿದೆ. "ಹುಡುಗ ಹೇಳಿದ ಮತ್ತು ತೋರಿಸಿದ" ನಾಯಿಗೂ ಗುಳಿಗೆ ಕೊಡುವಂತೆ ಸೂಚಿಸಿದೆ ಎಂದರು. ಮೊದಲು ಅವನಿಗೆ ಚಾಕಲೇಟು ಕೊಡಿಸಿರಿ ಅನಂತರ ನಾಯಿಗೆ ಗುಳಿಗೆ ಹಾಕೋಣ ಎಂದು ಹೇಳಿದೆ. ಹುಡುಗ ಕುಣಿಯುತ್ತ ಮನೆಯ ಕಡೆಗೆ ಓಡಿ ಹೋದ. ಅವನಿಂದ ನಮಗೊಂದು ಹೊಸ ವಿಚಾರ ದೊರೆಯಿತು. ಅಂದಿನಿಂದ ಪ್ರತಿಯೊಬ್ಬರ ಮನೆಗೆ ಹೋಗಿ ನಿಮ್ಮ ಪ್ರಾಣಿಗಳಿಗೆ ನಾರುಹುಣ್ಣು ಆಗಿದೆಯೇ ಎಂದು ಕೇಳುವುದು ಪ್ರಾರಂಭವಾಯಿತು. ಮೂರು ದಿನಗಳಲ್ಲಿ ಒಂದು ಎಮ್ಮೆ, ಒಂದು ನಾಯಿ, ಒಂದು ಬೆಕ್ಕು ಹಾಗು ಎರಡು ಆಕಳುಗಳಲ್ಲಿ ನಾರುಹುಣ್ಣು ಆದದ್ದು ತಿಳಿದು ಬಂದಿತು.

ಈ ಪ್ರಾಣಿಗೆ ಹೇಗೆ ನಾರುಹುಣ್ಣು ಬಂದಿತು ಎಂಬ ಪ್ರಶ್ನೆ ಎಲ್ಲರಿಗೂ ಬರುವಂತೆ ನಮಗೆ ಎದುರಾಗಿತ್ತು. ಯಾವ ಪ್ರಾಣಿಯೂ ಕೆರೆಯ ನೀರು ಕುಡಿಯಲು ಹೋಗುತ್ತಿರಲಿಲ್ಲ. ಅವುಗಳಿಗೆ ಕೇವಲ ಹಳ್ಳದ ನೀರು ದೊರೆಯುತ್ತಿತ್ತು. ಹಳ್ಳದ ಸವಳು ನೀರಿನಲ್ಲಿ ನಾರುಹುಳು ಬದುಕುವದಿಲ್ಲ. ಹಾಗಾದರೆ ಈ ಪ್ರಾಣಿಗಳಿಗೆ ಯಾವ ಕಾರಣಕ್ಕಾಗಿ ನಾರುಹುಳು ಸೇರಿತು? ಊರಲ್ಲಿಯ ಜನರನ್ನು ಕೇಳಿದೆವು. ಕೊನೆಗೆ ಒಂದು ಅಜ್ಜಿ ತಲೆದೂಗುವಂತೆ ಹೇಳಿದಳು. ಅವಳ ಹೇಳಿಕೆಯಂತೆ ನಾರುಹುಳುಗಳನ್ನು ಪಡೆದ ಪ್ರಾಣಿಗಳು ಮಾಲಿಕರ ಹೆಚ್ಚಿನ ಪ್ರೀತಿಗೆ ಪಾತ್ರರಾದವು; ಆ ಕಾರಣವೇ ಮಾಲಿಕರು ತಮ್ಮ ಊಟದ ತಟ್ಟೆಯಲ್ಲಿ ಹೆಚ್ಚು ಆಹಾರ ನೀಡಿಸಿಕೊಂಡು ಅರ್ಧ ತಿಂದು ಉಳಿದ ಎಂಜಲನ್ನು ತಾವು ಕುಡಿಯುವ ಕೆರೆಯ ನೀರನ್ನು ಬೆರೆಸಿ ಅವುಗಳಿಗೆ ಇಡುತ್ತಿದ್ದರು. ಕೆರೆಯ ನೀರು ಸಿಹಿ. ಸಿಹಿನೀರಿನಲ್ಲಿ ನಾರುಹುಳು ಬದುಕುತ್ತದೆ. ಇಂಥ ಮಾಲೀಕರ ಎಂಜಲು ನೀರನ್ನು ಕುಡಿಯುವ ಪ್ರಾಣಿಗಳಲ್ಲಿ ನಾರುಹುಣ್ಣು ಕಾಣುವದು ಸಾಧ್ಯವಿದೆ. ಮಾಲೀಕನ ಸುಖದಲ್ಲಿ ಪಾಲುಗಾರರಾದ ಪ್ರಾಣಿಗಳು ಅವನ ನೋವಿನಲ್ಲೂ ಭಾಗಿಗಳಾಗುತ್ತವೆ ಎಂಬುದು ಇದರ ಅರ್ಥ.

ಹಲವು ವರ್ಷಗಳ ನಂತರ ನಾನು ನಾರುಹುಣ್ಣು ಹಾಗು ನಾರು ಹುಳುಗಳ ಮೇಲೆ ಒಂದು ಉಪನ್ಯಾಸ ಕೊಡಲು ಉದಯಪುರ ವಿಶ್ವವಿದ್ಯಾಲಯಕ್ಕೆ ಆಮಂತ್ರಿಸಲ್ಪಟ್ಟಿದ್ದೆ. ಉಪನ್ಯಾಸದಲ್ಲಿ ಈ ಪ್ರಾಣಿಗಳ ಚಿತ್ರಗಳನ್ನು ತೋರಿಸಿದಾಗ ಅಲ್ಲಿಯ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರು ಆವೇಶದಿಂದ ಕರ್ನಾಟಕದಲ್ಲಿಯಂತೆ ಈ ಪ್ರಾಣಿಗಳು ರಾಜಸ್ಥಾನದಲ್ಲಿ ಇರುವವು. ಅಲ್ಲದೇ ನಮ್ಮಲ್ಲಿ ಒಂಟೆಗಳಿವೆ. ನಿಮ್ಮ ಊಹೆಯಂತೆ ನಾರುಹುಳುಗಳು ಒಂಟೆಯನ್ನೂ ಪೀಡಿಸುವುದೋ? ಎಂದರು. ನಾನು ಶಾಂತರೀತಿಯಿಂದ ಹೇಳಿದೆ. ನೀವು ನಿಮ್ಮ ಒಂಟೆಗಳನ್ನು ನಾವು ಪ್ರಾಣಿಗಳನ್ನು ಪ್ರೀತಿಸುವಂತೆ ಪ್ರೀತಿಸಿದರೆ ನಿಮ್ಮ ಒಂಟೆಗಳಿಗೂ ನಾರು ಬರುತ್ತದೆ ಎಂದು. ಎಲ್ಲರೂ ನಗಹತ್ತಿದರು. ಮರುದಿನ ಒಂಟೆ ಸಾಕಿದವರನ್ನು ವಿಚಾರಿಸಿದರೆ ನಾವು ಊಹಿಸಿದಂತೆ ಅವೂ ಸಹ ನಾರುಹುಣ್ಣಿನಿಂದ ಕ್ವಚಿತ್ತಾಗಿ ಬಳಲಿದ ಸಂಗತಿ ಕೇಳಿದೆವು.

ಹಾವು ಕಚ್ಚುವ ಇರುವೆ

ನಾರು ಹುಳದ ಮೇಲೆ ಹಲವಾರು ವಿಧಗಳಿಂದ ನಮ್ಮ ಸಂಶೋಧನೆ ಮುಂದುವರೆದಿತ್ತು. ರೋಗಿಗಳಿಗೆ ಅಂತಿಂಥ ಉಪಚಾರವನ್ನು ಕೊಡುತ್ತಿದ್ದೆವು. ಆದರೆ ನಾರುಹುಣ್ಣನ್ನು ಉಪಚರಿಸುವದಕ್ಕಿಂತಲೂ ಒಳ್ಳೆಯದು. ಇದನ್ನು ಪ್ರತಿಬಂಧಿಸಲು ಕುಡಿಯುವ ನೀರನ್ನು ಕುದಿಸಿ ಕುಡಿಯಬೇಕು. ಜನರಿಗೆ ಏನು ಹೇಳಿದರೂ ನೀರನ್ನು ಕುದಿಸುತ್ತಿದ್ದಿಲ್ಲ ಇಲ್ಲವೇ ಸೋಸುತ್ತಿರಲಿಲ್ಲ. ಏನಾದರೂ ನೆಪ ಹೇಳುತ್ತಿದ್ದರು. ಏನು ಮಾಡಬೇಕೆಂಬುದೇ ಹೊಳೆಯಲಿಲ್ಲ.

ಕೊನೆಗೆ ನಾರು ಹುಳದಿಂದ ವಿಸರ್ಜಿಸಲ್ಪಡುವ ಹಾಲಿನಂಥ ದ್ರವವನ್ನು ಸೂಕ್ಷ್ಮದರ್ಶಕದಲ್ಲಿ ಹಿಡಿದು ತೋರಿಸತೊಡಗಿದೆ. ನಾರಿನ ಮರಿಗಳ ಚಲನವಲನ ಕಂಡ ಎಲ್ಲರೂ ಭಯಭೀತರಾದರು. ತಾವು ಕಂಡ "ಸಣ್ಣ ಹಾವು"ಗಳನ್ನೂ ಅವುಗಳು ರಭಸದಿಂದ ಸುತ್ತಾಡುವುದನ್ನೂ ಪರರಿಗೆ ಹೇಳಿ ಅವರನ್ನೂ ಕರೆತಂದು ತೋರಿಸಹತ್ತಿದರು. ಹಳ್ಳಿಗೆ ಹಳ್ಳಿಯೇ ಬಂದಿತು. ನಮಗೆ ಇದೊಂದು ಹೊಸ ಕೆಲಸವಾಯಿತು. ರೋಗಿ ಬಂದು ತನ್ನ ನಾರುಹುಳದ ತುದಿಯಿಂದ ಬರುವ ಸ್ರವಿಕೆಯನ್ನು ತೋರಿಸಬೇಕೆಂದು ವಿನಂತಿಸುತ್ತಿದ್ದ. ತೋರಿಸಿದ ತಕ್ಷಣ ಅವನಿಗೆ ಎಲ್ಲಿಲ್ಲದ ಸಂತೋಷ. "ಛೀ ಛೀ, ಇಂಥ ಹುಳು ಕುಡಿಯುವ ನೀರಾಗ ಹೊಕ್ಕರ ಜನ ಉಳಿದೀತೇನ್ರೀ?" ಅನ್ನುತ್ತ ಗುಂಪು ಗುಂಪು ಹೋಗುತ್ತಿತ್ತು. ಒಂದೆರಡು ದಿನಗಳಲ್ಲೇ ಇಡೀ ಊರಿಗೆ ಊರೇ ಕುಡಿಯುವ ನೀರನ್ನು ಸೋಸತೊಡಗಿತು. ಸ್ಥಿತಿವಂತರು ನೀರು ಕುದಿಸಿ, ಸೋಸಿ ಕುಡಿಯತೊಡಗಿದರು. ಮುಂದೆ ಒಂದೆರಡು ವರ್ಷಗಳಲ್ಲಿ ಆ ಊರಿನ ನಾರುಹುಳು ಹೆಸರಿಲ್ಲದಂತೆ ಹೋಯಿತು. ಊರಿನ ಜನರು, ಸಂತೋಷದಿಂದ ಇದ್ದಾರೆ.

ಇದನ್ನು ಜನರಿಗೆ ತೋರಿಸುತ್ತ ಕುಳಿತಾಗ ನನ್ನೊಡನೆ ಕೆಲಸ ಮಾಡುತ್ತಿದ್ದ ಒಬ್ಬ ವಿದ್ಯಾರ್ಥಿ ನನಗೆ "ಸರ್, ಗುಳಿಗೆ ದ್ರಾವಣ ಮಾಡಿ ಆ ದ್ರಾವಣದಲ್ಲಿ ಈ ಮರಿಗಳನ್ನು ಹಾಕಿ ನೋಡೋಣ. ಮರಿಗಳು ಸತ್ತರೆ ಔಷಧಿ ಉಪಯುಕ್ತ ಎಂದು ಗೊತ್ತಾಗುವದು." ನಾನು ಅವನಿಗೆ ಹೇಳಿದೆ "ನೋಡು, ಅದು ನಿನ್ನ ವಿಚಾರ.

ನೀನೇ ಮಾಡು." ವಿದ್ಯಾರ್ಥಿ ಎಲ್ಲ ಎಚ್ಚರಿಕೆಗಳನ್ನು ವಹಿಸಿ (ಎ) ಹಾಗು (ಬಿ) ಗುಳಿಗೆಗಳ ದ್ರಾವಣ ಮಾಡಿದ ದ್ರಾವಣವನ್ನು ಗಾಜಿನ ಸ್ಲೈಡ ಮೇಲೆ ಹಾಕಿ ಅದರಲ್ಲಿ ಮರಿಗಳನ್ನು ಸೇರಿಸಿ ಸೂಕ್ಷ್ಮ ದರ್ಶಕದಲ್ಲಿ ನೋಡಿದ. ಪ್ರತಿ ಅರ್ಧ ತಾಸಿಗೊಮ್ಮೆ ನೋಡುತ್ತ ಇಡೀ ದಿನ ಕಳೆದ ಯಾವ ಬದಲಾವಣೆಯೂ ಆಗಲಿಲ್ಲ. ನಿರಾಶನಾಗುವಷ್ಟರಲ್ಲಿ ನಾನು ಆಶೆಯನ್ನು ಚಿಗುರಿಸಿದೆ. "ನೋಡು ಮರಿಗಳು ಸಾಯದಿದ್ದರೇನು? ಅವುಗಳ ಚಲನೆಯಲ್ಲಿ ಏನಾದರೂ ಬದಲಾವಣೆಗಳಾಗುವವ್ರೋ ಹೇಗೆ ನೋಡು" ಎಂದೆ. ಅವನಿಗೆ ಅಷ್ಟು ಸಾಕಾಗಿ ಬಿಟ್ಟು ಬಿಟ್ಟ. ನಾನು ಅವನ ಕಾರ್ಯವನ್ನು ಮಾಡತೊಡಗಿದೆ. ಒಂದು ಸಲ ನಾರಿನ ಮರಿಗಳನ್ನು ಶೇಖರಿಸುವಾಗ ಅವುಗಳೊಡನೆ ರೋಗಿಯ ರಕ್ತ ಹಾಗು ಸ್ರಾವಿಕೆ ಸಹ ಅದರೊಡನೆ ಕೂಡಿತು. ಅದನ್ನು ಪರೀಕ್ಷಿಸುವಾಗ ನನಗೊಂದು ಆಶ್ಚರ್ಯ ಕಾದಿತ್ತು. ನಾರುಹುಳದ ಮರಿಗಳು ಜಿಗಿಯುತ್ತ ಜಿಗಿಯುತ್ತ ಚಲಿಸುತ್ತಿದ್ದವು. ಅವುಗಳ ಸುತ್ತಲೂ ಬಿಳಿರಕ್ತ ಗೋಲಕಗಳಿದ್ದವು. ನಾರಿನ ಮರಿಗಳು ಚಲಿಸುತ್ತ ಗೋಲಕಗಳ ಸಮೀಪದಲ್ಲಿ ಬಂದ ತಕ್ಷಣ ಗೋಲಕಗಳು ನಾರಿನ ಮರಿಗಳ ಮೈಗೆ ಅಂಟುತ್ತಿದ್ದವು. ಮುಂದೆ ಅವುಗಳನ್ನು ಬಿಡುತ್ತಿರಲಿಲ್ಲ ಹೆಚ್ಚು ಗೋಲಕಗಳನ್ನು ಮೆತ್ತಿಕೊಂಡ ನಾರು ಮರಿಗಳು ಜಿಗಿಯುವದನ್ನು ನಿಲ್ಲಿಸಿ ಒದ್ದಾಡ ತೊಡಗುತ್ತಿದ್ದವು. ಈ ದೃಶ್ಯವು ಬಹಳ ಸ್ವಾರಸ್ಯಕರವಾಗಿತ್ತು. ಹಾವಿನ ಮರಿಗಳಿಗೆ ಅಥವಾ ಹಾವು ಹೇಗೆ ಒದ್ದಾಡುತ್ತವೆಯೋ ಹಾಗೆ ಈ ಮರಿಗಳು ಉರುಳಾಡುತ್ತಿದ್ದವು. ಗೋಲಕಗಳು ಇರುವೆಯಂತೆ ಮೆತ್ತುತ್ತಿದ್ದವು. ಈ ದೃಶ್ಯವು ನಮ್ಮಲ್ಲಿಯ ಎಲ್ಲ ವೈದ್ಯರನ್ನು ಹಾಗು ವಿದ್ಯಾರ್ಥಿಗಳನ್ನು ಹುಚ್ಚರನ್ನಾಗಿಸಿತು. ಸೂಕ್ಷ್ಮದರ್ಶಕವನ್ನು ಕೆಲವೇ ಮಿನಿಟುಗಳವರೆಗೆ ನೋಡುವ ವಿದ್ಯಾರ್ಥಿಗಳು ತಾಸುಗಟ್ಟಲೇ ಕುಳಿತು ವೀಕ್ಷಿಸತೊಡಗಿದರು. ಇಂಥ ವಿವರಗಳನ್ನು ಬೇರೆಲ್ಲೂ ವರ್ಣಿಸಿಲ್ಲ. ಇವುಗಳ ಚಿತ್ರಗಳನ್ನು ತೋರಿಸಿದಾಗ ಪರಿಣತರೂ ಸಹ ಬೆರಗಾಗಿ ಹೇಳಿದರು. "ಇಂಥ ಅನ್ವೇಷಣೆ ಬೇರೆಲ್ಲೂ ಆಗಿಲ್ಲ." ಈ ಕಾರ್ಯವನ್ನು ಸೂಚಿಸಿದ ವಿದ್ಯಾರ್ಥಿಗೆ ಈ ಸಂಗತಿಯನ್ನು ತಿಳಿಸಿದಾಗ ಅವನು ಉಬ್ಬಿಹೋದ. ಬಿಳಿ ಗೋಲಕಗಳು ದೇಹದಲ್ಲಿ ಸೇರಿದ ರೋಗಾಣುಗಳನ್ನು ಹೀಗೆಯೇ ನಾಶಪಡಿಸುತ್ತವೆ.

ಕಡ್ಡೀ ಕಾಲು

ಅಳವಂಡಿ ಹಳ್ಳಿಯಲ್ಲಿ ನಾರು ಹುಳು ಮನೆ ಮಾಡಿ ಹಲವಾರು ವರ್ಷಗಳಾಗಿತ್ತಂತೆ. ಒಂದೊಂದು ವರ್ಷ ನಾರು ಹುಳು ಪಿಡುಗಿನ ರೂಪದಲ್ಲಿ ಬಂದು ಇಡೀ ಹಳ್ಳಿಯನ್ನೇ ಅಲ್ಲೋಲ ಕಲ್ಲೋಲ ಮಾಡುತ್ತಿತ್ತು. ಉಳಿದ ಸಲ ಊರಲ್ಲಿ ಕೆಲವರಿಗೆ ಮಾತ್ರ ತೊಂದರೆ ಕೊಡುತ್ತಿತ್ತು. ಪ್ರತಿ ವರ್ಷ ಅದು ಪಿಡುಗು ಆಗಿದ್ದರೆ ಆ ಊರಲ್ಲಿ ಯಾರೂ ವಾಸಿಸುತ್ತಿದ್ದಿಲ್ಲ ಎನ್ನಬಹುದು.

ಒಂದು ದಿನ ಹಳ್ಳಿಯ ಚಾವಡಿಯಲ್ಲಿ ಕುಳಿತು ರೋಗಿಗಳಿಗೆ ಗುಳಿಗೆಗಳನ್ನು ಹಂಚುತ್ತಿದ್ದೆ. ಚಾವಡಿಯ ಮುಂದೆ ಯಂಕಪ್ಪ ಎಂಬುವನು ದಡ ದಡ ನಡೆ

ಯುತ್ತ ಹೋದ. ಅವನೊಡನೆ ಮಾತನಾಡ ಬಯಸಿದವರು ಅವನ ಹಿಂದೆಯೇ ಓಡುತ್ತ ಹೋಗಬೇಕಾಗಿತ್ತು. ನಿಂತು ಮಾತನಾಡ ಬೇಕಿದ್ದರೆ ಯೆಂಕಪ್ಪ ದಾರಿಯ ದೀಪದ ಕಂಬ ಇಲ್ಲವೆ ಗೋಡೆಯ ಕಡೆಗೆ ದಿಕ್ಕು ಬದಲಿಸಿ ಅವುಗಳಿಗೆ ಎರಡೂ ಕೈ ಕೊಟ್ಟು ನಿಲ್ಲುತ್ತಿದ್ದ. ಅನಂತರ ಮಾತನಾಡುತ್ತಿದ್ದ. ಯಾವ ಆಸರೆ ಇಲ್ಲದೆ ನಿಲ್ಲುವದು ಸಾಧ್ಯವಿದ್ದಿಲ್ಲ. ನನಗೆ ಅದು ಮೋಜೆನಿಸಿತು. ಅಲ್ಲಿಯೇ ಕುಳಿತಿದ್ದ ಶಿಕ್ಷಕರನ್ನು ಕೇಳಿದೆ. "ಮಾಸ್ತರರೇ, ಯೆಂಕಪ್ಪ ಹೀಗೇಕೆ ಓಡುವನು? ರಸ್ತೆ ನಡುವೆ, ಬೈಲಿನಲ್ಲಿ ನಿಲ್ಲುವ ಯಾಕೆ? ಎಂದು ಪ್ರಶ್ನಿಸಿದೆ". ಮಾಸ್ತರರು "ಸಾಹೇಬ್ರ, ನಾರು ಹುಳಾ ಮೈಯೊಳಗಿಂದ ಹೊರಗ ಬಂದ್ರ ಅದಕ್ಕೂ ಒಳ್ಳೆಯದು. ನಮಗೂ ಒಳ್ಳೆಯದು. ಒಂದು ವೇಳ್ಯಾ ಅದು ಮೈಯೊಳಗ ಉಳದ್ರ ಮರಗಿ ಸಾಯತೈತಿ. ಅದರ ಮರಗ ಮನಿಸ್ಯಾಗ ಹತ್ತಿ, ಅದರ ಸುತ್ತ ಇದ್ದ ಖಂಡ ಕರಗಿ ನೀರಾಗಿ ಹೋಗತೈತಿ. ಕೈಯಾದರ ಹಿಡ್ಯಾಕ ಬರಾಂಗಿಲ್ಲ, ಕಾಲಾದ್ರ ನಡ್ಯಾಕ ಬರಾಂಗಿಲ್ಲರಿ. ಯೆಂಕನ ಬಾಳ್ಯ ಇಂಥಾದಾಗೇತ್ರಿ. ಅವನ ಪಿಂಡ್ರಿ (ಮೀನ ಖಂಡ) ಹಿಡಿದು ನೋಡ್ರಿ. ನಾರ ಹುಳಾ ಸಿಂಬಿ ಸಿಂಬಿ ಆಗಿ ಅಲ್ಲಿ ಸತ್ತ ಹೋಗ್ಯಾವು. ಅದಕ ಅವನ ಪಿಂಡರಿ ಖಂಡ ಕರಗಿ ಹೋಗ್ಯಾವು. ಅವನ ಕಾಲಾಗ ಬರೆ ಎಲವು ಚರ್ಮ ಅಷ್ಟ ಐತಿ ಐತಿ ನೋಡ್ರಿ. ನಡಿ ಅಂದ್ರ ನಿಲ್ಲ ಅಂದ್ರ ಅಂವ ಹೆಂಗ ನಿಂದ್ರಬೇಕ್ರಿ? ಎದ್ದಂದ್ರ ಓಡಾಂವ, ನಿಲ್ಲಬೇಕಂದ್ರ, ಗ್ವಾಡಿಗೋ ಗಿಡಕ್ಕೊ ಹಾಯ್ದು ನಿಲ್ಲಬೇಕ್ರಿ". ಮಾಸ್ತರ ಹೇಳಿದ ಮಾತುಗಳು ನನ್ನನ್ನು ಗಲಿಬಿಲಿಗೊಳಿಸಿದವು. ಅವರ ಎದುರಿಗೆ ಇನ್ನೇನಾದ್ರು ಅಂದ್ರ ಇವರೆಂಥ ವೈದ್ಯರು ಅಂದಾರೆಂದು ಸುಮ್ಮನಾಗಿ ಬಿಟ್ಟೆ. ಇಡೀ ರಾತ್ರಿ ವಿಚಾರಿಸಿದೆ. ಇಂಥ ಸಂಗತಿ ವಿಚಾರ ನಾವು ಕಲಿತ ಕಲಿಸಿದ ಪುಸ್ತಕಗಳಲ್ಲಂತೂ ಇಲ್ಲವೆಂದು ಖಾತ್ರಿ ಮಾಡಿದೆ. ಅಂದರೆ ಮಾಸ್ತರರು ಹೇಳಿದ ಮಾತು ನಿಜವೋ ಅಥವಾ ಸುಳ್ಳೋ ಅನಿಸಹತ್ತಿತು, ಮರುದಿನ ಮುಂಜಾನೆ ಯಾರನ್ನೋ ಕಳುಹಿಸಿ ಯೆಂಕಪ್ಪನನ್ನು ಕರೆಸಿದೆ. ಪರೀಕ್ಷಿಸಿದೆ. ಮಾಸ್ತರು ಹೇಳಿದಂತೆ ಯೆಂಕಪ್ಪನ ಪಿಂಡ್ರಿ ನಿಜವಾಗಿ ಕರಗಿ ಹೋಗಿದ್ದವು. ಅವುಗಳಿಗೆ ಶಕ್ತಿ ಎಂಬುದು ಇದ್ದಿಲ್ಲ. ಇಡೀ ಕಾಲು ಒಣಗಿದ ಕಟ್ಟಿಗೆಯಂತೆ ಕಾಣಿಸುತ್ತಿದ್ದವು. ಚರ್ಮ ಕಪ್ಪಾಗಿ ಮಿಂಚುತ್ತಿತ್ತು. ಕೈಗೆ ಕೇವಲ ಎಲವು ಹತ್ತುತ್ತಿತ್ತು. ಚರ್ಮದ ತಳದಲ್ಲಿ ನೋವು ಇದ್ದಿಲ್ಲ. ಆಳವಾಗಿ ಪರೀಕ್ಷಿಸಿದೆ ಗಂಟುಗಟ್ಟಿದ ನಾರುಹುಳುಗಳು ಹತ್ತಿದ್ದವು. ಸತ್ತ ನಾರುಹುಳುಗಳ ದೇಹದಲ್ಲಿ ಸುಣ್ಣ ಶೇಖರಗೊಂಡು ಅವು ಕಲ್ಲಿನಂತಾಗುತ್ತವೆ. ಆದರೆ ಸುತ್ತಲಿನ ಸ್ನಾಯುಗಳು ಕರಗಿ ಹೋದದ್ದು ನನ್ನ ಲಕ್ಷ್ಯಕ್ಕೆ ಬಂದಿದ್ದಿಲ್ಲ. ಇದನ್ನು ಖಚಿತ ಪಡಿಸಲು ಯೆಂಕಪ್ಪನನ್ನು ಶಹರಕ್ಕೆ ಕರೆದುಕೊಂಡು ಹೋಗಿ ಎಕ್ಸರೇ ತೆಗೆಸಿ ನೋಡಿದರೆ ಅವನ ಕಾಲಿನಲ್ಲಿ ಹುಳುಗಳ ಮಾಲೆಯೇ ಇತ್ತು. ಮಾಸ್ತರರನ್ನು ಭೆಟ್ಟಿಯಾಗಿ ಕೇಳಿದೆ ಈ ವಿವರಣೆಯನ್ನು ಅವರಿಗೆ ಯಾರು ಹೇಳಿದರೆಂದೆ. ಅವರು ಅಷ್ಟೊಂದು ಮಹತ್ವ ಕೊಡದೇ "ಸಾಹೇಬ್ರ ಈ ಊರಲ್ಲಿಯ ಜನರಿಂದ ಕೇಳಿದ್ದೇನೆ" ಎಂದರು. ನಾನು ಇದನ್ನು ಹಲವಾರು ವೈದ್ಯ ವಿಜ್ಞಾನಿಗಳಿಗೆ ತೋರಿಸಿದೆ. ಎಲ್ಲರಿಗೂ ಆಶ್ಚರ್ಯ.

ನನ್ನ ಕಿರಿಯ ಸ್ನೇಹಿತರಾದ ಡಾ|| ಮಲ್ಲಿಕಾರ್ಜುನ ಜಾಲಿ ಅವರೂ ಸಹ ಇಂಥ ರೋಗಿಗಳನ್ನು ಗುಲಬರ್ಗಾದಲ್ಲಿ ನೋಡಿದ್ದನ್ನು ಪರೀಕ್ಷಿಸಿದ್ದದನ್ನು ಹೇಳಿದರು.

ಇಂದಿಗೂ ಈ ತೊಂದರೆಯ ಕಾರಣ ವಿವರಗಳು ನನಗೂ ಹಾಗು ಉಳಿದ ವೈದ್ಯ ವಿಜ್ಞಾನಿಗಳಿಗೂ ತಿಳಿದಿಲ್ಲ ತಿಳಿಯುವ ಹಾಗೆಯೂ ಇಲ್ಲ. ಯಾಕೆಂದರೆ ನಾರು ಹುಳು ಸ್ವಲ್ಪದರಲ್ಲೇ ಇಡೀ ಜಗತ್ತಿನಿಂದ ಹೊರಹಾಕಲ್ಪಡಲಿವೆ. ಅಂದರೆ ನಾರುಹುಳು ನಮ್ಮಿಂದ ಸದಾಕಾಲ ಕಣ್ಮರೆಯಾಗುತ್ತಲಿದೆ. ನಮ್ಮ ಸಂಶೋಧನೆ ಅಪೂರ್ಣವಾದರೂ ಜಗತ್ತು ದೊಡ್ಡ ನೋವಿನಿಂದ ಪಾರಾಗುವದು ಎಂಬುದು ಸಂತೋಷ.

ರಾಮಬಾಣ

ಮೊದಲನೆಯ ಸಲ ನಾನು ನಾರು ಹುಣ್ಣಿನ ಕೂಪವಾದ ಅಳವಂಡಿಗೆ ಹೋಗಿ ಬಂದೆ. ಎಲ್ಲರಿಗೂ ಅದನ್ನು ವರ್ಣಿಸಿದೆ. ಕೆಲವರು ಬಂದು ಸಾರ್. ಆ ಊರಿಗೆ ಹೋಗಿ ಸೇವೆ ಸಲ್ಲಿಸೋಣ ಎಂದು ಮುಂದೆ ಬಂದರು. ಒಳ್ಳೆಯದೆಂದು ನಾರು ಹುಣ್ಣಿನ ಬಗ್ಗೆ ಅದಕ್ಕೆ ಕೊಡುವ ಮುದ್ದುಗಳ ಬಗ್ಗೆ ಅಭ್ಯಸಿಸ ತೊಡಗಿದೆ. ಡಾ|| ಡಿ. ಆರ್. ಕುಲಕರ್ಣಿ ಔಷಧ ಶಾಸ್ತ್ರದ ಮುಖ್ಯಸ್ಥರು. ನಾರುಹುಣ್ಣಿನ ಮೇಲೆ ಹಲವಾರು ವರ್ಷಗಳ ಹಿಂದೆ ಸಂಶೋಧನೆ ನಡೆಸಿದ್ದರು. ಅವರನ್ನೂ ಸಹ ಭೇಟಿಯಾಗಿ ವಿಚಾರಿಸಿದೆ. ಅವರಿಗೂ ಯಾವ ಉಪಯುಕ್ತ ಮದ್ದುಗಳು ದೊರೆತಿರಲಿಲ್ಲ.

ಆದರೆ ಒಬ್ಬ ಹಿರಿಯ ವೈದ್ಯರು ಸಂಶೋಧನೆಮಾಡಿ ಒಂದು ಔಷಧ ಅದ್ಭುತವಾಗಿದೆ ಎನ್ನುವಂತೆ ಹೇಳುತ್ತಿದ್ದರು. ಹಾಗೂ ವಿಜ್ಞಾನ ಪತ್ರಿಕೆಗಳಲ್ಲಿ ಬರೆದರು. ರೋಗಿಗೆ ಬೇಕಾದ ಎಲ್ಲಾ ಗುಣಗಳು ಆ ಮದ್ದಿನಲ್ಲಿ ಇವೆ ಎಂದು ಬರೆದರು. ನಮಗೆ ಅದು ಸುಳ್ಳು ಎನಿಸಿತು. ಯಾಕೆಂದರೆ ಅಂಥ ಮದ್ದು ಇನ್ನೂವರೆಗೆ ಯಾವ ರೋಗಕ್ಕೂ ದೊರೆತಿಲ್ಲ ಎಂದು ಡಾ|| ಕುಲಕರ್ಣಿ (ಔಷಧ ಶಾಸ್ತ್ರದ ಪ್ರಾಧ್ಯಾಪಕರು) ಹೇಳಿದರು. ಆದರೆ ಅದನ್ನು ಖಚಿತ ಮಾಡುವದು ಹೇಗೆ? ಮರುವರ್ಷ ಅನ್ನುವಷ್ಟರಲ್ಲಿ ನಾವು ಸಿದ್ಧರಾಗಬೇಕು. ಹಲವಾರು ಔಷಧ ಕಂಪನಿಗಳಿಗೆ ಓಲೆ ಬರೆದು ಹಿರಿಯ ವೈದ್ಯರು ಬಳಸಿದ ಮದ್ದು ಪುಕ್ಕಟೆಯಾಗಿ ತಯಾರಿಸಿ ನಮಗೂ ಗೊತ್ತಾಗದಂತೆ ಬಾಟಲಿಗಳ ಮೇಲೆ (ಎ) ಮತ್ತು (ಬಿ) ಎಂದು ಮಾತ್ರ ಬರೆದು ಕಳುಹಿಸಲು ಹೇಳಿದೆವು. ಕಳುಹಿಸಿದರು. ನಾವು ಎಣಿಸಿದಂತೆ ಮರುವರ್ಷ ನಾರುಹುಣ್ಣಿನ ಪೀಡೆ ತಲೆ ಎತ್ತಿತ್ತು. ತಕ್ಷಣ ಹೋಗಿ ಕಾರ್ಯ ಪ್ರಾರಂಭಿಸಿದೆವು. ಒಂದು ಗುಂಪಿನ ರೋಗಿಗಳಿಗೆ (ಎ)ಗುಳಿಗೆ ಇನ್ನೊಂದು ಗುಂಪಿನವರಿಗೆ (ಬಿ)ಗುಳಿಗೆ ಕೊಟ್ಟು ಪ್ರತಿದಿನ ಹಲವಾರು ವಿಧಾನಗಳಿಂದ ಪರೀಕ್ಷಿಸುತ್ತ ಆ ಊರಲ್ಲಿ ಇದ್ದೆವು. ಎಲ್ಲ ರೋಗಿಗಳ ವಿವರಗಳನ್ನು ಕಂಪನಿಗೆ ಕಳುಹಿಸಿದೆವು. ಒಂದು ತಿಂಗಳಾದ ಮೇಲೆ ಅವರಿಂದ ಉತ್ತರಬಂದಿತು. ಮದ್ದು ನಾರು ಹುಳ, ನಾರುಹುಣ್ಣಿನ ಮೇಲೆ ಎಂಥದೇ ಪರಿಣಾಮಬೀರಿಲ್ಲ." ಮೊದಲು ಅದ್ಭುತವೆಂದು ಹೇಳಿದ, ಬರೆದ, ವೈದ್ಯರಿಗಿಂತ ಹೆಚ್ಚು ಕೂಲಂಕಷವಾಗಿ ಈ ಅಧ್ಯಯನ ನಡೆಸಿದ್ದೆವು. ಯಾವ ರೀತಿಯಿಂದಲು

ಯಾರಿಂದಲೂ ತಪ್ಪುಗಳು ಆಗದಂತೆ ಎಚ್ಚರ ವಹಿಸಿದ್ದೆವು. ಅದನ್ನೆಲ್ಲ ಬರೆದು ವೈದ್ಯರಿಗೆ ತಿಳಿಸಿದೆವು. ಅವರು ನಕ್ಕು ಸುಮ್ಮನಾದರಂತೆ. ಮತ್ತೆ ಬರೆದೆವು. "ನನ್ನ ಅನುಭವ ಹಾಗಿದೆ" ಎಂದು ಬಂದಿತು. ವೈದ್ಯ ವಿಜ್ಞಾನ ಖಚಿತವಾಗಿರಬೇಕು. ಎಲ್ಲರಿಗೂ ಎಲ್ಲ ಕಡೆಗೂ ಅದೇ ಫಲಿತಾಂಶ ಬರಬೇಕು. ನಮ್ಮ ಫಲಿತಾಂಶಗಳನ್ನು ಬರೆದು ಹಲವಾರು ವೈದ್ಯ ವಿಜ್ಞಾನದ ಪತ್ರಿಕೆಗಳಿಗೆ ಕಳುಹಿಸಿದೆವು. ನಮ್ಮ ಲೇಖನವನ್ನು ಯಾರೂ ಪ್ರಕಟಿಸಲು ಮುಂದೆ ಬರಲಿಲ್ಲ. ಬೇಜಾರು ಆಯಿತು. ಮರು ಪ್ರಯತ್ನ ಬಿಡಲಿಲ್ಲ ಇಂಗ್ಲೆಂಡಿಗೆ ಕಳುಹಿಸಿದೆವು. ಅಲ್ಲಿಯ ವೈದ್ಯವಿಜ್ಞಾನದ ಪತ್ರಿಕೆಯವರು ಮೆಚ್ಚಿದರು. ತಕ್ಷಣ ಮುದ್ರಿಸಿದರು. ನಮ್ಮ ಲೇಖನ ಮೊದಲಿನ ಹಲವಾರು ಸಿದ್ಧಾಂತಗಳನ್ನು ಸುಳ್ಳಾಗಿಸಿತ್ತು. ಕೆಲವು ಜನರು ನಮ್ಮ ಕೆಲಸವನ್ನು ತಪ್ಪು ಎಂದು ಹೇಳಲು ಪ್ರಯತ್ನಿಸಿದರು. ಎರಡು ವರ್ಷ ಕಳೆದ ಮೇಲೆ ಒಂದು ಜಾಗತಿಕ ಸಮ್ಮೇಳನ ಇಂಗ್ಲೆಂಡದಲ್ಲಿ ನಡೆಯಿತು. ಅಲ್ಲಿ ನಮ್ಮ ಫಲಿತಾಂಶಗಳೇ ನಿಖರವಾದವು. ಮೊದಲಿನ ಫಲಿತಾಂಶಗಳು ವ್ಯಾಪಾರಕ್ಕೆಂದು ಸೃಷ್ಟಿಸಲ್ಪಟ್ಟವು ಎಂದು ಜಾಗತಿಕ ತಜ್ಞರು ಅಂತಿಮ ನಿರ್ಣಯ ಸಾರಿದರು. ನಾವೆಲ್ಲ ಕೂಡಿ ಮಾಡಿದ ಈ ಸಂಶೋಧನೆ ಜಾಗತಿಕ ತಜ್ಞರ ಪ್ರಶಂಸೆ ಪಡೆದಿದೆ.



ಏನೂ ಮಾಡಲು ಯೋಗ್ಯವಲ್ಲದ ಯಾವ ಮನುಷ್ಯನೂ ಇಲ್ಲ. ಆದರೆ ಅತನು ಏನು ಮಾಡಬಹುದೆಂಬುದನ್ನು ಆತನಿಗೆ ತಿಳಿಸಿ ಅವನನ್ನು ಕೃತಿಗೆ ಹಚ್ಚುವ ಜಾಣ ಯೋಜಕರು ಮಾತ್ರ ಸಿಗುವದು ಕಠಿಣ.

—ಸುಭಾಷಿತ

ಧೂಮಪಾನ ದುರಂತಕ್ಕೆ ಆಹ್ವಾನ!

ಎನ್. ಆರ್. ಪಾಟೀಲ್

(ಮೇ ೩೧ ಅಂತರಾಷ್ಟ್ರೀಯ ಧೂಮಪಾನ ವಿರೋಧಿ ದಿನ)

"ಧೂಮಪಾನ ನಿಷೇಧಿಸಲಾಗಿದೆ" ಇತ್ಯಾದಿ ಎಚ್ಚರಿಕೆಯ ಬೋರ್ಡುಗಳು ಸಾರ್ವಜನಿಕ ಸ್ಥಳಗಳಲ್ಲಿ, ಬಸ್ಸುಗಳಲ್ಲಿ ನಮಗೆ ಕಾಣಸಿಗುವುದು ಸರ್ವೇಸಾಮಾನ್ಯ. ಆದರೆ ಈ ಎಚ್ಚರಿಕೆಯ ಮಾತುಗಳು ತಂಬಾಕಿನ ಶಾಪದ ಮುಂದೆ ತಾಕತ್ತು ಕಳೆದುಕೊಂಡಿವೆ ಎಂದೇ ಹೇಳಬೇಕು. ಯಾಕೆಂದರೆ 'ಧೂಮಪಾನ ನಿಷೇಧಿಸಲಾಗಿದೆ' ಎಂಬ ಬೋರ್ಡನ್ನು ಓದುತ್ತಲೇ ಜನರು ಬೀಡಿ, ಸಿಗರೇಟು ಸೇದುತ್ತಿರುತ್ತಾರೆ. ಧೂಮಪಾನ ನಿಷೇಧಿಸಿದೆ ಎಂಬ ಎಚ್ಚರಿಕೆಯ ಮಾತು ಚಾಲಕನ ಮುಂದೆಯೇ ಇದ್ದರೂ, ಚಾಲಕನ ಕೈಯಲ್ಲಿ ಬೀಡಿ ಇರುತ್ತದೆ. ಹೌದು! ಪ್ರಪಂಚದಲ್ಲಿಂದು ತಂಬಾಕಿನ ಮೋಹಕ್ಕೆ ಒಳಗಾದಷ್ಟು ಜನ ಇನ್ನಾವುದಕ್ಕೂ ಆಗಿಲ್ಲ ಎಂದೇ ಹೇಳಬೇಕು. ಧೂಮಪಾನ ಶರೀರಕ್ಕೆ ಮಾರಕ ಎಂದು ಗೊತ್ತಿದ್ದರೂ ಜಗತ್ತಿನ ಅಸಂಖ್ಯ ಜನ ಇದರ ದಾಸಾನುದಾಸರಾಗಿದ್ದಾರೆ. ಒಂದು ವಿಪರ್ಯಾಸವೆಂದರೆ ಸಮಾಜ ಸುಧಾರಕರು, ವೈದ್ಯರು, ಲೇಖಕರು, ಅಧ್ಯಾಪಕರು, ನಾಯಕರು "ತಂಬಾಕು ಸೇವನೆ ದೇಹದ ಆರೋಗ್ಯಕ್ಕೆ ಹಾನಿಕರ" ಎಂದು ಹೇಳಿದರೂ ವಾಸ್ತವದಲ್ಲಿ ಇವರೆಲ್ಲ ತಂಬಾಕು ಇಲ್ಲದೇ ಬದುಕಲಾರರು. ತಂಬಾಕಿನ ಉತ್ಪನ್ನಗಳ ಮೇಲೆ 'ತಂಬಾಕು ಆರೋಗ್ಯಕ್ಕೆ ಹಾನಿಕರ' ಎಂದು ಬರೆದಿದ್ದರೂ, ಅದನ್ನು ಓದುತ್ತೇವೆ ಆ ಹಾನಿಯನ್ನು ಜನ ತಮ್ಮದಾಗಿಸಿಕೊಳ್ಳುವ ಬಗೆ ನಿಜಕ್ಕೂ ಶೋಚನೀಯವಾದುದು. ತಂಬಾಕಿನ ಸೇವನೆ ಕ್ಷಯ, ಕೆಮ್ಮು, ಕ್ಯಾನ್ಸರ್‌ಗಳಿಗೆ ದಾರಿಯಾಗುತ್ತದೆ ಎಂಬುದನ್ನು ಅರಿತಿದ್ದರೂ ಕೂಡ ಬಹಳಷ್ಟು ಜನ ಅದಿಲ್ಲದೇ ತಮ್ಮ ದಿನನಿತ್ಯದ ಕಾರ್ಯಗಳನ್ನು ಮಾಡಲಾರರು. ಹೀಗಾಗಿ ಇಂದು ತಂಬಾಕು ಉದ್ದಿಮೆ ಜನರ ಆರೋಗ್ಯಕ್ಕೆ ಮಾರಕವಾಗಿದ್ದರೂ, ಲಾಭದಾಯಕ ಉದ್ದಿಮೆಯಾಗಿ ಮುಂದುವರೆದಿದೆ. ಇತ್ತೀಚೆಗೆ ತಂಬಾಕಿನ ಉದ್ಯಮವೇ ವಿಶ್ವಕಪ್ ಕ್ರಿಕೆಟ್ ಸಂಯೋಜಿಸಿ ಅದನ್ನು ವಿಲ್ಸ್ ವಿಶ್ವಕಪ್–೧೯೯೬ರ ಹೆಸರಿನಲ್ಲಿ ನಡೆಸಿದ್ದು ಅದರ ಶ್ರೀಮಂತಿಕೆಯ ಪ್ರತೀಕವಾಗಿದೆ.

ಈಗ ಧೂಮಪಾನ ಒಂದು ಜಾಗತಿಕ ಸಮಸ್ಯೆಯಾಗಿ ಮುಂದುವರೆದಿದೆ. ಜಗತ್ತಿನ ಮುಂದುವರೆದ ದೇಶಗಳಾದ ಅಮೆರಿಕಾ,

ರಷ್ಯಾ, ಜಪಾನ್‌ಗಳಂಥಹ ದೇಶಗಳೇ ಇದರ ಕಪಿಮುಷ್ಠಿಯಿಂದ ಬಿಡುಗಡೆ ಹೊಂದಲು ಸರ್ವಪ್ರಯತ್ನ ಮಾಡುತ್ತಲಿವೆ. ಹೊಗೆಯ ಕ್ಷಣಿಕ ಸುಖವನ್ನೇ ಬಯಸಿ ಹೊನ್ನ ಶೂಲಕ್ಕೇರುತ್ತಿರುವ ಈ ಧೂಮಪಾನಿಗಳ ಜೀವನ ನಿಜಕ್ಕೂ ದುರಂತಮಯ. ಈ ದುರಂತವನ್ನು ತಪ್ಪಿಸಲೆಂದೇ ವಿಶ್ವಸಂಸ್ಥೆ ಪ್ರತಿವರ್ಷ ಮೇ ೩೧ ರಂದು "ಅಂತರ ರಾಷ್ಟ್ರೀಯ ಧೂಮಪಾನ ವಿರೋಧಿ ದಿನ" ವನ್ನಾಗಿ ಆಚರಿಸುತ್ತ ಬರುತ್ತಲಿದೆ. ಈ ದಿನದಂದು ಜಗತ್ತಿನ ಜನಕ್ಕೆ ಧೂಮಪಾನದ ದುರಂತಗಳ ಬಗೆಗೆ ತಿಳಿಹೇಳುವ ಕಾರ್ಯಕ್ರಮಗಳನ್ನು ಜಗತ್ತಿನ ರಾಷ್ಟ್ರಗಳು ನಡೆಸುತ್ತವೆ. ಬನ್ನಿ ಧೂಮಪಾನದ ದುರಂತದ ಬಗೆಗೆ ನಾವೂ ತಿಳಿದುಕೊಳ್ಳೋಣ.

ತಂಬಾಕು

ತಂಬಾಕು ಒಂದು ಲಾಭದಾಯಕ ವಾಣಿಜ್ಯ ಬೆಳೆ. ಇದರ ಮಾರಕತೆಯ ಅರಿವಿದ್ದರೂ ಜನರು ಅದನ್ನು ಸೇದಲಾರದೇ, ತಿನ್ನಲಾರದೇ, ಕುಡಿಯಲಾರದೇ ಇರಲಾರರು. ಅದಕ್ಕೇ ಇದನ್ನು ಕೆಲವರು 'ಮೋಹಿನಿ' ಎಂದು ಕರೆದಿದ್ದಾರೆ. ಇದು ಮನುಷ್ಯನಿಗೆ ಒಮ್ಮೆ ಚಟವಾಗಿ ಅಭ್ಯಾಸವಾದರೆ ಅದರಿಂದ ಬಿಡುಗಡೆಯಾಗುವುದು ತುಂಬ ಕಷ್ಟ. ಇದರ ವಿಶಿಷ್ಟತೆ ಅಂದರೆ ಇದು ಬುದ್ಧಿಭ್ರಮಣೆಗೊಳಿಸದೆ ಅಮಲೇರಿಸುವ ವಸ್ತುವಾಗಿದೆ. ಇತರ ಮಾದಕಪೇಯಗಳು ಹೆಚ್ಚಾದರೆ ಮನುಷ್ಯ ಸಮತೋಲನ ಕಳೆದುಕೊಳ್ಳುತ್ತಾನೆ ಎಂಬುದು ಎಲ್ಲರಿಗೂ ಗೊತ್ತು. ಆದರೆ ತಂಬಾಕು ಹಾಗಲ್ಲ. ಇದರ ಸೇವನೆ ಹೆಚ್ಚಾದಾಗ ತಲೆಸುತ್ತುವುದು; ಹೊಟ್ಟೆಯಲ್ಲಿ ತಳಮಳ ಉಂಟಾಗುವುದು ಆಗುತ್ತದೆಯಾದರೂ ಅಭ್ಯಾಸವಾದಂತೆ ಇವೆಲ್ಲ ಮಾಯವಾಗುತ್ತವೆ.

ತಂಬಾಕನ್ನು ವೀಳ್ಯದೆಲೆಯೊಂದಿಗೆ ಸೇವಿಸುತ್ತಾರೆ. ಬೀಡಿ, ಸಿಗರೇಟು, ಚುರುಟು (ಚುಟ್ಟಾ), ಸೇರಿಸಿ ಸೇದುತ್ತಾರೆ. ತಿನ್ನಲು ಬಳಸುವ ತಂಬಾಕೇ ಬೇರೆಯಾಗಿದ್ದು, ಸೇದಲು ಬಳಸುವ ತಂಬಾಕೇ ಬೇರೆಯಾಗಿದೆ. ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ, ಪೂರ್ವ ಕರಾವಳಿ ಪ್ರದೇಶಗಳಲ್ಲಿ ತಿನ್ನುವ ತಂಬಾಕು ಹೆಚ್ಚು ಬೆಳೆದರೆ, ಕಡಿಮೆ ಮಳೆ ಬೀಳುವ ಒಳನಾಡು ಪೀಠಭೂಮಿಗಳಲ್ಲಿ ಸೇದುವ ತಂಬಾಕನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇದು ಬೀಜಗಳಿಂದ ಬೆಳೆಯುವ ಬೆಳೆ. ತಂಬಾಕು ಬೀಜಗಳು ಬಹಳ ಚಿಕ್ಕದಾಗಿದ್ದು, ಹಗುರವಾಗಿ ಬಿಳಿ ಬೂದು ಬಣ್ಣ ಹೊಂದಿರುತ್ತವೆ. ತಂಬಾಕಿನ ಕಾಯಿಗೆ ಹೊರಸಿಪ್ಪೆಯಿರುತ್ತದೆ. ಹೊರಸಿಪ್ಪೆ ಕಳಚಿ, ಬೀಜಗಳನ್ನು ಬೇರ್ಪಡಿಸಿ ಬಿತ್ತನೆಮಾಡುತ್ತಾರೆ. ಮೊದಲು ಸಸಿಗಳನ್ನು ತಯಾರುಮಾಡಿಕೊಂಡು ನಂತರ ಹದಗೊಳಿಸಿದ ಹೊಲದಲ್ಲಿ ನೆಡುತ್ತಾರೆ. ಗಿಡಗಳು ಬೆಳೆದು ೮–೯ ಎಲೆಗಳನ್ನು ಬಿಟ್ಟಾಗ ಬೆಳೆಯುವ ತುದಿಭಾಗ ತುಂಡರಿಸುತ್ತಾರೆ. ತುಂಡರಿಸಿದ ನಾಲ್ಕೈದು ದಿನಗಳಲ್ಲಿ ಎಲೆದಂಟುಗಳ ಬುಡದಲ್ಲಿ ಹಾಗೂ ತುದಿಯಲ್ಲಿ ಹೊಸ ಚಿಗುರುಗಳು ಬರುತ್ತವೆ. ನಂತರ ತುದಿಭಾಗದ ಒಂದು ಚಿಗುರನ್ನು ಮಾತ್ರ ಬಿಟ್ಟು ಉಳಿದ ಚಿಗುರುಗಳನ್ನು ೩-೪ ದಿನಗಳಿಗೊಮ್ಮೆ ತೆಗೆಯುತ್ತ ಸಂಗ್ರಹಿಸುತ್ತ ಹೋಗಬೇಕು.

ತಂಬಾಕಿನ ತಾಪ

'**ಧೂಮಪಾನ**'ದ ಮೂಲವಸ್ತು ತಂಬಾಕು. ಇದು "ನಿಕೋಟಿನಾ ಟೋಬಾಕಮ್" ಎಂದು ಕರೆಯಲ್ಪಡುವ ಪೊಟಾಟೋ ಕುಟುಂಬಕ್ಕೆ ಸೇರಿದ ಗಿಡವಾಗಿದೆ. ತಂಬಾಕಿನ ಮಹಿಮೆ ಅಪಾರ! ರೂಪ ಅನಂತ! ಅದನ್ನು ಬೀಡಿ-ಸಿಗರೇಟುಗಳ ರೂಪದಲ್ಲಿ ಸೇದುವವರಿದ್ದಾರೆ. ಎಲೆ ಅಡಿಕೆಗಳೊಡನೆ ಬಾಯಲ್ಲಿ ಹಾಕಿಕೊಂಡು ಜಗಿಯುವವರಿದ್ದಾರೆ. ನಶ್ಯದ ರೂಪದಲ್ಲಿ ಮೂಗಿನಲ್ಲಿ ಏರಿಸುವವರಿದ್ದಾರೆ. ನಿಕೋಟಿನ್ ರೂಪದಲ್ಲಿ ಕುಡಿಯುವವರಿದ್ದಾರೆ.

ತಂಬಾಕಿನ ಸೇವನೆ ದುಷ್ಚಟಗಳಲ್ಲಿ ಒಂದು. ಇಂತಹ ದುಷ್ಚಟಗಳನ್ನು ಮಾನವ ಕಲಿತುಕೊಳ್ಳುವುದೇ ಒಂದು ರಹಸ್ಯದ ವಿಷಯ. ಯಾವ ಗ್ರಂಥಗಳಲ್ಲೂ ಇವುಗಳ ಉಪಯೋಗ ಕುರಿತು ಬರೆದಿಲ್ಲ. ಯಾವ ಹಿರಿಯರೂ ಇವುಗಳ ಬಗೆಗೆ ಉಪದೇಶಿಸಿಲ್ಲ. ಆದರೂ ಈ ದುಷ್ಚಟಗಳು ಸದ್ದುಗದ್ದಲವಿಲ್ಲದೇ ಮಾನವರನ್ನು ಮುತ್ತಿ ಅವರ ಅಸ್ತಿತ್ವವನ್ನೇ ಅಳಿಸಿಬಿಡುತ್ತವೆ. ಕೆಲವರ ಅಭಿಪ್ರಾಯದ ಪ್ರಕಾರ ಇಂದಿನ ಆಧುನಿಕ ಯುಗದ ಮಾನವ ತನ್ನ ಯಾಂತ್ರಿಕ ಬದುಕಿನಲ್ಲಿ ಸ್ವಲ್ಪ ವಿಶ್ರಾಂತಿ ಹೊಂದುವುದಕ್ಕಾಗಿ ಈ ಚಟಗಳನ್ನು ಬೆಳೆಸಿಕೊಳ್ಳುತ್ತಾನೆ ಎಂದು ಹೇಳಲಾಗಿದೆ. ಆದರೆ ಇದು ಸರ್ವಸಮ್ಮತ ಕಾರಣವಲ್ಲ. ವಿಚಾರಿಸುತ್ತ ಹೋದಂತೆ ಈ ಕಾರಣಗಳ ಆಟ ಹೆಚ್ಚುತ್ತಲೇ ಹೋಗುತ್ತದೆ. ಕಾರಣಗಳು ಏನೇ ಇರಲಿ ತಂಬಾಕಿನ ತಾಪ ಮಾತ್ರ ಇಂದು ಜಗತ್ತನ್ನೇ ದಹಿಸುತ್ತಲಿದೆ.

ತಂಬಾಕಿನಲ್ಲಿ ಪ್ರಧಾನವಾಗಿ ಕಂಡು ಬರುವ ವಿಷಕಾರಕ ವಸ್ತುವೆಂದರೆ ನಿಕೋಟಿನ್. ಇದು ತುಂಬ ಪ್ರಬಲವಾದ ವಿಷ. ಅರ್ಧ ಹನಿಯಷ್ಟು ನಿಕೋಟಿನ್ ಮನುಷ್ಯನ ಪ್ರಾಣವನ್ನೇ ಹೀರಬಲ್ಲ ಸಾಮರ್ಥ್ಯ ಹೊಂದಿದೆ. ಒಂದು ಭಯಾನಕ ಅಂಶವೆಂದರೆ ಈ ವಿಷದ ಅಪಾಯದಿಂದ ಪಾರು ಮಾಡಬಲ್ಲ ಪ್ರತಿ ಔಷಧ ಇಲ್ಲದೇ ಇರುವುದು! ನಿಕೋಟಿನ್ ಜೊತೆಗೆ ತಂಬಾಕಿನಲ್ಲಿ ಫರ್ಫರಾಲ್, ಫೈರಿಡಿನ್, ಅಮೋನಿಯಾ. ಎಲ್ಡಿಹೈಡ್ ಎಂಬ ವಿಷಗಳೂ ಸೇರಿಕೊಂಡಿವೆ. ತಂಬಾಕಿನಲ್ಲಿರುವ ಫೈರಿಡಿನ್ ಸೇದುವವರ ಹಲ್ಲುಗಳನ್ನು ಕಪ್ಪು ಬಣ್ಣಕ್ಕೆ ತಿರುಗಿಸುತ್ತದೆ. ಇದರಲ್ಲಿರುವ ನಿಕೋಟಿನ್ ರಕ್ತದಲ್ಲಿರುವ ಕೆಂಪುಕಣಗಳನ್ನೂ ಹಾಳು ಮಾಡುತ್ತದೆ.

ತಂಬಾಕಿನ ಸೇವನೆಯ ಪ್ರಥಮ ಲಕ್ಷಣಗಳೆಂದರೆ ವಾಂತಿಯಾಗುವುದು. ತಲೆ ತಿರುಗುವುದು. ಸೇವನೆ ಮುಂದುವರೆದಂತೆಲ್ಲಾ ಕಾಲದ ಗತಿಯಲ್ಲಿ ಈ ವಿಷಕ್ಕೆ ದೇಹ ಹೊಂದಿಕೊಳ್ಳುತ್ತ ಬಂದು ವಾಂತಿ, ಹಾಗೂ ತಲೆ ಸುತ್ತುವುದು ಆಗುವುದಿಲ್ಲ. ಕ್ರಮೇಣ ಮಾನವ ಉತ್ತೇಜಕ ಅನುಭವದ ದಾಸನಾಗುತ್ತಾನೆ. ಆ ಅವ್ಯಕ್ತ ಅನುಭವದ ಆನಂದಕ್ಕಾಗಿ ಸೇವನೆ ಹೆಚ್ಚುತ್ತಾ ಹೋಗುತ್ತದೆ. ಪರಿಣಾಮ ದೇಹದಲ್ಲಿ ವಿಷ ಹೆಚ್ಚುತ್ತಾ ಹೋಗಿ ನರಗಳ ಮೇಲೆ ರಕ್ತ ಕಣಗಳ ಮೇಲೆ ತುಟಿ ಮತ್ತು ಬಾಯಿಗಳ ಮೇಲೆ ವಿಶೇಷ ಪ್ರಭಾವ ಬೀರುತ್ತದೆ. ತಂಬಾಕು ಸೇದುವಾಗ ಹೊಗೆಯನ್ನು ಒಳಗೆ ತಕ್ಕೊಂಡು ಹೊರಗೆ ಬಿಡಲಾಗುತ್ತದೆ. ತಂಬಾಕಿನ ಹೊಗೆಯೊಂದಿಗೆ ಹೊರ ಬರುವ ವಿಷಕಾರಿ ನಿಕೋಟಿನ್ ಹಾಗೂ

ಟಾರು ಶ್ವಾಸಕೋಶ ಹಾಗೂ ಶ್ವಾಸನಾಳಗಳ ಒಳ ಹೊದಿಕೆಯ ಮೇಲೆ ಪ್ರಬಲ ಪರಿಣಾಮವನ್ನುಂಟುಮಾಡುತ್ತವೆ. ತಜ್ಞ ವೈದ್ಯರ ಪ್ರಕಾರ ಇವೇ ಕ್ಯಾನ್ಸರ್ ರೋಗ ಜನಕ ವಿಷಗಳಾಗಿವೆ. ಸಂಶೋಧನೆಯಿಂದ ತಿಳಿದು ಬಂದ ಪ್ರಕಾರ ತಂಬಾಕು ಸೇದುವವರಲ್ಲೇ ಹೆಚ್ಚು ಕ್ಯಾನ್ಸರ್ ರೋಗ ಕಂಡು ಬಂದಿದೆ. ಒಂದೇ ಒಂದು ಬೀಡಿ ಅಥವಾ ಸಿಗರೇಟ್ ಸೇದಿದರೂ ನಿಕೋಟಿನ್‌ನ ಪರಿಣಾಮದಿಂದ ಶರೀರದ ರಕ್ತನಾಳಗಳು ಸಂಕುಚಿತವಾಗಿ ದೈಹಿಕ ಉಷ್ಣಾಂಶವು ೧-೮°C ನಷ್ಟು ಕಡಿಮೆಯಾಗುತ್ತದೆ ಎನ್ನುತ್ತಾರೆ ವೈದ್ಯರು. ಇದರ ಪರಿಣಾಮ ವಯಸ್ಸಾದವರಲ್ಲಿ ಹೆಚ್ಚಾಗಿದ್ದು, ಅವರಲ್ಲಿ ಅಪಧಮನಿ ಮಾಂದ್ಯದಿಂದ ರಕ್ತನಾಳಗಳನ್ನು ಸಂಕುಚಿತಗೊಳಿಸಿ ರಕ್ತ ಸಂಚಾರಕ್ಕೆ ಅಡೆತಡೆಯಾಗುವುದು. ಇದರಿಂದ ವೃದ್ಧರಲ್ಲಿ ಹೃದಯಾಘಾತ, ಪಾರ್ಶವಾಯು, ಕಾಲು ಕೊಳೆಯುವ ರೋಗಗಳು ವಿಶೇಷವಾಗಿ ಕಂಡು ಬರುತ್ತವೆ. ತಂಬಾಕಿನ ಧೂಮಪಾನಿಗಳಲ್ಲಿ ಉಬ್ಬಸ, ಕೆಮ್ಮು, ಕ್ಷಯರೋಗ, ಉಸಿರುಗಟ್ಟುವಿಕೆ ಮುಂತಾದ ರೋಗಗಳು ಕಾಣಿಸಿಕೊಳ್ಳುತ್ತವೆ.

ಧೂಮಪಾನದ ದುರಂತ

ಧೂಮಪಾನದ ದುರಂತಗಳನ್ನು ನೆನಸಿಕೊಂಡರೇನೇ ಭಯವಾಗುತ್ತದೆ. ವಿಶ್ವ ಸಂಸ್ಥೆ ಧೂಮಪಾನದ ದುರಂತದ ಬಗೆಗೆ ಅಧ್ಯಯನ ಮಾಡಿ ವರದಿಯೊಂದನ್ನು ಬಿಡುಗಡೆ ಮಾಡಿದ್ದು ಅದರಲ್ಲಿ ಹೀಗೆ ಹೇಳಲಾಗಿದೆ— "ಧೂಮಪಾನದಿಂದ ಜಗತ್ತಿನಾದ್ಯಂತ ಪ್ರತಿವರ್ಷ ೧೦ ಲಕ್ಷ ಜನರು ಸಾವನ್ನಪ್ಪುತ್ತಾರೆ. ಹೊಗೆಸೊಪ್ಪು ಸೇವನೆಯಿಂದ ಪ್ರತಿವರ್ಷ ೧೦,೦೦೦ ಜನ ಮಾರಣಾಂತಿಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಪ್ರತಿವರ್ಷ ಸುಮಾರು ಆರು ಲಕ್ಷ ಜನ ಶ್ವಾಸಕೋಶದ ಕ್ಯಾನ್ಸರ್‌ಗೆ ಬಲಿಯಾಗುತ್ತಿದ್ದಾರೆ. ಜಗತ್ತಿನಾದ್ಯಂತ-ಒಂದು ವರ್ಷಕ್ಕೆ ೮೫ರಿಂದ ೧೦೦ ಶತಕೋಟಿ ಡಾಲರ್ ಹಣವನ್ನು ಧೂಮಪಾನಿಗಳು ಸುಮಾರು ೪,೦೦೦ ಶತ ಕೋಟಿ ಸಿಗರೇಟುಗಳನ್ನು ಕೊಳ್ಳಲು (ಈಗ ಈ ದರ ಹೆಚ್ಚಾಗಿರಬಹುದು) ವ್ಯಯಿಸುತ್ತಾರೆ"— ಎಂಥಹ ಭಯಾನಕ ಭವಿಷ್ಯ ಅಲ್ಲವೇ?

ಧೂಮಪಾನದ ದುರಂತ ಅಪಾರ ಅವುಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು

* ದೀರ್ಘಕಾಲದವರೆಗೆ ಅತಿಯಾದ ಧೂಮಪಾನ ಮಾಡುವುದರಿಂದ ದೃಷ್ಟಿ ಮಾಂದ್ಯತೆ ಉಂಟಾಗುತ್ತದೆ.
* ವಾಹನ ಚಾಲನೆ ಮಾಡುತ್ತಿದ್ದಾಗ ಧೂಮಪಾನ ಮಾಡಿದರೆ ಚಾಲಕನ ದೃಷ್ಟಿ ಮುಂದಿರುವ ದಾರಿಯಿಂದ ವಿಚಲಿತವಾಗಿ ಅಪಘಾತಗಳಾಗುವ ಸಾಧ್ಯತೆಗಳಿವೆ. ಅಮೆರಿಕೆಯಲ್ಲಿ ನಡೆಸಿದ ಅಧ್ಯಯನದ ಪ್ರಕಾರ ಅಮೆರಿಕೆಯಲ್ಲಿ ವಿಮಾ ಕಂಪನಿಯ ಸೌಲಭ್ಯ ಪಡೆಯುವವರಲ್ಲಿ ಧೂಮಪಾನ ಮಾಡುವವರು, ಧೂಮಪಾನ ಮಾಡದವರಿಗಿಂತ-ಎರಡು ಪಟ್ಟು ಹೆಚ್ಚು ಅಪಘಾತಗಳನ್ನು ಮಾಡಿದವರಾಗಿದ್ದಾರೆ.
* ಹಾಸಿಗೆಯಲ್ಲಿ ಧೂಮಪಾನ ಅಪಾಯಕರ. ಸೇದುತ್ತ ಅದನ್ನು

ಪೂರ್ಣವಾಗಿ ಹೊಸಕಿ ಹಾಕದೇ ಮಲಗಿಬಿಟ್ಟರೆ ಹಾಸಿಗೆಗೆ ಬೆಂಕಿ ಹತ್ತಿ ಅನಾಹುತಕ್ಕೆ ದಾರಿಯಾಗಬಹುದು. ಅಮೇರಿಕೆಯಲ್ಲಿ ಪ್ರತಿವರ್ಷ ಈ ರೀತಿ ಸಾಯುವವರ ಸಂಖ್ಯೆ ೧೫೦೦ ಹಾಗೂ ಆಸ್ತಿಯ ನಷ್ಟ ೮೦ ಕೋಟಿ ಡಾಲರ್.

* ತಂಬಾಕಿನ ಅತಿಯಾದ ಸೇವನೆಯಿಂದ ಅದರಲ್ಲಿರುವ ಕಾರ್ಬನ್ ಮಾನಾಕ್ಸೈಡ್‌ನಿಂದಾಗಿ ಅಪಾಯಕರವಾದ ರಕ್ತ ಹೀನತೆ ಹಾಗೂ ಹೃದಯ ರೋಗಗಳು ಬರುತ್ತವೆ.
* ಧೂಮಪಾನ ದೇಹದಲ್ಲಿಯ ರೋಗ ನಿರೋಧಕ ಶಕ್ತಿಯನ್ನು ತಗ್ಗಿಸುತ್ತದೆ.
* ಧೂಮಪಾನ ಮಾಡುವವರು ದೀರ್ಘಕಾಲಿಕ ಶ್ವಾಸಕೋಶದ ರೋಗ (ಗೂರಲು ರೋಗ) ದಿಂದ ಬಳಲುತ್ತಾರೆ.
* ದಿನಕ್ಕೆ ೨೦ ರಿಂದ ೩೦ ಸಿಗರೇಟು ಸೇದುವವರು ಬಹು ಬೇಗನೆ ಸಾವು ತಂದುಕೊಳ್ಳುತ್ತಾರೆ.
* ಧೂಮಪಾನಿಗಳಲ್ಲಿ ಕಾಲುಗಳಲ್ಲಿರುವ ಶುದ್ಧ ರಕ್ತ ವಾಹಿನಿಗಳು ಹಾಗೂ ಮಲಿನ ರಕ್ತ ವಾಹಿನಿಗಳು ದಪ್ಪವಾಗುತ್ತವೆ. ಇಂತಹವರು ಸ್ವಲ್ಪ ದೂರ ನಡೆದರೂ ಸಾಕು ತುಂಬ ಆಯಾಸವಾಗುತ್ತದೆ. ನರಗಳ ಸೆಳೆತ ಕಂಡುಬರುತ್ತದೆ.
* ತಂಬಾಕಿನಲ್ಲಿರುವ ನಿಕೋಟಿನ್ ಹಾಗೂ ಕಾರ್ಬನ್ ಮೋನಾಕ್ಸೈಡ್ ಗಳೆರಡೂ ಹೃದಯದ ಮೇಲೆ ಪ್ರಭಾವಬೀರುತ್ತವೆ. ನಿಕೋಟಿನ್ ಕೊಲೆಸ್ಟ್ರಾಲ್ ರಕ್ತದಲ್ಲಿ ಹೆಚ್ಚಾಗುವಂತೆ ಮಾಡುತ್ತದೆ. ನಿಕೋಟಿನ್ ದೇಹದಲ್ಲಿ ಕೆಲವೊಂದು ರಾಸಾಯನಿಕ ಪದಾರ್ಥಗಳನ್ನು ಬಿಡುಗಡೆಯಾಗುವಂತೆ ಮಾಡುತ್ತದೆ. ಅದರೊಂದಿಗೆ ಹೃದಯದ ಕ್ರಮಾನುಗತಿ ಹಾಗೂ ಹೃದಯ ಬಡಿತದ ಪ್ರಮಾಣದಲ್ಲೂ ಏರು-ಪೇರು ಉಂಟು ಮಾಡುತ್ತದೆ. ಹೃದಯರೋಗ ಕಾಣಿಸಿಕೊಳ್ಳುತ್ತದೆ.
* ತಂಬಾಕಿನೊಂದಿಗೆ ಸುಣ್ಣ ಸೇರಿಸಿ ತಿಂದರೆ ಬಾಯಿಕ್ಯಾನ್ಸರ್ ಬರುತ್ತದೆ.
* ಧೂಮಪಾನಿಗಳಲ್ಲಿ ಗ್ಯಾಸ್ ತೊಂದರೆ, ಅಲ್ಸರ್, ಹೃದಯ ತೊಂದರೆ, ಗಂಟಲು ರೋಗ ಸಾಮಾನ್ಯವಾಗಿವೆ.
* ಧೂಮಪಾನವು ರಕ್ತ ಪರಿಚಲನೆಗೆ ಅಡ್ಡಿ ಮಾಡುವುದರಿಂದ ಕುರುಡುತನದೊಂದಿಗೆ ಕಿವುಡುತನವೂ ಬರಬಹುದು.
* ತಲೆನೋವು, ತಲೆ ತಿರುಗುವಿಕೆ, ನಡುಕ, ದುರ್ಗಂಧಶ್ವಾಸ, ಧೂಮಪಾನಿಗಳಲ್ಲಿ ಕಂಡು ಬರುತ್ತವೆ. ಕೆಲವರಲ್ಲಿ ಬಾಯಿಯ ಒಸಡಿನಲ್ಲಿ ಉರಿ ಉಂಟಾಗಿ ಹಲ್ಲುಗಳು ಬಿದ್ದು ಹೋಗಬಹುದು.
* ಗರ್ಭಿಣಿ ಸ್ತ್ರೀಯರು ಧೂಮಪಾನ ಮಾಡುತ್ತಿದ್ದರೆ ಅದು ಗರ್ಭದಲ್ಲಿ

ರುವ ಪಿಂಡದ ಮೇಲೆ ಪರಿಣಾಮ ಬೀರುತ್ತದೆ. ಗರ್ಭಸ್ರಾವವಾಗಲೂ ಬಹುದು. ಧೂಮಪಾನಿ ತಾಯಿಯರಿಗೆ ಹುಟ್ಟಿದ ಮಗು ಕಡಿಮೆ ತೂಕ ಹೊಂದಿರುತ್ತದೆ. ಇದರ ರಕ್ಷಣೆ-ಪಾಲನೆ ಸರಿಯಾಗಿ ಆಗದಿದ್ದರೆ ಈ ಮಗು ಸಾಯುವುದು ಖಂಡಿತ. ಧೂಮಪಾನದಿಂದ ಗರ್ಭರೋಗ ಹೆಚ್ಚುತ್ತದೆ.

* ಧೂಮಪಾನ ಮಾಡದವರು ಧೂಮಪಾನಿಗಳ ಸಂಪರ್ಕದಿಂದಲೂ ತೊಂದರೆಗೆ ಈಡಾಗುತ್ತಾರೆ. ಅವರು ಬಿಡುವ ಹೊಗೆ ಸೇರದೇ ಇರುವವರ ಮೇಲೂ ಪರಿಣಾಮ ಬೀರುತ್ತದೆ. ಕಾರಣ ಧೂಮಪಾನಿಗಳಿಂದ ದೂರವಿರಿ.

ಶ್ವಾಸಕೋಶದ ಕ್ಯಾನ್ಸರ್


ಧೂಮಪಾನಿಗಳಲ್ಲಿ ಕಂಡು ಬರುವ ಅತ್ಯಂತ ದೊಡ್ಡ ದುರಂತ. ಶ್ವಾಸಕೋಶದ ಕ್ಯಾನ್ಸರ್ ಯಾವನೋ ಧೂಮಪಾನಿ ಪ್ರತಿದಿನ ೨೦ ಕ್ಕಿಂತಲೂ ಹೆಚ್ಚು ಸಿಗರೇಟು ಸೇವಿಸಿದರೆ ಅವನು ಭವಿಷ್ಯತ್ತಿನಲ್ಲಿ ಶ್ವಾಶಕೋಶದ ಕ್ಯಾನ್ಸರ್‌ನಿಂದ ಬಳಲುವುದು ಖಚಿತ. ಶ್ವಾಸಕೋಶದ ಕ್ಯಾನ್ಸರ್ ಧೂಮಪಾನ ಮಾಡುವವರಲ್ಲಿ ಧೂಮಪಾನ ಮಾಡದೇ ಇರುವವರಿಗಿಂತ ೧೦ ರಿಂದ ೧೫ ಪಟ್ಟು ಹೆಚ್ಚಾಗಿದೆಯೆಂದು ಹಲವಾರು ಅಧ್ಯಯನಗಳು ತಿಳಿಸಿವೆ. ಒಂದು ಅಧ್ಯಯನದ ಪ್ರಕಾರ ಪ್ರತಿ ವರ್ಷ ಶೇಕಡಾ ೭೫ರಷ್ಟು ಶ್ವಾಸಕೋಶದ ಕ್ಯಾನ್ಸರ್ ಮರಣಗಳು ಸಿಗರೇಟು ಸೇದುವಿಕೆಯಿಂದಾಗಿರುತ್ತವೆ ಎಂದು ತಿಳಿದುಬಂದಿದೆ. ಅನೇಕ ದೇಶಗಳಲ್ಲಿ ಶ್ವಾಸಕೋಶದ ಕ್ಯಾನ್ಸರ್ ಒಂದು ಸಾಮಾನ್ಯ ರೋಗವಾಗಿ ಬಿಟ್ಟಿದೆ.

ಶ್ವಾಸಕೋಶದ ಕ್ಯಾನ್ಸರ್ ಸಾಮಾನ್ಯವಾಗಿ ೪೦ ರಿಂದ ೬೦ ವಯಸ್ಸಿನವರಲ್ಲಿ ಕಂಡು ಬರುತ್ತದೆ. ಇದನ್ನು ಕುರಿತು ವೈದ್ಯರೊಬ್ಬರು ಹೀಗೆ ಹೇಳುತ್ತಾರೆ—"ಶ್ವಾಸಕೋಶದ ಕ್ಯಾನ್ಸರ್ ಇಂದು ಒಂದು ಸಾಮಾನ್ಯ ರೋಗವಾಗಿಬಿಟ್ಟಿದೆ. ಶ್ವಾಸಕೋಶದ ಕ್ಯಾನ್ಸರಿಗೂ ತಂಬಾಕಿನ ಸೇವನೆಗೂ ನಿಕಟವಾದ ಸಂಬಂಧವಿದೆ. ಹೆಚ್ಚಿನ ಧೂಮಪಾನ ತುಟಿ, ನಾಲಿಗೆ, ಗಂಟಲು, ಅನ್ನನಾಳದ ಕ್ಯಾನ್ಸರಿಗೂ ದಾರಿ ಮಾಡಿಕೊಡುತ್ತದೆ. ಇದು ಹೆಚ್ಚಾಗಿ ವಯಸ್ಸಾದವರಲ್ಲಿ ಕಂಡುಬರುತ್ತದೆ."ಇದು ಒಂದು ಭಯಾನಕ ರೋಗ. ಮೊದಲು ಎದೆಯ ಮೇಲೆ ನೋವು ಉಂಟುಮಾಡುತ್ತದೆ. ನಂತರ ಬೆನ್ನೆಲುಬು ನೋಯಲು ಆರಂಭಿಸುತ್ತದೆ. ನಂತರ ಅನ್ನನಾಳಕ್ಕೂ ಹರಡಿ ಆಹಾರ ಸೇವನೆಗೂ ತೊಂದರೆಯಾಗುತ್ತದೆ. ನಂತರ ಗಂಟಲು, ಧ್ವನಿ ಪೆಟ್ಟಿಗೆಯ ಮೇಲೂ ಪ್ರಭಾವ ಬೀರುತ್ತದೆ. ಮುಂದುವರಿದು ಮಿದುಳು ಹಾಗೂ ಯಕೃತ್ತಿಗೂ ಹರಡಿ ಆಧುನಿಕ ವೈದ್ಯಕೀಯ ಕ್ಷೇತ್ರಕ್ಕೂ ಸಡ್ಡು ಹೊಡೆಯುತ್ತದೆ. ಆಧುನಿಕ ಯುಗದ ಯಾವುದೇ ಚಿಕಿತ್ಸೆಯೂ ಇಂಥ ರೋಗಿಯನ್ನೂ ಉಳಿಸಿಕೊಳ್ಳಲಾರದು. ಆಧುನಿಕ ವೈದ್ಯಕೀಯ ಚಿಕಿತ್ಸೆಯ ಪ್ರಕಾರ ಶ್ವಾಸಕ್ಯಾನ್ಸರನ್ನೂ ಪ್ರಥಮ ಹಂತದಲ್ಲಿಯೇ ಪತ್ತೆ ಹಚ್ಚಿದರೆ ರೋಗವನ್ನು ಗುಣಪಡಿಸಬಹುದು. ಆದರೆ ಇದು ಪ್ರಥಮ ಹಂತದಲ್ಲಿ ಪತ್ತೆಯಾಗುವುದೇ ಕಷ್ಟ. ಅದಕ್ಕೇ ಇದು ಭಯಾನಕ ದುರಂತವಾಗಿದೆ.

ಸಿಗರೇಟು ಸೇದುವುದು ಇಂದಿನ ಮಹಿಳೆಯರಿಗೂ ಒಂದು ಫ್ಯಾಷನ್ ಆಗಿರುವುದು; ಆಗುತ್ತಿರುವುದು ದೊಡ್ಡ ದುರಂತವೇ ಆಗಿದೆ. ಇವರ ಈ ಫ್ಯಾಷನ್ ಮಗುವಿನ ಮೇಲೆ ತುಂಬ ಪರಿಣಾಮಬೀರುತ್ತದೆ. ಸ್ತ್ರೀ ಗರ್ಭಧರಿಸಿದಾಗ ಧೂಮಪಾನ ಮಾಡಿದರೆ ಗರ್ಭಸ್ರಾವವಾಗಬಹುದು. ಇಲ್ಲವೆ ಗರ್ಭಸ್ಥ ಶಿಶುವಿಗೂ ನಿಕೋಟಿನ್ ವಿಷದ ಅಭ್ಯಾಸವಾಗಿ ಎಳೆ ವಯಸ್ಸಿನಲ್ಲಿಯೇ ಧೂಮಪಾನಕ್ಕೆ ಬಲಿಯಾಗಬಹುದು. ತಜ್ಞರ ಪ್ರಕಾರ ತಾಯಿ ಧೂಮಪಾನಿಯಾಗಿದ್ದರೆ ಒಬ್ಬ ವಯಸ್ಕನು ಒಮ್ಮೆ ತೆಗೆದುಕೊಳ್ಳಬಹುದಾದಷ್ಟು ವಿಷವನ್ನು ಹಾಲಿನ ಮೂಲಕ ಮಗುವಿಗೆ ಉಣಿಸುವಳು ಎನ್ನಲಾಗಿದೆ.

'ಧೂಮಪಾನ ದುರಂತಕ್ಕೆ ಸೋಪಾನ ಎಂಬುದು ಸತ್ಯದ ಸಂಗತಿ. ಆದರೂ ಇದರ ವ್ಯಾಮೋಹದಿಂದ ಜಗತ್ತು ಹೊರಚಾರದಾಗಿದೆ. ಸಿಗರೇಟ್ ತಯಾರಿಸುವ ಏಷ್ಯಾದ ದೇಶದಲ್ಲಿ ಭಾರತಕ್ಕೆ ಎರಡನೇ ಸ್ಥಾನವಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಿಗರೇಟ್ ಸೇವನೆ ಪ್ರತಿವರ್ಷ ಶೇಕಡಾ ೫ ರಷ್ಟು ಹೆಚ್ಚುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಭಾರತದಲ್ಲಿರುವ ಸಿಗರೇಟಿನ ವಿವಿಧ ಬ್ರ್ಯಾಂಡಿನ ಸಂಖ್ಯೆ ೧೩೦ಕ್ಕೂ ಹೆಚ್ಚು. ತಂಬಾಕಿನ ಉದ್ಯಮದಲ್ಲಿ ದುಡಿಯುವವರ ಸಂಖ್ಯೆ ೩೦,೦೦೦ಕ್ಕೂ ಹೆಚ್ಚು. ತಂಬಾಕು ಹಾಗೂ ತಂಬಾಕಿನ ಉತ್ಪನ್ನ ಮಾರಿ ಜೀವಿಸುವವರು ಭಾರತದಲ್ಲಿ ೧೫ ಲಕ್ಷಕ್ಕೂ ಹೆಚ್ಚು. ಎಂಬುದು ಒಂದು ಅಂದಾಜು.

ತಂಬಾಕು ಒಂದು ಅಪಾಯಕಾರಿ ವಸ್ತು. ಇದನ್ನು ಅರಿತು ತಂಬಾಕಿನ ತಾಪದಿಂದ ಮುಕ್ತವಾಗಲು ಪ್ರಯತ್ನಿಸೋಣ.



ಒಂದು ವಿಷಯ ಜನರಲ್ಲಿ ಒಮ್ಮೆ ಹೋಗಿ ಸೇರಿಕೊಂಡು ಬಿಟ್ಟರೆ ಕಾಲಾಂತರದಲ್ಲಿ ಅದೇ ತತ್ವವಾಗಿ ಬಿಡುತ್ತದೆ.

—ರೆನಾಲ್ಡ್

ಸಸ್ಯಗಳಲ್ಲಿ ಫಲ ಮತ್ತು ಬೀಜ ಪ್ರಸಾರ

ಸಾತನೂರ ದೇವರಾಜು

ಹೂ ಬಿಟ್ಟು ಬೀಜಗಳನ್ನು ಉತ್ಪತ್ತಿ ಮಾಡುವ ಸಸ್ಯಗಳಲ್ಲಿ ಒಂದು ಮಹತ್ತರವಾದ ನಾಟಕೀಯ ಸನ್ನಿವೇಶವನ್ನು ಪ್ರತಿ ಋತುವಿನಲ್ಲಿಯೂ ಕಾಣಬಹುದು. ಪರಾಗ ಸ್ಪರ್ಶ ಆದೊಡನೆ ಉತ್ಪತ್ತಿಯಾದ ಬೀಜಗಳನ್ನು ಹೂ ಬಿಡುವ ಸಸ್ಯಗಳು ತಾವು ವಾಸಿಸುವ ಸ್ಥಳದಿಂದ ದೂರಸ್ಥಳಕ್ಕೆ ಚೆಲ್ಲುತ್ತವೆ. ಹೊಸ ವಾತಾವರಣಕ್ಕೆ ಸ್ಥಳಾಂತರಿಸಲ್ಪಟ್ಟ ಬೀಜ ಮೊಳಕೆಯೊಡೆದು ಹೊಸ ಜೀವನ ಪ್ರಾರಂಭಿಸುವಂತಹುದು ನಿಜಕ್ಕೂ ರೋಮಾಂಚನಕಾರಿಯಾದ ಸನ್ನಿವೇಶ.

ಬೆಳವಣಿಗೆಯ ಪ್ರಾರಂಭಿಕ ಹಂತದಲ್ಲಿ ಸಸ್ಯಗಳು ಹೂಗಳನ್ನು ಹೊರಡಿಸುವ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ. ತಮ್ಮ ಸಂತತಿಯನ್ನು ಪ್ರಕೃತಿಯಲ್ಲಿ ಉಳಿಸಿ ಬೆಳೆಸುವುದಕ್ಕೋಸ್ಕರ ತಮ್ಮನ್ನೇ ಹೋಲುವಂತಹ ಸಸ್ಯಗಳನ್ನು ಸೃಜಿಸುವ ಕಾರ್ಯದಲ್ಲಿ ಹೂ ಬಿಡುವುದು ಪ್ರಥಮ ಹಂತ. ಮುಂದೆ ಸಸ್ಯವಾಗಿ ಬೆಳೆಯಬಹುದಾದ ಚೇತನ ಬೀಜದೊಳಗೆ ಸುಪ್ತವಾಗಿರುತ್ತದೆ. ಬೀಜದೊಳಗಿರುವ ಸುಪ್ತ ಚೇತನ ಹೊಸ ಭೂಮಿಕೆಯತ್ತ ಚದರಿ ಹೋಗುವಂತಹ ಈ ಪ್ರಕ್ರಿಯೆ ಕುತೂಹಲಕಾರಿಯಾಗಿದೆ.

ಬೀಜಗಳನ್ನು ಉತ್ಪತ್ತಿ ಮಾಡುವುದಕ್ಕೋಸ್ಕರ ಸಸ್ಯಗಳು ಹೂಗಳನ್ನು ಬಿಡಲೇಬೇಕು. ಹೂವಿನಿಂದ ಬೀಜ, ಬೀಜದಿಂದ ಸಸ್ಯ. ಹೂವಿನ ಅತ್ಯಂತ ಮುಖ್ಯ ಭಾಗ ವೆಸ್ಟಿಲ್. ಹೆಣ್ಣು ಸಂತಾನಾಭಿವೃದ್ಧಿಯ ಕೋಶಗಳಾದ ಅಂಡಾಣುಗಳನ್ನು ಉತ್ಪತ್ತಿ ಮಾಡಬಲ್ಲ ಅಂಗ. ಈ ಕೋಶಗಳು ವೆಸ್ಟಿಲ್‌ನ ತಳಭಾಗದಲ್ಲಿರುವ ಅಂಡಾಶಯದಲ್ಲಿ ಉತ್ಪತ್ತಿಯಾಗುತ್ತವೆ. ಹೂವಿನ ಮತ್ತೊಂದು ಪ್ರಮುಖ ರಚನೆ ಪರಾಗರೇಣು, ಇದು ಗಂಡು ಸಂತಾನಾಭಿವೃದ್ಧಿಯ ಅಣು. ಪರಾಗರೇಣು ಹೂವಿನ ಶಿಲಾಕಾಗ್ರದ ಮೇಲೆ ಬೀಳುವ ಪ್ರಕ್ರಿಯೆಗೆ ಪರಾಗಸ್ಪರ್ಶ ಎನ್ನುತ್ತೇವೆ. ಪರಾಗರೇಣುವು ಅಂಡಾಣುವಿನೊಂದಿಗೆ ವಿಲೀನವಾಗಿ ಬೀಜ ಉತ್ಪತ್ತಿಯಾಗುತ್ತದೆ. ಅನಂತರ ಅಂಡಾಶಯ ಹಣ್ಣಾಗಿ ಮಾರ್ಪಾಡಾಗುತ್ತದೆ.

ಒಂದು ಸಸ್ಯದಲ್ಲಿ ಉತ್ಪತ್ತಿಯಾದ ಎಲ್ಲ ಬೀಜಗಳು ದೂರ ಸ್ಥಳದವರೆಗೆ ಪ್ರಸಾರವಾಗದೆ ಮಾತೃ ಸಸ್ಯದ ಆವರಣದಲ್ಲಿ ಬಿದ್ದು ಮೊಳಕೆಯೊಡೆದು ಹೊಸ ಸಸ್ಯಗಳಾಗಿ ಬೆಳೆದದ್ದೇ ಆದರೆ, ಆ ಎಳೆಯ ಸಸ್ಯಗಳ ಕಷ್ಟ ಯಾರಿಗೂ ಬೇಡ. ಈ ಎಳೆಯ ಸಸ್ಯಗಳು ಬದುಕಿ, ಬಾಳ್ವೆ ನಡೆಸಲು ಅಗತ್ಯ

ವಾದ ಗಾಳಿ, ಬೆಳಕು, ನೀರು ಪೋಷಕಗಳ ಕೊರತೆಯಿಂದ ಬಳಲುತ್ತವೆ. ಕ್ರಮೇಣ ಈ ಸಸ್ಯಗಳು ಪ್ರಕೃತಿಯಲ್ಲಿ ಬಾಳಲಾರದೆ ಸಾಯುತ್ತವೆ. ಒಂದೇ ಕುಟುಂಬದ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎಲ್ಲಾ ಒಂದೇ ಮನೆಯಲ್ಲಿ ವಾಸಮಾಡು ವವೆಂತಾದರೆ ಎಲ್ಲರಿಗೂ ಸಮರ್ಪಕ ಆಹಾರ ದೊರೆಯುವುದಿಲ್ಲ. ಆದುದರಿಂದ ಪ್ರಾಣಿ ಗಳಲ್ಲೇ ಆಗಲಿ, ಮನುಷ್ಯನೇ ಆಗಲಿ ಬದುಕಿ ಬಾಳ್ವೆ ನಡೆಸುವುದಕ್ಕಾಗಿ ಅಗತ್ಯವಾದ ಆಹಾರ, ವಸತಿ, ಗಾಳಿ, ಬೆಳಕನ್ನು ಪಡೆಯು ವುದಕ್ಕೋಸ್ಕರ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗಲೇಬೇಕು. ಇದೇ ರೀತಿ ಸಸ್ಯಗಳು ಉತ್ಪತ್ತಿಮಾಡಿದ ಬೀಜಗಳು ಸಹ ಮಾತೃ ಸಸ್ಯದಿಂದ ದೂರ ಪ್ರದೇಶದೆಡೆಗೆ ಪ್ರಸಾರ ವಾಗಲೇಬೇಕು.

ಹಲವಾರು ಸಸ್ಯಗಳು ತಮ್ಮ ಶುಷ್ಕ ಹಣ್ಣು ಮತ್ತು ಬೀಜಗಳನ್ನು ದೂರ ಪ್ರದೇಶದೆಡೆಗೆ ಸ್ಥಳಾಂತರಿಸಲ್ಪಡಲು ಅನೇಕ ಮಾರ್ಗೋಪಾಯಗಳನ್ನು ತಮ್ಮದಾಗಿಸಿ ಕೊಂಡಿವೆ. ಬಹುತೇಕ ಬೀಜಗಳು ಯಾಶಸ್ವಿ ಯಾಗಿ ಪ್ರಸಾರವಾಗಲು ಗಾಳಿಯನ್ನು ಅವಲಂಬಿಸಿವೆ. ಗಾಳಿಯ ಮೂಲಕ ಪ್ರಸಾರ ವಾಗುವ ಫಲ ಮತ್ತು ಬೀಜಗಳು ಬಹಳ ಹಗುರವಾಗಿರುತ್ತವೆ. ಇಲ್ಲವೆ ಬೀಜದ ಸುತ್ತ ಕೂದಲಿನಾಕಾರದ ರಚನೆಗಳಿರುತ್ತವೆ. ಈ ರಚನೆಗಳ ನೆರವಿನಿಂದ ಬೀಜಗಳು ವಿಮಾನ ಚಲಿಸುವಂತೆ ಇಲ್ಲವೆ ಬೆಲೂನಿನಂತೆ ಗಾಳಿ ಯಲ್ಲಿ ತೇಲುತ್ತಾ ಮಾತೃ ಸಸ್ಯದಿಂದ ಬಹು ದೂರ ಸಾಗುತ್ತವೆ.

ಮತ್ತೆ ಕೆಲವು ಸಸ್ಯಗಳು, ಫಲ ಮತ್ತು ಬೀಜ ಪ್ರಸಾರಕ್ಕಾಗಿ ಉಪಯೋಗಿಸುವ ತಂತ್ರಗಾರಿಕೆ ಇನ್ನೂ ವಿಶಿಷ್ಟವಾದದ್ದು. ಕೆಲವು ಸಸ್ಯಗಳು ಪ್ರಾಣಿಗಳ ನೆರವಿನಿಂದ ಬೀಜಗಳನ್ನು ಪ್ರಸಾರಮಾಡುತ್ತವೆ. ಪ್ರಾಣಿಗಳು ತಮ್ಮ ವಿಶಿಷ್ಟ ಸೇವೆ ಸಸ್ಯ ಗಳಿಗೆ ಸಲ್ಲುತ್ತದೆ ಎನ್ನುವ ಕನಿಷ್ಠ ಜ್ಞಾನ ವಿಲ್ಲದೆ, ತಮ್ಮ ಅಮೂಲ್ಯ ಸೇವೆಯನ್ನು ಸಸ್ಯಗಳಿಗೆ ನೀಡುತ್ತಾಬಂದಿವೆ. ಬಹುತೇಕ ಪ್ರಾಣಿಗಳು ತಮ್ಮ ದೇಹದ ತುಪ್ಪಳಕ್ಕೆ ಅಂಟಿಕೊಂಡಿರುವ ಬೀಜ ಮತ್ತು ಫಲ ಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುತ್ತವೆ. ಈ ಬಗೆಯ ಬೀಜ ಮತ್ತು ಫಲಗಳು ಪ್ರಾಣಿ ಗಳ ದೇಹದ ಮೇಲೆ ಪುಕ್ಕಟೆ ಸವಾರಿಯ ಮೂಲಕ ಅನೇಕ ಮೈಲಿಗಳವರೆಗೆ ಪ್ರಯಾಣಿಸುತ್ತವೆ. ಇನ್ನೂ ಕೆಲವು ಸಸ್ಯ ಗಳು ತಮ್ಮ ಫಲಗಳನ್ನು ನೀರಿಗೆ ಚೆಲ್ಲು ತ್ತವೆ. ಹೀಗೆ ನೀರಿಗೆ ಬಿದ್ದ ಫಲ ನೀರಿನ ಅಲೆಗಳ ಮೂಲಕ ನೂರಾರು ಮೈಲಿ ದೂರ ತಲುಪಿ, ದಡ ಸಿಕ್ಕಿದೊಡನೆ ಮೊಳೆತು ಹೊಸ ಸಸ್ಯವಾಗಿ ಬೆಳೆಯುತ್ತವೆ. ನೀರಿನ ಮೂಲಕ ಫಲ ಪ್ರಸಾರವಾಗುವಿಕೆಯನ್ನು ತೆಂಗಿನ ಮರಗಳಲ್ಲಿ ಕಾಣಬಹುದು.

ಮೇಲಿನ ನಿದರ್ಶನಕ್ಕೆ ಭಿನ್ನವಾದ ತಂತ್ರ ಗಾರಿಕೆಯನ್ನು ಕೆಲವು ಸಸ್ಯಗಳು ಕಂಡು ಕೊಂಡಿವೆ. ನಿತ್ಯ ಹರಿದ್ವರ್ಣ ಕಾಡಿನ ಮರ ಗಳ ಬೀಜಗಳಲ್ಲಿ ಕಾಗದಕ್ಕಿಂತ ತೆಳುವಾದ ರೆಕ್ಕೆಗಳಿವೆ. ರೆಕ್ಕೆಗಳ ನೆರವಿನಿಂದ ಗಾಳಿಯಲ್ಲಿ ಗಿರುಗುಡುತ್ತಾ ಚಲಿಸುತ್ತವೆ. ಪೈನ್ ಮತ್ತು ಸ್ಪರ್ಶ ಮರದ ಬೀಜಗಳು, ಬೀಜದ ಒಂದೇ ಬದಿಗೆ ರೆಕ್ಕೆಗಳನ್ನು ಹೊಂದಿವೆ. "ಸಿಚಾರ್"ನನ್ನದ ಬೀಜದ ಸುತ್ತ ತೆಳುವಾದ ರೆಕ್ಕೆಯ ರಚನೆ ಇದೆ. ಸಿಚಾರ್ ಮರ ಬಲಿತ ನಂತರ ಹೊರಪೆ

ಯಂತಹ ರಚನೆಗಳು ಬೇರ್ಪಡುತ್ತವೆ. ಹಾಗಾಗಿ ರೆಕ್ಕೆಯಂತಹ ರಚನೆ ಇರುವ ಬೀಜಗಳು ಗಾಳಿಯ ನೆರವಿನಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಸಾರವಾಗುತ್ತವೆ.

ಬಲೂನ್ ಮರದ ಫಲಗಳು. ಹೆಚ್ಚಿನ ದೂರ ಪ್ರದೇಶದವರೆಗೆ ಪ್ರಸಾರವಾಗುವ ಫಲಗಳು. ಇವು ಬಲು ಹಗುರವಾಗಿದ್ದು ಗಾಳಿಯಲ್ಲಿ ಬಹಳ ಕಾಲ ತೇಲಬಲ್ಲವು. ಈ ಫಲಗಳ ಸುತ್ತ ರೇಷ್ಮೆ ಎಳೆಯಂತಹ ರಚನೆಗಳಿರುತ್ತವೆಯೇ ಹೊರತು, ಕಾಗದದಂತಹ ರೆಕ್ಕೆಗಳಿಲ್ಲ. ಇದೇ ರೀತಿ ಎಕ್ಕ ಗಿಡದ ಫಲಗಳಲ್ಲಿ ನೂರಾರು ಬೀಜಗಳು ಹುದುಗಿರುತ್ತವೆ. ಈ ಬೀಜದ ಸುತ್ತ ರೇಷ್ಮೆ ಎಳೆಯಂತೆ ಪ್ಯಾರಾಚೂಟ್‌ನಂತಿರುವ ರಚನೆ ಇರುತ್ತದೆ. ಫಲ ಪಕ್ವವಾದ ಅನಂತರ, ಫಲದೊಳಗಿರುವ ಬೀಜಗಳು ಗಾಳಿಯಲ್ಲಿ ಚದುರಿ ಹೋಗುತ್ತವೆ. ಬೀಜದ ಸುತ್ತ ಆವರಿಸಿರುವ ಪ್ಯಾರಾಚೂಟ್‌ನಂತಹ ರಚನೆ ಗಾಳಿಯ ಸಂಪರ್ಕಕ್ಕೆ ಬಂದ ತಕ್ಷಣ ತೆರೆದುಕೊಳ್ಳುತ್ತದೆ. ಹಾಗಾಗಿ ಎಕ್ಕದ ಬೀಜಗಳು ಗಾಳಿಯಲ್ಲಿ ನೂರಾರು ಮೈಲಿಗಳವರೆಗೆ ತೇಲುತ್ತಾ ಸಾಗುತ್ತವೆ.

ಅಂತೂ ಇಂತಹ ಬೀಜಗಳು ಬಹುದೂರ ಪ್ರಸಾರವಾಗಬೇಕಾದರೆ ಬೀಜಗಳು ಬಹಳ ಹಗುರವಾಗಿರಬೇಕಾಗಿರುತ್ತದೆ. ಆದುದರಿಂದ ಬೀಜದಲ್ಲಿ ಹೆಚ್ಚಿನ ಪ್ರಮಾಣದ ಆಹಾರ ಸಂಗ್ರಹವಾಗುವುದಕ್ಕೆ ಆಗುವುದಿಲ್ಲ.

ಇದರಿಂದಾಗಿ ಬೀಜದಲ್ಲಿ ಸ್ವಲ್ಪವೇ ಸ್ವಲ್ಪ ಪ್ರಮಾಣದ ಆಹಾರ ಸಂಗ್ರಹವಾಗಿರುತ್ತದೆ. ಬೆಳೆಯುತ್ತಿರುವ ಎಳೆಯ ಸಸ್ಯಕ್ಕೆ ಆಹಾರ ಬೇಕೇ ಬೇಕು. ಆಗ ತಾನೇ ಬೀಜದೊಳಕೆಯಾದ ಎಳೆಯ ಸಸ್ಯಗಳು ಆಹಾರವನ್ನು ಉತ್ಪತ್ತಿ ಮಾಡಲಾರವು. ಈ ಕಾರಣದಿಂದ ಸ್ವಲ್ಪ ಪ್ರಮಾಣದ ಆಹಾರ ಬೀಜದಲ್ಲಿ ಸಂಗ್ರಹಿತವಾಗಿರುತ್ತದೆ. ಹೀಗೆ ಸಂಗ್ರಹವಾಗಿರುವ ಆಹಾರವನ್ನು ಉಪಯೋಗಿಸಿ ಬೆಳೆಯುತ್ತವೆ. ಅನಂತರದ ದಿನಗಳಲ್ಲಿ ಬೇರಿನ ಸಹಾಯದಿಂದ ನೀರು ಮತ್ತು ಪೋಷಕಾಂಶಗಳನ್ನು ಭೂಮಿಯಿಂದ ಹೀರಿಕೊಂಡು ಆಹಾರವನ್ನು ತಯಾರಿಸುತ್ತವೆ.

ಪ್ರಾಣಿಗಳಿಂದ ಪ್ರಸಾರವಾಗುವ ಫಲ ಮತ್ತು ಬೀಜಗಳು ಗಾಳಿಯ ಮೂಲಕ ಪ್ರಸಾರವಾಗುವವುಗಳಿಗಿಂತ ದೊಡ್ಡವು, ಬಹುತೇಕ ಫಲಗಳಲ್ಲಿ ಹೆಚ್ಚಿನ ಪ್ರಮಾಣದ ಆಹಾರ ಸಂಗ್ರಹಕವಾಗಿರುತ್ತದೆ. ಈ ಫಲಗಳು ಮುಳ್ಳಿನಂತಹ ರಚನೆಗಳನ್ನು ಹೊಂದಿವೆ. ಹೀಗಾಗಿ ಈ ಫಲಗಳು ಸಸ್ತನಿಗಳ ತುಪ್ಪಳಗಳಿಗೆ ಸಿಕ್ಕಿಕೊಳ್ಳುತ್ತವೆ. ಪ್ರಾಣಿಗಳೇ ಏಕೆ? ಕೆಲವು ಸಾರಿ ನಾವು ಸಹ ನಮಗೆ ಅರಿವಿಲ್ಲದಂತೆ ಫಲ ಮತ್ತು ಬೀಜ ಪ್ರಸಾರದಲ್ಲಿ ಪರೋಕ್ಷವಾಗಿ ಸಸ್ಯಗಳಿಗೆ ನೆರವಾಗುತ್ತೇವೆ. ಹುಲ್ಲುಗಾವಲಿನಲ್ಲಿ ಅಡ್ಡಾಡುತ್ತಿರುವಾಗ ಮುಳ್ಳಿನಿಂದ ಕೂಡಿದ ಹಲವು ಬಗೆಯ ಫಲಗಳು ನಮ್ಮ ಬಟ್ಟೆಗೆ ತಗುಲಿಕೊಂಡ ಫಲ ಮತ್ತು ಬೀಜಗಳನ್ನು ಒಗೆದು ಬೀಜ ಪ್ರಸಾರಕ್ಕೆ ಪರೋಕ್ಷವಾಗಿ ನಾವು ನೆರವಾಗುತ್ತೇವೆ.

ನೆಲದ ಭಾಗದಲ್ಲಿ ಸಮೃದ್ಧವಾಗಿ ಬೆಳೆಯುವ ಹುಲ್ಲಿನ ಜಾತಿಯ ಸಸ್ಯಗಳ ಫಲಗಳು ಉದ್ದವಾದ ಗೊಂಚಲಿನಲ್ಲಿರುತ್ತವೆ. ನೆಲದ ಮೇಲೆ ಓಡಾಡುವ ಪ್ರಾಣಿಗಳ ದೇಹದ ತುಪ್ಪಳಕ್ಕೆ ಈ ಬಗೆಯ ಫಲಗಳು

ಸುಲಭವಾಗಿ ಅಂಟಿಕೊಳ್ಳುತ್ತವೆ. ಹೀಗಾಗಿ ಹುಲ್ಲಿನ ಜಾತಿಯ ಸಸ್ಯದ ಫಲಗಳು ಸುಲಭವಾಗಿ ಪ್ರಸಾರಗೊಳ್ಳುತ್ತವೆ.

ಸಸ್ಯಗಳು ಮತ್ತು ಬೀಜಗಳನ್ನು ಪ್ರಸಾರ ಮಾಡುವುದಕ್ಕೆ ಯಾಂತ್ರಿಕ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತವೆ. ಸಸ್ಯಗಳ ಕೆಲವು ಚಟುವಟಿಕೆಗಳು ಮಾನವ ಕೃತ ಯಾಂತ್ರಿಕ ಚಟುವಟಿಕೆಗಳಂತೆ ಭಾಸವಾಗುತ್ತವೆ. ಸಸ್ಯಗಳನ್ನು ನೋಡಿ ಮಾನವ ಈ ಯಾಂತ್ರಿಕ ಶಕ್ತಿಯನ್ನು ಸಾಧಿಸಿಕೊಂಡಿರಬಹುದೆಂದು ಕೆಲ ಬಗೆಯ ಸಸ್ಯಗಳ ಚಟುವಟಿಕೆಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡುವುದರ ಮೂಲಕ ಹೇಳಬಹುದು. ಈ ಬಗೆಯ ಚಟುವಟಿಕೆಗಳನ್ನು ಸ್ಲಿಂಗ್ ಸಸ್ಯದ ಫಲಗಳಲ್ಲಿ ಕಾಣಬಹುದು. ತುಪಾಕಿ ಹಾರಿಸಿದಂತೆ ಸ್ಲಿಂಗ್ ಫಲವು ಬೀಜಗಳನ್ನು ಶೂಟ್ ಮಾಡುತ್ತದೆ. ವರ್ಜಿನೀಯ ಸಸ್ಯದ ಉದ್ದವಾದ ತೊಟ್ಟಿನಲ್ಲಿ ಫಲವು ನೇತಾಡುತ್ತಿರುತ್ತದೆ. ಈ ಸಸ್ಯಗಳು ನಡುವೆ ಓಡಾಡುವ ಪ್ರಾಣಿಯ ದೇಹ ಈ ಫಲವನ್ನು ಸೋಂಕಿದರೆ ಉದ್ದವಾದ ತೊಟ್ಟಿನ ಮೇಲೆ ಒತ್ತಡ ಬೀಳುತ್ತದೆ. ಈ ಒತ್ತಡದಿಂದ ಫಲವು ತೊಟ್ಟಿನ ಸಂಪರ್ಕವನ್ನು ಕಡಿದುಕೊಂಡು ಮಾತೃ ಸಸ್ಯದಿಂದ ಸ್ವಲ್ಪದೂರ ಹೋಗಿ ಬೀಳುತ್ತದೆ. ಇದೇ ಬಗೆಯ ತಂತ್ರಗಾರಿಕೆಯನ್ನು ಬಟಾಣಿಯಂತಹ ಸಸ್ಯಗಳಲ್ಲಿ ಕಾಣಬಹುದು. ಬಟಾಣಿ ಗಿಡದಲ್ಲಿ ಫಲವು ಒಣಗಿದಾಗ ಒತ್ತಡದಿಂದಾಗಿ ಸಿಡಿದು ಬೀಜಗಳು ಮಾತೃ ಸಸ್ಯದಿಂದ ಬಹಳ ದೂರ ಹೋಗಿ ಬೀಳುತ್ತವೆ.

ವುಡ್ ಸೊರಿಲ್ ಸಸ್ಯದ ಬೀಜ ಪ್ರಸಾರದ ಸಂಗತಿ ಇನ್ನೂ ವಿಶಿಷ್ಟವಾದದ್ದು. ಇದು ವಸಂತ ಋತುವಿನಲ್ಲಿ ಅಲಂಕೃತವಾದ, ಆಕರ್ಷಕವಾದ ಹೂಗಳನ್ನು ಬಿಡುತ್ತದೆ. ಚಳಿಗಾಲದ ಹೊತ್ತಿಗೆ ಈ ಹೂಗಳು ಹಣ್ಣುಗಳಾಗಿ ಮಾಗುತ್ತವೆ. ಹಣ್ಣು ಮಾಗಿದಂತೆ ಒಳಗಿನ ಪದರ ಉಬ್ಬಿಕೊಂಡರೆ ಹೊರಗಿನ ಕವಚ ಉಬ್ಬಿಕೊಳ್ಳುವುದಿಲ್ಲ. ಇದರಿಂದಾಗಿ ಹಣ್ಣಿನ ಹೊರ ಕವಚದಲ್ಲಿ ಬಿರುಕು ಉಂಟಾಗುವುದರ ಮೂಲಕ ಬೀಜಗಳು ಹಣ್ಣಿನಿಂದ ಬಹಳ ದೂರ ಚೆಲ್ಲುತ್ತವೆ.

"ಮುಟ್ಟಿದರೆ ಮುನಿ" ಸಸ್ಯವನ್ನು ನೋಡಿಲ್ಲದವರು ವಿರಳವೆಂದೇ ಹೇಳಬಹುದು. ಈ ಸಸ್ಯದ ಎಲೆಗಳನ್ನು ಮುಟ್ಟಿದ ತಕ್ಷಣವೇ ಮುದುಡಿಕೊಳ್ಳುತ್ತವೆ. ಹೀಗಾಗಿ ಈ ಸಸ್ಯಕ್ಕೆ "ಮುಟ್ಟಿದರೆ ಮುನಿ" ಎಂಬ ಹೆಸರು ಬಂದಿದೆ. ಮುಟ್ಟಿದರೆ ಮುನಿ ಎಂದು ಹೆಸರು ಬರುವುದಕ್ಕೆ ಮೇಲ್ಕಂಡ ಒಂದೇ ಒಂದು ಕಾರಣವಲ್ಲ. ಇದರ ಜೊತೆಗೆ ಮತ್ತೊಂದು ಸಂಗತಿ ಸೇರಿಕೊಂಡಿದೆ. ಈ ಸಸ್ಯದ ಫಲವನ್ನು ಮುಟ್ಟಿದ ತಕ್ಷಣವೇ ಬೀಜಗಳು ಫಟಫಟನೆ ಸಿಡಿಯುತ್ತವೆ. ಹಾಗಾಗಿ ಈ ಮೇಲಿನ ಎರಡು ಕಾರಣಗಳಿಂದ ಈ ಸಸ್ಯಕ್ಕೆ ಮುಟ್ಟಿದರೆ ಮುನಿ ಎಂಬ ಹೆಸರು ಬಂದಿದೆ ಎಂದು ಹೇಳಬಹುದು. ಮುಟ್ಟಿದರೆ ಮುನಿ ಸಸ್ಯದ ಫಲ ತೆಳುವಾದ ಉದ್ದವಾಗಿರುವ ಐದು ಕೋಣೆಗಳಿಂದ ಕೂಡಿರುತ್ತದೆ. ಈ ಸಸ್ಯದ ನಡುವೆ ಚಲಿಸುತ್ತಿರುವ ಯಾವುದಾದರೂ ಪ್ರಾಣಿಯ ದೇಹ ಸೋಂಕಿದಾಗ ಫಲದ ಹೊರ ಕವಚ ಸುರಳಿಯಂತೆ ಬಿಚ್ಚಿಕೊಳ್ಳುವುದರ ಮೂಲಕ ಬೀಜಗಳು ಹಲವು ಗಜಗಳವರೆಗೆ ದೂರ ಸಿಡಿಯುತ್ತವೆ.

ಇದುವರೆವಿಗೆ ವಿವಿಧ ಬಗೆಯ ಸಸ್ಯಗಳು ಶುಷ್ಕ ಫಲ ಮತ್ತು ಬೀಜಗಳನ್ನು ಗಾಳಿಯ ಮಾರುತರ ಇಲ್ಲವೇ ಪ್ರಾಣಿಯ ತುಪ್ಪುಳಕ್ಕೆ ಅಂಟಿಕೊಂಡ ಮಾತ್ರ ಸಸ್ಯದಿಂದ ಬಹುದೂರ ಪ್ರದೇಶದೆಡೆಗೆ ಬೀಜ ಪ್ರಸಾರವಾಗುವಿಕೆಯ ವೈವಿಧ್ಯಮಯ ತಂತ್ರಗಾರಿಕೆಯ ಬಗ್ಗೆ ತಿಳಿದುಕೊಂಡಿರುವುದು ಸರಿಯಷ್ಟೆ. ಇದೇ ರೀತಿ ವಿವಿಧ ಸಸ್ಯಗಳು ತಮ್ಮ ರಸಭರಿತ ಹಣ್ಣುಗಳನ್ನು ಪ್ರಸಾರ ಮಾಡುವುದಕ್ಕೆ ಅನೇಕ ತಂತ್ರಗಾರಿಕೆಗಳನ್ನು ತಮ್ಮದಾಗಿಸಿಕೊಂಡಿವೆ. ಇವುಗಳಲ್ಲಿ ಮೊದಲನೆಯದಾಗಿ ಫಲಗಳ ಹೊರಕವಚದ ಬಣ್ಣ. ಪಕ್ಷಿಗಳು ಇಲ್ಲವೆ ಇತರೆ ಪ್ರಾಣಿಗಳ ಗಮನವನ್ನು ತಮ್ಮತ್ತ ಸೆಳೆಯಲು ಹಣ್ಣುಗಳು ವೈವಿಧ್ಯಮಯ ಬಣ್ಣದಿಂದ ಕೂಡಿವೆ. ಇದೇ ಅಲ್ಲದೆ ಬೀಜದ ಸುತ್ತ ಆವರಿಸಿರುವ ಹಣ್ಣಿನ ಭಾಗ ರುಚಿಯಿಂದ ರಸಭರಿತವಾಗಿ ಕೂಡಿರುವುದರಿಂದ ಕೆಲವು ಹಣ್ಣುಗಳು ತಿನ್ನುವುದಕ್ಕೆ ರುಚಿಯಾಗಿರುತ್ತವೆ.

ಒಂದು ನಿರ್ದಿಷ್ಟ ಪ್ರಾಣಿ ತಿನ್ನುವುದಕ್ಕೆಂದು ಕಿತ್ತ ಹಣ್ಣನ್ನು ಅದೇ ಸ್ಥಳದಲ್ಲಿ ತಿನ್ನುವುದಿಲ್ಲ. ತನಗೆ ವಿರಾಮವಾದಾಗ ತಿನ್ನುವುದಕ್ಕೋಸ್ಕರ ಬಹುದೂರ ಒಯ್ದು ಹಣ್ಣನ್ನು ತಿಂದು ಬೀಜವನ್ನು ಬಿಸಾಡುವುದು ಸರಿಯಷ್ಟೆ. ಪಕ್ಷಿಗಳಂತೂ ಈ ರೀತಿ ಬಹಳ ದೂರ ತೆಗೆದುಕೊಂಡು ಹೋಗಿ ಹಣ್ಣನ್ನು ತಿಂದು ಬೀಜಗಳನ್ನು ಬಿಸಾಡುತ್ತವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಕೆಲವು ಪ್ರಾಣಿಗಳು ಹಣ್ಣುಗಳನ್ನು ತಿಂದು ಬೀಜವನ್ನು ಬಿಸಾಡದೆ ಇಡೀ ಹಣ್ಣನ್ನು ಸಂಪೂರ್ಣವಾಗಿ ನುಂಗುತ್ತವೆ. ಇಂಥ ಸಂದರ್ಭದಲ್ಲಿ ಬೀಜಕ್ಕೆ ಏನೂ ತೊಂದರೆಯಾಗುವುದಿಲ್ಲ. ಬೀಜದ ಸುತ್ತ ಗಟ್ಟಿಯಾಗಿರುವ ಪೊರೆ ಅವೃತವಾಗಿರುತ್ತದೆ. ಈ ಗಟ್ಟಿಯಾದ ಪೊರೆ ಪ್ರಾಣಿಯ ಜೀರ್ಣಾಂಗ ರಸವ ವಿರುದ್ಧ ರಕ್ಷಿಸುತ್ತದೆ. ಪ್ರಾಣಿಗಳು ವಿಸರ್ಜಿಸಿದ ವಸ್ತುವಿನ ಜೊತೆಯಲ್ಲಿ ಹೊರಬಂನು ಮೊಳಕೆಯೊಡೆದು ಹೊಸ ಸಸ್ಯವಾಗಿ ಬೆಳೆಯಲಾರಂಭಿಸುತ್ತದೆ.

ಭೇದಭಾವಗಳನ್ನು ಹೊತ್ತುಕೊಂಡೇ ನಾವು ಹುಟ್ಟಿಬರುವದಿಲ್ಲ. ಅವನ್ನು ನಾವು, ಬುದ್ಧಿಪೂರ್ವಕ ಕಲಿಯುತ್ತೇವೆ. ಎಲ್ಲರೂ ಹುಟ್ಟಿಬಂದುದು ತಾಯಿಯ ಹೊಟ್ಟೆಯಿಂದಲೇ, ಯಾರೂ ಮೇಲಿಂದಲೇ ಹುಟ್ಟಿ ಬಂದಿಲ್ಲ. ತಾಯಿ ಹೊಟ್ಟೆಯಿಂದಲೇ ಹುಟ್ಟಿ ಬಂದ ನಾವೆಲ್ಲರೂ ಭೇದಭಾವ ತೊರೆದು ಜೀವಿಸಲು ಕಲಿಯಬೇಕು.

—ಶ್ರೀ ಚೈತನ್ಯ

ಎರಡು ಹೆಣ್ಣು ಒಂದು ಗಂಡು

ಲೇ: ವಿಮಲ್ ಮಿತ್ರ ಅನು: ಡಿ. ಎನ್. ಶ್ರೀನಾಥ್

(ಮುಂದುವರಿದುದು)

"ಆದ್ರೆ ನನಗೆ ನಿಮ್ಮ ಮಾತೇ ಅರ್ಥ ಆಗ್ತಾ ಇಲ್ಲ. ತುಂಬಾ ದಿನಗಳಿಂದ ಅವರಿಗೆ ಚಿಕಿತ್ಸೆ ನಡೀತಿದೆ ಅಂತ ನಾನು ಕೇಳಿದ್ದೆ. ಅವರಿಗಾಗಿ ಅವರ ಎರಡನೇ ಹೆಂಡತಿ ತುಂಬಾ ಹಣ ಖರ್ಚುಮಾಡಿದರು, ಈಗ ಅಟಲ್ ದಾರವಂಗೋಸ್ಕರ–ಅವರು ಬದುಕಿರಲೋಸುಗ ಅವರು ದಿನವಿಡೀ ದುಡಿಯುತ್ತಿದ್ದಾರೆ ಅಂತಲೂ ಕೇಳಿದೆ."

"ನೀವು ಕೇಳಿದ್ದು ತಪ್ಪು."

"ಇಲ್ಲ ಅತ್ತಿಗೆ. ನಾನು ಕೇಳಿದ್ದು ತಪ್ಪಲ್ಲ. ಅವರು ನಮ್ಮ ಮೊಹಲ್ಲಾದ ಶಾಲೆಯಲ್ಲಿ ನೌಕರಿ ಮಾಡುತ್ತಿದ್ದಾರೆ. ನಾವು ಅವರ ಪತಿಯ ಚಿಕಿತ್ಸೆಗಾಗಿ ಒಂದು ಸಾವಿರ ರೂಪಾಯಿಗಳನ್ನು ಚಂದಾ ಕೂಡಿಸಿಯೂ ಕೊಟ್ಟಿದ್ದೇವೆ."

"ನೀವು ತಪ್ಪು ಮಾಡಿದಿರಿ. ಅಷ್ಟು ಕ್ರೂರಿ, ಮೋಸಗಾರ್ತಿ, ನೀಚ ಹೆಂಗಸನ್ನು ನಾನಿದುವರೆಗೂ ನೋಡೇ ಇಲ್ಲ. ಅವಳು ಎದುರಿಸಿದ್ದಿದ್ದರೆ ಅವಳ ಕತ್ತು ಹಿಚುಕಿ ಬಿಡುತ್ತಿದ್ದೆ."

"ಸಿಟ್ಟಿನ ಭರದಲ್ಲಿ ನೀವು ಯಾರಿಗೋ ಬೈಯುತ್ತಿದ್ದೀರ?"

"ನಿಮಗೇನೂ ವಿಷಯ ತಿಳಿದಿಲ್ಲ; ಹೀಗಾಗಿ, ಅವಳ ಪಕ್ಷ ವಹಿಸಿ ಮಾತಾಡ್ತಿದ್ದೀರ. ನಿಮಗೆ ನಿಜ ಸಂಗತಿ ತಿಳಿದಿದ್ದರೆ, ನೀವು ಅವಳನ್ನು ಸನ್ಮಾನಿಸಿ ಸಾವಿರ ರೂಪಾಯಿ ಕೊಡ್ತಿರಲಿಲ್ಲ. ಥೂ. ಅವಳೆಷ್ಟು ನೀಚಳು!" ಕುಂತೀದೇವಿ ಆವೇಶದಿಂದ ಕಂಪಿಸಿದಳು.

"ಅವರನ್ನು ನಾವೆಲ್ಲಾ ಪತಿಪರಾಯಣೆಯ ರೂಪದಲ್ಲಿ ಮಾತ್ರ ಕಂಡಿದ್ದೇವೆ-ತನ್ನ ಪತಿಗಾಗಿ ಅವಳೆಷ್ಟು ಹಣವನ್ನು ಕಳೆದುಕೊಂಡಳು. ತನ್ನ ಜೀವನವನ್ನು ಹೇಗೆ ಸವೆಸುತ್ತಿದ್ದಾಳೆ!"

"ಅವಳ ಬಗ್ಗೆ ನಿಮಗೆ ನಿಜ ಸಂಗತಿ ತಿಳಿದಿದ್ದರೆ, ನೀವೆಲ್ಲಾ ಕಸಪರಿಕೆ ಹಿಡಿದು ಅವಳನ್ನು ಶಾಲೆಯಿಂದ ಓಡಿಸಿಬಿಡುತ್ತಿದ್ದಿರಿ."

"ಯಾಕೆ?"

"ಹಾಗಾದ್ರೆ ಕೇಳಿ. ಅವಳೆಷ್ಟು ನೀಚಳೆಂದರೆ, ಗಂಡನ ಬಗ್ಗೆ ಅವಳಿಗೆ ಸ್ವಲ್ಪವೂ ಕರುಣೆಯಿಲ್ಲ. ಅಂಥಾ ನಿರ್ದಯಿ ಹೆಣ್ಣು ಜಗತ್ತಿನಲ್ಲಿ ಇನ್ನೆಂದೂ ಹುಟ್ಟಿಲ್ಲ. ನನ್ನ ಗಂಡನ ಆರೋಗ್ಯ ಸುಧಾರಿಸುತ್ತಿತ್ತು. ಆದರೆ ಯಾವತ್ತು ಇವರು ಆ ಕಳಂಕಿನಿಯ ಕೈಗೆ

ಬಿದ್ದರೋ ಅಂದಿನಿಂದ ನಾನು ಇವರ ಆಸೆಯನ್ನೇ ಬಿಟ್ಟು ಬಿಟ್ಟೆ"

"ಎಂಥಾ ವಿಚಿತ್ರ!"

"ಹೌದು! ಔಷಧಿ ಹಾಕಿ ಅರ್ಧ ಸತ್ತ ಇಲಿಗಳು ಒದ್ದಾಡುವುದನ್ನು ನೋಡಿ ಖುಷಿಪಡುವ ಹಾಗೇ ಇದು! ಇಂದುಲೇಖಾ ದೇವಿ ಇವರ ಚಿಕಿತ್ಸೆಗಾಗಿ ಹಣ ಖರ್ಚು ಮಾಡ್ತಿದ್ದಾಳೆ ಅಗತ್ಯ ಬಿದ್ದಾಗ ಇವರನ್ನು ಹವಾ ಬದಲಾವಣೆಗಾಗಿ ಬೇರೆ-ಬೇರೆ ಊರುಗಳಿಗೂ ಕಳುಹಿಸುತ್ತಿದ್ದಾಳೆ. ಜಗನ್ನಾಥ ಪುರಿಯಲ್ಲಿ ಇವರನ್ನು ಎರಡು ವರ್ಷಗಳ ಕಾಲ ಇಟ್ಟಿದ್ದಳು. ಈಚೆಗೆ ಪೆಂಡ್ರಾ ರೋಡಿನಲ್ಲಿರುವ ಸ್ಯಾನಿಟೋರಿಯಮ್‌ನಲ್ಲೂ ಮೂರು ವರ್ಷಗಳ ಕಾಲ ಇಟ್ಟಿದ್ದಳು.

"ಖರ್ಚನ್ನೆಲ್ಲಾ ಅವರೇ ನೋಡಿಕೊಳ್ತಿದ್ದಾರಾ?"

"ಹೌದು. ಇಲ್ಲಿಯವರೆಗೆ ಲಕ್ಷಾಂತರ ರೂಪಾಯಿಗಳನ್ನು ಅವಳು ಖರ್ಚು ಮಾಡಿದ್ದಾಳೆ. ಹಣದ ವಿಷಯುಯದಲ್ಲಿ ಅವಳೆಂದೂ ಹಿಂದು-ಮುಂದು ನೋಡಲಿಲ್ಲ. ಉತ್ತಮ ಹವಾಗುಣದ ಸ್ಥಳಗಳಿಗೆ ನಮ್ಮಿಬ್ಬರನ್ನು ಕಳಿಸಿಕೊಡುತ್ತಾಳೆ. ಉತ್ತಮ ವೈದ್ಯರಿಂದ ಇವರಿಗೆ ಚಿಕಿತ್ಸೆ ಮಾಡಿಸುತ್ತಾಳೆ. ಚಿಕಿತ್ಸೆಯಲ್ಲೂ ಇವರಿಗೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ತಾಳೆ"

"ಹಾಗಾದ್ರೆ, ಅವರ ಹೆಸರಿಗೆ ಯಾಕೆ ಮಸಿ ಹಚ್ತಿದ್ದೀರಿ?"

"ಹೌದು, ನಾನು ಮಸಿ ಹಚ್ಚೇ ಹಚ್ತೀನಿ ಅವಳು ಅಷ್ಟೆಲ್ಲಾ ಮಾಡಿದರೂ ಇವರ್ಯಾಕೆ ಗುಣವಾಗಲ್ಲ? ಇಷ್ಟೆಲ್ಲಾ ಔಷಧಿ ಕುಡಿದರೂ ಇವರ ಕಾಯಿಲೆ ಮಾತ್ರ ಯಾಕೆ ವಾಸಿಯಾಗ್ತಿಲ್ಲ. ?"

"ಕಾಹಿಲೆ ವಾಸಿಯಾಗೋದು-ಬಿಡೋದು ಮನುಷ್ಯನ ವಶದಲ್ಲಿಲ್ಲವಲ್ಲ!"

"ಅವಳೂ ಈ ಮಾತನ್ನೇ ಎಲ್ಲರಿಗೂ ಹೇಳ್ತಾ ತಿರುಗಾಡ್ತಾಳೆ. ಆದರೆ, ನಿಜವಾದ ವಿಚಾರ ನಿಮಗ್ಗೊತ್ತಾ?" ಕುಂತಿದೇವಿ ರೇಗಿದಳು.

"ಅವರು ಅಟಲ್ ದಾರವರ ಆರೋಗ್ಯ ಮತ್ತು ಅವರ ಜೀವನವನ್ನಷ್ಟೇ ಬಯುಸುತ್ತಿದ್ದಾರೆ ಎಂಬುದಷ್ಟೇ ನನಗೆ ಗೊತ್ತಿದೆ".

"ಇಲ್ಲ-ಇಲ್ಲ. ನಿಜವಾದ ವಿಷಯ ಇದಲ್ಲ"

"ಹಾಗಾದ್ರೆ, ಗಂಡ ಸಾಯಬೇಕೆಂಬುದು ಅವರ ಆಸೆಯೇ?"

"ಇಲ್ಲ, ಇದೂ ಅಲ್ಲ"

"ಮತ್ತೆ ?"

"ಅವಳ ನಿಜವಾದ ಉದ್ದೇಶ-ಮನುಷ್ಯ ಬದುಕದ ಮತ್ತು ಸಾಯದ ಮಧ್ಯದ ಪರಿಸ್ಥಿತಿಯಲ್ಲಿ ಇವರನ್ನಿಡುವುದು! ಇವರು ಜೀವಮಾನವಿಡೀ ಅಂಗವಿಕಲರಾಗಿ-ಕೆಲಸಕ್ಕೆ ಬಾರದಂತವರಾಗಿರಬೇಕೆಂಬುದೇ ಅವಳಾಸೆ."

"ಏನ್ ಹೇಳ್ತಿದ್ದೀರಿ?"

"ನನ್ನ ಮಾತು ನಿಜ. ಚಿಕಿತ್ಸೆಯಿಂದಾಗಿ ಇವರು ಗುಣ ಮುಖರಾಗುತ್ತಿದ್ದಂತೆಯೇ ಅವಳು ಇವರ ಚಿಕಿತ್ಸೆಯನ್ನು ನಿಲ್ಲಿಸಿ ಬಿಡುತ್ತಾಳೆ. ಹಣ ಕೊಡುವುದನ್ನು ಆಗ ನಿಲ್ಲಿಸುತ್ತಾಳೆ. ಒಂದು ಸಲ, ಒಂದು ಊರಿನಲ್ಲಿ ಇವರ ಆರೋಗ್ಯ ಸಾಕಷ್ಟು ಸುಧಾರಿಸಿತು. ಆದರೆ ಈ ವಿಷಯ ತಿಳಿದಕೂಡಲೇ ಅಲ್ಲಿಂದ ನಮ್ಮಿಬ್ಬರನ್ನು ವಾಪಸ್ ಕರೆಸಿ

ಬಿಟ್ಟಳು. ಆ ಊರಿನಲ್ಲೇ ಇನ್ನೂ ಕೆಲವು ದಿನಗಳಿದ್ದಿದ್ದರೆ, ಇವರು ಸಂಪೂರ್ಣವಾಗಿ ಆರೋಗ್ಯವಂತರಾಗಿ ಬಿಡುತ್ತಿದ್ದರು. ಆದರೆ, ಇವರು ಆರೋಗ್ಯದಿಂದಿರುವುದು ಅವಳಿಗಿಷ್ಟವಿಲ್ಲ. ಮತ್ತೊಂದು ಸಲ, ಒಂದು ದುಬಾರಿ ಔಷಧಿಯಿಂದಾಗಿ ಇವರ ಆರೋಗ್ಯದಲ್ಲಿ ತುಂಬಾ ಸುಧಾರಣೆಯಾಯಿತು. ಆದರೆ, ಈ ವಿಷಯ ತಿಳಿಯುತ್ತಲೇ ಅವಳು ಆ ಔಷಧಿ ತೆಗೆದುಕೊಳ್ಳಲು ಮತ್ತೆ ಹಣವನ್ನೇ ಕಳುಹಿಸಲಿಲ್ಲ." ಕುಂತಿದೇವಿ ಸ್ವಲ್ಪ ತಡೆದು ಮತ್ತೆ ಹೇಳಿದಳು,–"ಪೆಂಡ್ರಾ–ಸ್ಯಾನಿಟೋರಿಯಮ್‌ನಲ್ಲಿದ್ದಾಗ, ಇವರಿಗೆ ಚೆನ್ನಾಗಿ ಹಸಿವೆಯೂ ಆಗುತ್ತಿತ್ತು. ಇವರ ತೂಕವೂ ಸುಧಾರಿಸಿತ್ತು. ಆದರೆ, ಈ ವಿಷಯ ತಿಳಿದುಕೊಂಡ ಅವಳು ನಮಗೆ, 'ನೀವಿಬ್ಬರೂ ಈ ಕೂಡ್ಲೆ ಕಲ್ಕತ್ತೆಗೆ ಹೊರಟು ಬನ್ನಿ. ಮತ್ತೆ ಹಣ ಕಳುಹಿಸುವುದು ನನ್ನಿಂದ ಸಾಧ್ಯವಿಲ್ಲ' ಅಂತ ಪತ್ರ ಹಾಕಿದಳು."

ಕುಂತಿದೇವಿಯ ಮಾತುಗಳನ್ನು ಕೇಳಿ ನನಗೆ ಗರ ಬಡಿದಂತಾಯಿತು. ಮಾತನಾಡಲು ಬಾಯೇ ಬರಲಿಲ್ಲ.

"ಅವರು ಹೀಗೆ ಮಾಡೋದರ ಉದ್ದೇಶವೇನು?" ಸಾಕಷ್ಟು ಸುಧಾರಿಸಿಕೊಂಡು ಕುಂತಿದೇವಿಯನ್ನು ಪ್ರಶ್ನಿಸಿದೆ.

"ತಮಾಶೆ ನೋಡುವುದಷ್ಟೇ ಅವಳ ಉದ್ದೇಶ. ಔಷಧಿ ಸಿಂದ ಇಲಿ ವಿಲಿ–ವಿಲಿ ಒದ್ದಾಡುತ್ತೆ; ಜನ ಈ ತಮಾಷೆ ನೋಡ್ತಾರೆ. ಇದೂ ಸ್ವಲ್ಪ ಹಾಗೆಯೇ. ಇವರನ್ನು ಅವಳು ಸಾಯೋದಕ್ಕೂ ಬಿಡಲ್ಲ, ಬದುಕುವುದಕ್ಕೂ ಬಿಡಲ್ಲ. ಇದೊಂದು ವಿಧದ 'ನಿಷ್ಠುರ ಆನಂದ'. ಆ ಹೆಂಗಸನ್ನ ಕೊಂದಾಗ ಮಾತ್ರವೇ ನನ್ನ ಹೊಟ್ಟೆ ಉರಿ ಶಾಂತವಾಗುತ್ತೆ."

ಆಮೇಲೆ, ನಾನು ಹೇಳುವಂಥಾದ್ದು ಏನೂ ಇರಲಿಲ್ಲ. ಅಲ್ಲಿಂದ ಮರಳಿ ಬರುವಾಗ, "ಈಗ, ಅಟಲ್ ದಾ ಹೇಗಿದ್ದಾರೆ?" ಎಂದಷ್ಟೇ ಕೇಳಿದೆ.

"ಇಷ್ಟೆಲ್ಲಾ ಕೇಳಿದ ಮೇಲೆಯೂ ನೀವಿದನ್ನು ಕೇಳ್ತೀದ್ದೀರ?"

ಆ ವೇಳೆಗೆ ಅಟಲ್ ದಾ ನಿದ್ರಿಸುತ್ತಿದ್ದರು. ಅಂದು, ದೂರದಿಂದಲೇ ಅವರನ್ನು ನೋಡಿ ಹೊರಟು ಬಂದಿದ್ದೆ. ಅಟಲ್ ದಾರವರೊಂದಿಗೆ ಮಾತನಾಡುವ ಅವಕಾಶ ಸಿಕ್ಕಿರಲಿಲ್ಲ.

ನನ್ನ ಬದುಕಿನಲ್ಲಿ ಇದೊಂದು ವಿಚಿತ್ರ ಅನುಭವವಾಗಿತ್ತು. ನಾನು ಇಂಥಾ ಘಟನೆಯನ್ನು ಯಾವ ಕಥೆ ಅಥವಾ ಕಾದಂಬರಿಯಲ್ಲೂ ಓದಿರಲಿಲ್ಲ. ಜೀವನದಲ್ಲಿ ಇಂಥಾ ಘಟನೆ ಘಟಿಸುತ್ತದೆಂಬ ಯೋಚನೆಯನ್ನೂ ನಾನು ಮಾಡಲು ಸಾಧ್ಯವಿರಲಿಲ್ಲ. ಅದೆಷ್ಟು ದಿನ ಆ ಘಟನೆಯನ್ನು ನೆನಪಿಸಿಕೊಂಡು ಮನಸ್ಸು ಮುದುರಿತ್ತು. ಯಾರು, ಯಾರ ಸಂಸಾರವನ್ನು ಹಾಳು ಮಾಡುತ್ತಿದ್ದಾರೆ? ಇಂದು ಲೇಖಾ ದೇವಿಗೆ ಇದರಿಂದ ಶಾಂತಿ ಸಿಗುತ್ತಿದೆಯೆ? ನಾನೂ, ಅನೇಕ ದಪ್ಪ–ದಪ್ಪ ಪುಸ್ತಕಗಳನ್ನು ಬರೆದಿದ್ದೇನೆ. ಶೇಕ್ಸ್‌ಪಿಯರ್‌ನಿಂದ ಹಿಡಿದು ಟಾಲ್‌ಸ್ಟಾಯ್ ಬಾಲಜಾಕ್, ಮೋಪಾಸಾಂ, ಗೋರ್ಕಿಯವರ ಪುಸ್ತಕಗಳನ್ನೆಲ್ಲಾ ಓದಿದ್ದೇನೆ ಬಾಲಜಾಕ್‌ನ ಬಗ್ಗೆ 'ದಿ ಗ್ರೇಟೆಸ್ಟ್ ಕ್ರಿಯೇಟರ್ ಆಫ್ ಹ್ಯೂಮನ್ ಕ್ಯಾರೆಕ್ಟರ್ಸ್ ನೆಕ್ಸ್ಟ್ ಟು ಗಾಡ್' ಎಂದೂ ಕೇಳಿದ್ದೇವೆ. ಆದರೆ, ಎಲ್ಲೂ ಇಂಥಾ ಸ್ವಭಾವದ ಚಿತ್ರಣ ಸಿಗಲಿಲ್ಲ. ಹಾಗಾದರೆ, ಕುಂತಿದೇವಿ ಹೇಳಿದ್ದು ಸುಳ್ಳೇ? ಸವತಿಯ ಬಗ್ಗೆ ತನ್ನ ಸಿಟ್ಟನ್ನು

ತೋರಿಸುತ್ತಿದ್ದಾಳೆಯೋ? ಎಷ್ಟು ಯೋಚಿಸಿದರೂ ನಾನು ಯಾವುದೇ ತೀರ್ಮಾನಕ್ಕೆ ಬರಲಾರೆ.

ಅಂದು, ಅಕಸ್ಮಾತ್ ಅಧೀರ್ ಬೋಸ್ ನಮ್ಮ ಮನೆಗೆ ಬಂದ. ಅಧೀರ್ ಬೋಸನಿಗೆ ಬಿಡುವು ಸಿಗುವುದು ಕಷ್ಟವೆಂಬ ವಿಷಯ ನನಗೆ ತಿಳಿದಿತ್ತು. ನನ್ನ ಹೊಸ ಮನೆಯ ವಿಳಾಸವನ್ನು ಹೇಗೋ ತಿಳಿದುಕೊಂಡು ಬಂದಿದ್ದ. ಅಂದು ಭಾನುವಾರವಾಗಿತ್ತು.

ಅಧೀರ, ಅಟಲ್‌ದಾರವರ ಬಗ್ಗೆ ಕೆಲವು ವಿಚಾರಗಳನ್ನು ಹೇಳಲೋಸುಗವೇ ಬಂದಿದ್ದ, ಅವನ ಮಾತು ಕೇಳಿದಂಗಾದೆ. ಈ ಜಗತ್ತಿನಲ್ಲಿ ಅದೆಷ್ಟು ವಿಚಿತ್ರ ಘಟನೆಗಳು ಘಟಿಸುತ್ತವೆ! ಮನುಷ್ಯನ ಮನಸ್ಸನ್ನು ಬ್ರಹ್ಮನೂ ಅರಿಯಲಾರ. ಹೀಗಿರುವಾಗ, ಕಾದಂಬರಿಕಾರನ ಮಾತೇನು?

ಬಹಳ ಹಿಂದಿನ ಘಟನೆ. ಆಗ ಅಟಲ್‌ದಾ ನಮ್ಮ ಮೊಹಲ್ಲಾದ ಆದರ್ಶ ವ್ಯಕ್ತಿಯಾಗಿದ್ದರು. ಪ್ರತಿ ಮೊಹಲ್ಲಾದಲ್ಲೂ ವಿದ್ಯಾರ್ಥಿಗಳು ಚಾರಿತ್ರ್ಯ-ವೃದ್ಧಿಸಿಕೊಳ್ಳಲೋಸುಗ ಸಭೆಗಳನ್ನು ನಡೆಸುತ್ತಿದ್ದರು. ಮಕ್ಕಳ ಮನಸ್ಸಿನಲ್ಲಿ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಮೂಡಿಸುವ ಯತ್ನ ನಡೆಯುತ್ತಿತ್ತು. ಬ್ರಹ್ಮಚರ್ಯೆಯ ಬಗ್ಗೆ ವಿವೇಕಾನಂದರು ಬರೆದ ಪುಸ್ತಕಗಳನ್ನು ಹಂಚಲಾಗುತ್ತಿತ್ತು. ಬಂಕಿಮಚಂದ್ರರ 'ಆನಂದಮಠ'ವನ್ನು ಕ್ಲಬ್‌ನ ಹುಡುಗರು ಪರಸ್ಪರ ಪಡೆದು ಓದುತ್ತಿದ್ದರು.

ಆಗ, ಪ್ರತಿ ಮೊಹಲ್ಲಾದಲ್ಲೂ ಟೆಗಾರ್ಟ್ ಸಾಹೇಬರು ಗಸ್ತು ತಿರುಗುತ್ತಿದ್ದರು. ಅವರು ಕಲ್ಕತ್ತೆಯ ಪೋಲೀಸ್-ಕಮೀಶನರ್ ಆಗಿದ್ದರು. ನಗರದಲ್ಲಿ ಗೂಢಚಾರರ ಬಲೆಯನ್ನು ಬೀಸಲಾಗಿತ್ತು. ಬ್ರಿಟಿಷ್ ಸರ್ಕಾರದ ವಿರುದ್ಧವಾಗಿ ಯಾರು ಮಾತನಾಡುತ್ತಿದ್ದಾರೆ, ಯಾರು ಜನರನ್ನು ಹುರಿದುಂಬಿಸುತ್ತಿದ್ದಾರೆ, ವಿದ್ಯಾರ್ಥಿಗಳು ಎಲ್ಲಿ ಲಾಠಿ ಮತ್ತು ಕತ್ತಿಯ ಕಾಳಗವನ್ನು ಕಲಿಯುತ್ತಿದ್ದಾರೆ ಎಂಬುದನ್ನು ಗಮನಿಸುವುದೇ ಟೆಗಾರ್ಟ್ ಸಾಹೇಬರ ಕೆಲಸವಾಗಿತ್ತು. ಇದ್ದಕ್ಕಿದ್ದಂತೆಯೇ ಪೋಲೀಸರು ಕೆಲವು ಮೊಹಲ್ಲಾಗಳಿಗೆ ನುಗ್ಗಿ ಬಂದು, ಕೆಲವು ಮನೆಗಳ ಮೇಲೆ ಧಾಳಿ ಮಾಡಿಬಿಡುತ್ತಿದ್ದರು.

ಇಂದಿನ ಯುವಕರು, ನಮಗೆ ಸ್ವಾತಂತ್ರ್ಯ ಕಾರಣವಿಲ್ಲದೆ ಸಿಕ್ಕಿಲ್ಲವೆಂಬ ವಿಷಯವನ್ನು ತಿಳಿಯುವುದು ಅಗತ್ಯ. ಲಕ್ಷಾಂತರ ಜನರ ಪ್ರಯತ್ನ ಹಾಗೂ ತ್ಯಾಗ-ಬಲಿದಾನಗಳಿಂದಾಗಿ ನಮಗೆ ಈ ಸ್ವಾತಂತ್ರ್ಯ ಸಿಕ್ಕಿದೆ. ಆ ದಿನಗಳಲ್ಲಿ ಇಂಗ್ಲೀಷ್-ಅಧಿಕಾರಿಗಳ ಸುತ್ತ-ಮುತ್ತ ಭಾರತೀಯರು ಸುಳಿದಾಡುವಂತೆಯೂ ಇರಲಿಲ್ಲ. 'ಚೌರಂಗಿ'ಯಲ್ಲಿ ಯಾರೂ ಬಹಿರಂಗವಾಗಿ ತಿರುಗಾಡುವಂತಿರಲಿಲ್ಲ. ಜನಸಾಮಾನ್ಯರಿಗೆ ಅದೊಂದು ದುರ್ದಾಂತ ದಮನ ಯುಗವಾಗಿತ್ತು.

ರೈಲಿನಲ್ಲಿ, ಆಂಗ್ಲ ಪ್ರಯಾಣಿಕರಿದ್ದಲ್ಲಿ ಭಾರತೀಯರಿಗೆ ಸ್ಥಳ ಸಿಗುತ್ತಿರಲಿಲ್ಲ. ೧೯೩೫-೩೬ ರ ಘಟನೆ ಕಾಂಗ್ರೆಸಿಗರು ಪ್ರಾರ್ಥನೆ, ನಿವೇದನಗಳ ಮೂಲಕ ಅಧಿಕಾರ ಪಡೆಯಲು ಪ್ರಯತ್ನಿಸುತ್ತಿದ್ದರು ವರ್ಷಕ್ಕೊಮ್ಮೆ ಒಂದು ನಗರದಲ್ಲಿ ಸಭೆ ನಡೆದು 'ಅಲ್ಲಿ ಕೆಲವು ಪ್ರಸ್ತಾಪನೆಗಳನ್ನು ಪಾಸು' ಮಾಡಲಾಗುತ್ತಿತ್ತು. ಭಾಷಣಗಳು ನಡೆಯುತ್ತಿತ್ತು. ಆದರೆ, ವಾಸ್ತವಿಕ

ಕೆಲಸಗಳನ್ನು ಮೊಹಲ್ಲಾದ ಗುಪ್ತ-ಸಮಿತಿಗಳು ನಿರ್ವಹಿಸುತ್ತಿದ್ದವು. ಕೆಲವು ಭಾರತೀಯರು ಆಂಗ್ಲರ ಅಧೀನ, ಉತ್ತಮ ಹುದ್ದೆಯಲ್ಲಿದ್ದು ಪೋಲೀಸರ 'ಕಪ್ಪು ದಾಖಲಾತಿ-ಪುಸ್ತಕ'ಗಳಿಂದ ತಮ್ಮ ಹೆಸರನ್ನು ದೂರ ಇಟ್ಟುಕೊಂಡಿದ್ದರು. ಆದರೆ ಸ್ವಾತಂತ್ರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದ ಬಹಳಷ್ಟು ವ್ಯಕ್ತಿಗಳ ಬಗ್ಗೆ ಇದುವರೆಗೂ ನಮಗೇನೂ ತಿಳಿದಿಲ್ಲ. ಅಂಥಾ ವ್ಯಕ್ತಿಗಳಲ್ಲಿ, ಕೆಲವರು ಇನ್ನೂ ಬದುಕಿರಬಹುದು.

ಆ ದಿನಗಳಲ್ಲೇ ಅಟಲ್‌ದಾರವರು ನಮ್ಮನ್ನು ಮನುಷ್ಯರನ್ನಾಗಿ ಮಾಡುವ ಪ್ರಯತ್ನದಲ್ಲಿ ಮಗ್ನರಾಗಿದ್ದರು.

ಆಶುಬಾಬುರವರಿಗೆ ತಮ್ಮ ಮಗನ ಈ ಕಾರ್ಯ ಹಿಡಿಸುತ್ತಿರಲಿಲ್ಲ. ತಮ್ಮ ಮಗ ತಮ್ಮಂತೆಯೇ ಒಂದು ದೊಡ್ಡ ಕಚೇರಿಯಲ್ಲಿ ನೌಕರಿಮಾಡಬೇಕು, ತಮಗಿಂತಲೂ ತಮ್ಮ ಮಗ ಉನ್ನತ ಹುದ್ದೆಯನ್ನು ಅಲಂಕರಿಸಬೇಕೆಂಬುದು ಅವರ ಆಸೆಯಾಗಿತ್ತು. ಹೀಗಾಗಿ ಅವರು ಆಗಾಗ್ಯೆ ಮಗನಿಗೆ, 'ಕಾಲ ತುಂಬಾ ಕೆಟ್ಟಿದೆ. ಸ್ವಲ್ಪ ಎಚ್ಚರಿಕೆಯಿಂದ ಮುಂದುವರಿ' ಎನ್ನುತ್ತಿದ್ದರು.

ಅಟಲ್‌ದಾ ತುಂಬಾ ಬುದ್ಧಿವಂತರಾಗಿದ್ದರು. ತಮ್ಮ ತಂದೆ ಎದುರು ಅವರು ಯಾವ ವಾದವನ್ನು ಮಾಡುತ್ತಿರಲಿಲ್ಲ.

"ಟೆಗಾರ್ಟ್ ಸಾಹೇಬರು ವೇಶ ಮರೆಸಿಕೊಂಡು ಮೊಹಲ್ಲಾದಲ್ಲಿ ಅಡ್ಡಾಡುತ್ತಿರುತ್ತಾರಂತೆ...." ಒಂದು ದಿನ ಆಶುಬಾಬುಗಳು ಮಗನಿಗೆ ಎಚ್ಚರಿಸಿದ್ದರು.

"ಹೌದು, ನಾನೂ ಕೇಳಿದ್ದೇನೆ"

"ಹಾಗಾದ್ರೆ, ಇನ್ನು ಮೇಲೆ ಹೊರಗೆ ಹೆಚ್ಚು ತಿರುಗಾಡಬೇಡ. ಎಲ್ಲೆಲ್ಲೂ ಗೂಢಚಾರರಿದ್ದಾರೆ."

ಆಶುಬಾಬುಗಳು ಮಾತ್ರವಲ್ಲ, ಬೇರೆಯವರೂ ಅಟಲ್‌ದಾರವರಿಗೆ ಎಚ್ಚರಿಕೆಯ ಮಾತುಗಳನ್ನು ಹೇಳುತ್ತಿದ್ದರು. "ನಿಮ್ಮ ತಂದೆಯವರಿಗಾದರೂ ಸ್ವಲ್ಪ ಯೋಚಿಸು, ಅಟಲ್, ಅವರ ವೃದ್ಧಾಪ್ಯದಲ್ಲಿ ನೀನೇ ಅವರಿಗೆ ಆಧಾರ" ಎಂದೂ ಹೇಳುತ್ತಿದ್ದರು.

ಆದರೆ ನಾವು ಹಿರಿಯರ ಮಾತುಗಳಿಗೆ ಗಮನ ಕೊಡುತ್ತಿರಲಿಲ್ಲ. ಬ್ರಿಟಿಷ್ ಸರ್ಕಾರವನ್ನು ಬುಡಸಮೇತ ಕಿತ್ತು ಹಾಕದೆ ದೇಶಕ್ಕೆ ಹಿತವಿಲ್ಲವೆಂಬುದು ಎಲ್ಲರ ಅಭಿಮತವಾಗಿತ್ತು. ಸಿ. ಆರ್. ದಾಸರ ಭಾಷಣ-ಸಭೆಗಳನ್ನು ಪೋಲೀಸರು ಲಾಠಿ-ಬಲದ ಮೇಲೆ ಭಗ್ನಗೊಳಿಸುತ್ತಿದ್ದರು. ಏಟುಗಳೂ ಬೀಳುತ್ತಿದ್ದವು. ಪೋಲೀಸರು ಕಠೋರವಾಗಿ ವರ್ತಿಸಿದಷ್ಟೂ ನಮ್ಮ ಹಟ ವೃದ್ಧಿಸುತ್ತಿತ್ತು. ನಾವೆಲ್ಲಾ ಬ್ರಿಟಿಷರ ಕಟ್ಟಾ ಶತ್ರುಗಳಾಗಿ ಬಿಟ್ಟಿದ್ದೆವು. ವಿದೇಶೀ ವಸ್ತುಗಳ ಬಹಿಷ್ಕಾರವೂ ಸಾಗಿತ್ತು.

ವಿವೇಕಾನಂದರ ಉಪದೇಶಗಳನ್ನು ಎಲ್ಲಿರಿಗೂ ತಲುಪಿಸುವ ಉದ್ದೇಶದಿಂದ ಅಟಲ್‌ದಾರವರು ಅನೇಕ ಕಡೆ ಕ್ಲಬ್‌ಗಳನ್ನು ತೆರೆದರು. ಹೀಗಾಗಿ, ಅವರು ಮೊಹಲ್ಲಾದ ಹೊರಗೂ ಹೋಗಬೇಕಾಗುತ್ತಿತ್ತು.

ಇಂಥಾ ಒಂದು ಕ್ಲಬ್‌ನಲ್ಲಿಯೇ ಅವರ ಬದುಕಿನಲ್ಲಿ ಬಿರುಗಾಳಿಯೊಂದು ಬೀಸಿತ್ತು.

ಸ್ವಾಮಿ ವಿವೇಕಾನಂದರ ಮಾತುಗಳು ಅಟಲ್‌ದಾರವರ ಮೇಲೆ ತುಂಬಾ ಪ್ರಭಾವ ಬೀರಿದ್ದವು. ಉಳಿದವರು ಅಂಧಕಾರದಲ್ಲಿದ್ದು

ತನಗೆ ಮಾತ್ರ ಮುಕ್ತಿ ದೊರೆತರೆ ಲಾಭವಿಲ್ಲವೆಂಬುದು ಅಟಲ್‌ದಾರವರ ಅನಿಸಿಕೆಯಾಗಿತ್ತು. ಅವರೂ ತಮ್ಮ ಭಾಷಣದಿಂದ ಕ್ಲಬ್‌ನ ಹುಡುಗರನ್ನು ಹುರಿದುಂಬಿಸುತ್ತಿದ್ದರು. ಒಂದು ದಿನ ಕುಂತಿ ಬಂದು ಅಟಲ್‌ದಾರವರಿಗೆ ಹೇಳಿದಳು—

"ಅಟಲ್‌ಜಿ, ನಿಮ್ಮನ್ನು ನಮ್ಮ ತಂದೆ ಕರೆಯುತ್ತಿದ್ದಾರೆ."

"ಯಾಕೆ?"

"ಅವರು ನಿಮ್ಮನ್ನು ನೋಡಬೇಕಂತೆ"

"ಓಹ್! ನಾನೇನು ವಿಶೇಷ ವ್ಯಕ್ತಿಯೇ?"

"ನಿಮ್ಮ ಬಗ್ಗೆ ನಾನು ನಮ್ಮ ತಂದೆಗೆ ಹೇಳಿದ್ದೆ"

ಕುಂತಿ ತನ್ನ ತಂದೆಗೆ ಅಟಲ್‌ದಾರವರ ಬಗ್ಗೆ ಅದೇನು ಹೇಳಿದ್ದಳೋ, ಏನೋ! ಆದರೆ, ಅದೊಂದು ದಿನ ಕುಂತಿ ಹಟ ಹಿಡಿದು ಅಟಲ್‌ದಾರವರನ್ನು ತಮ್ಮ ಮನೆಗೆ ಕರೆದೊಯ್ದಳು. ಭವಾನೀಪುರದಲ್ಲಿ ಇಂಥಾ ಮೊಹಲ್ಲಾ ವಿದೆಯೆಂಬುದು ಅಟಲ್‌ದಾರವರಿಗೆ ಯೋಚಿಸುವುದೂ ಸಾಧ್ಯವಿರಲಿಲ್ಲ.

ಅಟಲ್‌ದಾರವರನ್ನು ನೋಡಿ ಕುಂತಿಯ ತಂದೆ ತಮ್ಮ ಹಾಸಿಗೆಯಿಂದ ಎದ್ದು ಕೂತರು.

"ಅಪ್ಪಂಗೆ ತುಂಬಾ ಜ್ವರ" ಕುಂತಿ ಅಟಲ್‌ದಾರವರನ್ನು ನೋಡಿದಳು.

"ನೀವೇಕೆ ಎದ್ದು ಕೂತಿರಿ? ನೀವು ಮಲಗಿಯೇ ಮಾತಾಡಿ" ಅಟಲ್‌ದಾ ಅವರ ಸಮೀಪಕ್ಕೆ ಬಂದರು.

"ಜ್ವರ ಬಂದದ್ದು ಇವತ್ತಲ್ಲ. ಕಳೆದ ಹತ್ತು ವರ್ಷಗಳಿಂದಲೂ ಇವರಿಗೆ ಕಾಹಿಲೆಯೇ" ಕುಂತಿ ಮೆಲ್ಲನೆ ನಕ್ಕಳು.

"ಯಾಕೆ? ಡಾಕ್ಟ್ರು ಏನ್ ಹೇಳ್ತಾರೆ?"

ಈಗ, ಕುಂತಿಯ ತಂದೆ ಮಂಗಳ್ ಸರ್ಕಾರ್ ಸಹಜವಾಗಿಯೇ ಹೇಳಿದರು, "ನನ್ನ ಈ ಕಾಹಿಲೆ ವೈದ್ಯರ ಸಾಮರ್ಥ್ಯಕ್ಕೆ ಮೀರಿದ್ದು. ನನ್ನದು ಮನಸ್ಸಿನ ರೋಗ" ಸ್ವಲ್ಪ ತಡೆದು ಅವರು ತಮ್ಮ ಮಾತನ್ನು ಮುಂದುವರೆಸಿದರು. "ಕುಂತಿಯಿಂದ ನಿನ್ನ ಬಗ್ಗೆ ಕೇಳ್ತಿರ್ತೀನಿ. ಹೀಗಾಗಿ ನಿನ್ನ ಬಗ್ಗೆ ಯೋಚ್ನೆ ಮಾಡ್ತಿರ್ತೀನಿ. ನಾನೀಗ ಕೆಲಸ ಮಾಡುವ ಶಕ್ತಿಯನ್ನೇ ಕಳೆದುಕೊಂಡು ಬಿಟ್ಟಿದ್ದೇನೆ. ಮಲಗಿ, ಕನಸನ್ನಷ್ಟೇ ಕಾಣ್ತಿದ್ದೀನಿ. ಆದ್ರೆ, ಅಟಲ್, ಒಂದು ಕಾಲದಲ್ಲಿ ನಾನೂ ನಿನ್ನಂತೆಯೇ ಶ್ರದ್ಧೆಯಿಂದ ಕೆಲಸಮಾಡ್ತಿದ್ದೆ. ಅದಕ್ಕೆ, ಕುಂತಿಗೆ, ನಿನ್ನನ್ನು ಒಂದು ದಿನ ಇಲ್ಲಿಗೆ ಕರೆದು ತರುವಂತೆ ತಿಳಿಸಿದ್ದೆ. ನಿನ್ನ ಕಂಡು ಮನಸ್ಸಿಗೆ ನಂಬಿಕೆಯಾಗುತ್ತಿದೆ. ನೀನು ಖಂಡಿತವಾಗಿಯೂ ಏನನ್ನಾದರೂ ಸಾಧಿಸಬಲ್ಲೆ."

ಅಟಲ್‌ದಾರವರಿಗೆ ಇಂಥಾ ವಯೋವೃದ್ಧರಿಂದ ಎಂದೂ ಪ್ರೇರಣೆ ಸಿಕ್ಕಿರಲಿಲ್ಲ. ಅವರಿಗೆ, ಮಂಗಳ್ ಸರ್ಕಾರ್ ಬಗ್ಗೆ ಶ್ರದ್ಧೆ ಮೂಡಿತು.

"ನನ್ನ ಕೈಯಿಂದ ಸಾಧ್ಯವಾಗುತ್ತಿದ್ದರೆ, ನಾನು ನಿನ್ನ ಕೆಲಸಗಳಿಗೆ ಸಹಾಯವನ್ನೂ ಮಾಡುತ್ತಿದ್ದೆ. ನಿನ್ನ ವಯಸ್ಸಿನಲ್ಲಿ ನನಗೆ ಯಾರೂ ಪ್ರೇರಣೆ ನೀಡಿರಲಿಲ್ಲ ಹೀಗಾಗಿ, ನಾನು ತುಂಬಾ ನಷ್ಟವನ್ನು ಅನುಭವಿಸಬೇಕಾಯಿತು. ನಾನೀಗ ಸೋತುಹೋಗಿದ್ದೇನೆ. ನನ್ನಿಂದ ಏನೂ ಸಾಧ್ಯವಾಗಲಿಲ್ಲ? ನಿನಗೆ ನನ್ನ ಆಶೀರ್ವಾದವಿದೆ—ನೀನು ಖಂಡಿತಾ ಗೆಲ್ಲುವೆ. ಏನನ್ನಾದರೂ ಸಾಧಿಸುವೆ!" ಮಂಗಳ್ ಸರ್ಕಾರ್,

ಅಟಲ್ ದಾರವರನ್ನು ಮತ್ತೆ ಹುರಿದುಂಬಿಸಿದ್ದರು.

ಕ್ರಮೇಣ, ಕುಂತಿಯ ಮನೆಗೆ ಅಟಲ್ ದಾ ಬಂದು–ಹೋಗುವುದು ಪ್ರಾರಂಭವಾಯಿತು. ಅಟಲ್‌ದಾ, ತಮಗೇ ಅರಿವಿಲ್ಲದಂತೆ ಅದ್ಯಾವುದೋ ಆಕರ್ಷಣೆಗೆ ಬಲಿಯಾಗುತ್ತಾ ಹೋದರು.

ಅಟಲ್‌ದಾರವರು ಮಂಗಳ್ ಸರ್ಕಾರರಿಗೆ ತಮ್ಮ ಆಸೆ-ಆಕಾಂಕ್ಷೆಗಳನ್ನು ಹೇಳುತ್ತಿದ್ದರು. ಮಾತನಾಡಲು ಓರ್ವ ಯೋಗ್ಯ ವ್ಯಕ್ತಿ ಸಿಕ್ಕಿದ್ದಕ್ಕೆ ಮಂಗಳ್ ಸರ್ಕಾರ್ ಕೂಡಾ ಖುಷಿಯಾಗಿದ್ದರು. ಅವರ ಜೀವನವೂ ತುಂಬಾ ವಿಚಿತ್ರವಾಗಿತ್ತು.

ಅದೊಂದು ದಿನ ಅಟಲ್‌ದಾರವರಿಗೆ ಮಂಗಳ್ ಸರ್ಕಾರ್ ಹೇಳಿದರು, "ವಾರಿಸಾಲ್‌ನಲ್ಲಿ ಬ್ರಿಟಿಷ್ ಅಧಿಕಾರಿಯ ರೈಲಿನ ಮೇಲೆ ಬಾಂಬ್ ಬಿದ್ದ ವಿಷಯ ನಿನಗೆ ಗೊತ್ತಿರಬೇಕು. ಆ ಕಾಂಡದಿಂದಾಗಿ ಅನೇಕ ಜನರನ್ನು ಬಂಧಿಸಲಾಯಿತು. ಆದರೆ, ನಿಜವಾದ ವ್ಯಕ್ತಿಯನ್ನು ಪೋಲಿಸರು ಬಂಧಿಸಲಾಗಲಿಲ್ಲ. ಅವನನ್ನು ಇದುವರೆಗೂ ಪತ್ತೆ ಮಾಡಲು ಪೋಲೀಸರಿಂದ ಸಾಧ್ಯವಾಗಿಲ್ಲ. ಅವನ ಹೆಸರಿಗೆ ಇವತ್ತಿಗೂ ವಾರೆಂಟ್ ಇದೆ."

"ಅವನು ಯಾರಾಗಿದ್ದ?" ಅಟಲ್ ದಾ ಅವರಿಗೆ ಕುತೂಹಲವುಂಟಾಯಿತು.

"ಇನ್ನೊಂದು ವಿಷಯ. ನನ್ನ ನಿಜವಾದ ಹೆಸರು ಮಂಗಳ್ ಸರ್ಕಾರ್ ಅಲ್ಲ. ನನ್ನ ನಿಜವಾದ ಹೆಸರು ಕುಂತಿಗೂ ಗೊತ್ತಿಲ್ಲ."

ಅಟಲ್ ದಾ ದಂಗಾದರು.

"ಮತ್ತೆ ನಿಮ್ಮ ನಿಜನಾಮಧೇಯವೇನು?"

"ನನ್ನ ಹೆಸರು ಬ್ರೋಜೇನ್"

"ನೀವೇನಾ ಬ್ರೋಜೇನ್!" ಅಟಲ್ ದಾ ತುಂಬಾ ಬೆರಗಾದರು.

"ಹೌದು."

"ನಿಮಗಾಗಿಯೇ ಪೋಲೀಸಿನವರು ೧೦ ಸಾವಿರ ರೂಗಳನ್ನು ಘೋಷಿಸಿದ್ದು?"

"ಹೌದು. ಇವತ್ತಿಗೂ ಯಾರಿಗೂ ಬ್ರೋಜೇನನನ್ನು ಹಿಡಿದು ಕೊಡಲು ಸಾಧ್ಯವಾಗಿಲ್ಲ. ಬ್ರೋಜೇನ್ ಬದುಕಿದ್ದಾನೋ ಇಲ್ಲವೋ, ಬದುಕಿದ್ದರೂ ಅವನು ಯಾವ ಪರಿಸ್ಥಿತಿಯಲ್ಲಿ, ಎಲ್ಲಿದ್ದಾನೆಂಬುದು ಯಾರಿಗೂ ಗೊತ್ತಿಲ್ಲ. ಬ್ರೋಜೇನ್ ಭಾರತ ಬಿಟ್ಟು ಹೋಗಿದ್ದಾನೆಂದೇ ಎಲ್ಲರೂ ಭಾವಿಸಿದ್ದಾರೆ. ಆದರೆ, ಇವತ್ತು, ಈಗ, ನಿನಗೆ ಮೊದಲ ಬಾರಿಗೆ ನಾನು ನನ್ನ ಈ ವಾಸ್ತವಿಕತೆಯನ್ನು ಹೇಳುತ್ತಿದ್ದೇನೆ....ನೀನು ಮಾತ್ರ, ಈ ಹಿಂದಿನಂತೆಯೇ ನನ್ನನ್ನು ಮಂಗಳ್ ಸರ್ಕಾರ್ ಎಂದು ತಿಳಿ. ನನ್ನನ್ನು ಓರ್ವ ವೃದ್ಧ ರೋಗಿ ಎಂದೇ ತಿಳಿ. ನನ್ನ ಆರೋಗ್ಯ ಹದಗೆಟ್ಟಿದ್ದರಿಂದಾಗಿಯೇ ನೌಕರಿ ತ್ಯಜಿಸಿ ಈಗ ದಿನಗಳನ್ನು ಹೇಗೋ ಕಳೆಯುತ್ತಿದ್ದೇನೆ. ನಾನು ಓಡಿ ಹೋಗಿದ್ದರೂ ಚೆನ್ನಾಗಿತ್ತು. ಏನಾದರೂ ಸಾಧಿಸಬಹುದಿತ್ತು. ಆರೋಗ್ಯವೂ ಇಷ್ಟು ಹದಗೆಡುತ್ತಿರಲಿಲ್ಲ."

"ನೀವು ಬೇರೆ ದೇಶಕ್ಕೆ ಯಾಕೆ ಹೋಗಲಿಲ್ಲ?"

"ನನ್ನ ಮೇಲೆ ಒಂದು ದೊಡ್ಡ ಹೊರೆ ಇತ್ತು."

"ಅದೇನದು?"

"ಅಲ್ಲಿ ನಿಂತಿದ್ದಾಳಲ್ಲ, ಆ ಕುಂತಿಯಿಂದಾಗಿಯೇ ನಾನಿಲ್ಲಿರಬೇಕಾಯಿತು."

"ನಿಮ್ಮ ಮಗಳಿಂದಾಗಿಯೇ?"

"ಜನ ಅವಳನ್ನು ನನ್ನ ಮಗಳೆಂದು ತಿಳಿದಿದ್ದಾರೆ. ಕುಂತಿಯೂ ನನ್ನನ್ನು ತನ್ನ ತಂದೆಯೆಂದು ತಿಳಿದುಕೊಂಡಿದ್ದಾಳೆ." ಮಂಗಳ್ ಸರ್ಕಾರ್ ಗಂಭೀರರಾದರು.

"ನೀವು ಅವಳ ತಂದೆ ಅಲ್ವಾ?"

"ಅಲ್ಲ."

ಇಪ್ಪತ್ತನೇ ಶತಮಾನದ ಆರಂಭದ ಬಂಗಾಳ....ಮೆಲ್ಲ-ಮೆಲ್ಲನೆ ಕ್ರಾಂತಿಯ ಅಲೆಗಳು ತಲೆಯೆತ್ತುತ್ತಿದ್ದವು. ಜಗತ್ತಿನಲ್ಲಿ, ಜನಸಾಮಾನ್ಯರ ಮೇಲೆ ಎಲ್ಲೆಲ್ಲಿ ದಬ್ಬಾಳಿಕೆಯಾಗಿದೆಯೋ, ಕ್ರಾಂತಿಯೂ ಅಲ್ಲಿಂದಲೇ ಹುಟ್ಟಿದೆ. ಮಧ್ಯಮ ವರ್ಗದ ಜನಗಳೇ ಕ್ರಾಂತಿಯ ಧ್ವಜವನ್ನು ಹಾರಿಸಿದ್ದಾರೆ. ಮಂಗಳ್ ಸರ್ಕಾರ್ ಕೂಡ ಈ ಮಧ್ಯಮ ವರ್ಗದ ಪ್ರತಿನಿಧಿಯಾಗಿದ್ದರು. ಅವರು, ಆಗ ಅನುಭವಿಸಿದ ತಮ್ಮ ವೇದನೆಯನ್ನು ಅಟಲ್ ದಾರವರಿಗೆ ಆಗಾಗ್ಗೆ ಮನವರಿಕೆ ಮಾಡಿಕೊಡುತ್ತಿದ್ದರು.

೧೯೦೨ ರಲ್ಲಿ ಬೋರ್‌ವಾರ್ ಕೊನೆಗೊಂಡಿತ್ತು. ರಷ್ಯಾ ಮತ್ತು ಜಪಾನ್ ಮಧ್ಯೆ ಮತ್ತೊಂದು ಯುದ್ಧಕ್ಕಾಗಿ ಸಿದ್ಧತೆಗಳು ನಡೆಯುತ್ತಿತ್ತು. ಇದೇ ಸಮಯಕ್ಕೆ ಭಾರತದಲ್ಲಿ ಗುಪ್ತ-ಸಭೆಗಳನ್ನು ನಡೆಸಲು ತೀರ್ಮಾನಿಸಲಾಯಿತು. ಇದರ ಹಿಂದೆ ಸಿಸ್ಟರ್ ನಿವೇದಿತಾಳ ವಿಶೇಷ ಪ್ರೇರಣೆ ಇತ್ತು.

ಅಟಲ್ ದಾ, ಪ್ರಥಮ ಬಾರಿಗೆ ಕ್ರಾಂತಿಕಾರಿಯೊಬ್ಬರ ಬಾಯಿಂದ ಅಂದಿನ ಇತಿಹಾಸವನ್ನು ಕೇಳಿದ್ದರು.

"ನಿಮಗೆ ಭಯವಾಗುತ್ತಿರಲಿಲ್ಲವೆ?"

"ಯಾತಕ್ಕೆ? ಯಾರಿಗೆ ಹೆದರೋದು? ಯಾಕೆ ಹೆದರೋದು? ಕ್ರಾಂತಿಕಾರಿಗಳು ಹೆದರಿಕೊಂಡರೆ ಅವರು ಸತ್ತಂತೆಯೇ. ನನ್ನ ಮಿತ್ರ ಸತ್ಯೇನ್ ಅಂತ ಒಬ್ಬ ಇದ್ದ. ನೀನು ಅವನ ಹೆಸರನ್ನು ಕೇಳಿರಬೇಕಲ್ಲ?"

"ಹೂಂ, ಕೇಳಿದ್ದೇನೆ."

"ನಾವಿಬ್ಬರೂ ಮದೀನೀಪುರದ ವ್ಯಾಯಾಮ ಬಜಾರಿನ ಅಖಾಡದಲ್ಲಿ ಕುಸ್ತಿ ಕಲಿಯುತ್ತಿದ್ದೆವು. ಇಬ್ಬರೂ ಒಟ್ಟಿಗೆ ಶಪಥ ಕೈಗೊಂಡಿದ್ದೆವು. ನಮ್ಮಿಬ್ಬರ ಮಾರ್ಗ ಮತ್ತು ಧ್ಯೇಯ ಒಂದೇ ಆಗಿತ್ತು. ಹೀಗಾಗಿ, ಸತ್ಯೇನನನ್ನು ಬಂಧಿಸಿದಾಗ, ಅವನು ಮಾಡಿದ ಕೆಲಸವನ್ನು ನಾನು ಮಾಡಬೇಕೆಂದು ಯೋಚಿಸಿ ಓಡಿ ಹೋದೆ. ಆದರೆ, ಅವನು ಗೆದ್ದ. ನಾನು ಸೋತೆ."

ಹೀಗೆ ನಿತ್ಯ ಅಟಲ್ ದಾ ಮಂಗಳ್ ಸರ್ಕಾರ್‌ರವರ ಮನೆಯಲ್ಲಿ ಕ್ರಾಂತಿಕಾರಿಗಳ ಬಗ್ಗೆ ವಿಷಯ ತಿಳಿದುಕೊಳ್ಳುತ್ತಿದ್ದರು. ಒಮ್ಮೊಮ್ಮೆ ಅರ್ಧ ರಾತ್ರಿಯೂ ಆಗುತ್ತಿತ್ತು. ಈಚೆಗೆ, ಕುಂತಿ ಫ್ರಾಕ್ ಬಿಟ್ಟು ಸೀರೆ ಉಡಲಾರಂಭಿಸಿದ್ದಳು. ಕ್ಲಬ್‌ನ ಸದಸ್ಯರಿಗೆ ಅಟಲ್ ದಾರವರ ಭೇಟಿ ದುರ್ಲಭವಾಯಿತು. ಅಟಲ್ ದಾ, ಮನೆಗೂ ಸರಿಯಾಗಿ ಹೋಗುತ್ತಿರಲಿಲ್ಲ.

ತಮ್ಮ ತಂದೆಯ ಪ್ರಶ್ನೆಗಳಿಗೂ ಅಟಲ್ ದಾ ಉತ್ತರಿಸುತ್ತಿರಲಿಲ್ಲ. ಅವರು, ತಮಗೆ ಸರಿ ಕಂಡಿದ್ದನ್ನು ಮಾಡಿಯೇ ತೀರುತ್ತಿದ್ದರು. ತನ್ನ ಒಳಿತು-ಕೆಡಕುಗಳ ಬಗ್ಗೆ ಅವನಿಗೆ ಹೆಚ್ಚಿನ ಅರಿವಿದೆಯೆಂದುಕೊಂಡಿದ್ದ ತಂದೆಯೂ ಅವನಿಗೆ ಯಾವ ಬುದ್ಧಿವಾದವನ್ನೂ ಹೇಳುತ್ತಿರಲಿಲ್ಲ.

ಕಡೆಗೆ, ಮಗನಿಗೆ ಮದುವೆ ಮಾಡಿಬಿಟ್ಟರೆ, ಅವನು ಬೇಗನೇ ಮನೆಗೆ ಬರುತ್ತಾನೆಂದು ಆಶುಬಾಬುಗಳು ಯೋಚಿಸಲಾರಂಭಿಸಿದರು. ಮಿತ್ರರೂ ಅಟಲ್ ದಾಕವರ ಮದುವೆಗೆ ಒತ್ತಾಯಿಸಿದರು. ಸರಿ, ಆಶುಬಾಬುಗಳು, ಕೂಡಲೇ ಅಟಲ್ ದಾರವರಿಗೆ ಹೆಣ್ಣು ಹುಡುಕಲಾರಂಭಿಸಿದರು.

ಅದೆಷ್ಟೋ ಹೆಣ್ಣುಗಳನ್ನು ನೋಡಿದ ಮೇಲೆ ಕಡೆಗೆ ಅವರಿಗೆ ಇಂದುಲೇಖಾ ದೇವಿಯೇ ತಮ್ಮ ಸೊಸೆಯಾಗಲು ಯೋಗ್ಯಳು ಎಂದು ಕಂಡಿತು. ಆಶುಬಾಬುಗಳ ಸ್ನೇಹಿತರೂ ಹೇಳಿದರು, "ನಿಮಗೆ ಒಳ್ಳೇ ಸಂಬಂಧ ಸಿಕ್ಕಿದೆ. ಮದುವೆ ಮಾಡಿಬಿಡಿ. ಬೀಗರೂ ಶ್ರೀಮಂತರು. ನಿಮ್ಮ ಹುಡುಗನಿಗೂ ಒಂದು ಬಲ ಸಿಕ್ಕಿದಂತಾಗುತ್ತದೆ. ಶ್ರೀಮಂತರ ಮಗಳು—ಅದೂ ಒಬ್ಬಳೇ ಮಗಳು. ಯಾವುದಕ್ಕೂ ಯೋಚನೆಮಾಡಬೇಕಾಗಿಲ್ಲ."

ಈ ಕಡೆ ಆಶುಬಾಬುರವರು ಅಟಲ್ ದಾರವರ ವಿವಾಹದ ಸಿದ್ಧತೆಯಲ್ಲಿದ್ದರೆ, ಆ ಕಡೆ ಅಟಲ್ ದಾರವರು ಇನ್ನೊಂದು ಜಗತ್ತಿನಲ್ಲಿ ವಿಹರಿಸುತ್ತಿದ್ದರು. ಅಟಲ್ ದಾರವರಿಗೆ ಒಂದು ಹೊಸ ಸ್ಫೂರ್ತಿ ಸಿಕ್ಕಿತ್ತು. ಎಲ್ಲರಂತೆ ತಾವೂ ಬದುಕುವುದರಿಂದ ಉಪಯೋಗವೇನು?

ಮಂಗಳ್ ಸರ್ಕಾರ್ ಅಟಲ್ ದಾರವರಿಗೆ ಹೇಳಿದ್ದರು—ಮದಿನೀಪುರದ ವಿಯಾಂ ಬಜಾರಿನ ಬಳಿ ಒಂದು ಮುರುಕು ಮನೆಯಲ್ಲಿ ನಮ್ಮ ಗುಪ್ತ ಕೇಂದ್ರವಿತ್ತು. ಅಲ್ಲಿ ಕಾಳಿಕಾ-ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದೆವು. ನಾವೆಲ್ಲಾ ಅಲ್ಲೇ ಭೇಟಿಯಾಗುತ್ತಿದ್ದೆವು....ಖುದೀರಾಮ್, ಶಚೀನ್, ನಿರಾಪದ್ ರಾಯ್ ಮತ್ತು ಸತ್ಯೇನ್ ಬೆಂಕಿಯ ಚೆಂಡಿನಂತಿದ್ದರು. ಸತ್ಯೇನನ ಅಣ್ಣನ ಬಳಿ ಎರಡು ನಳಿಗೆಯ ಬಂದೂಕಿತ್ತು. ಸತ್ಯೇನ್ ಅದರ ಲೈಸೆನ್ಸ್ ಇಲ್ಲದೆ ಉಪಯೋಗಿಸಿದ್ದ. ಒಂದು ದಿನ ಸತ್ಯೇನನಿಗೆ ಪೋಲೀಸರ ಬಗ್ಗೆ ಅನುಮಾನವುಂಟಾಯಿತು.

"ನೋಡು ಬ್ರೋಜೆನ್, ಒಂದು ವೇಳೆ ಪೋಲೀಸರು ನನ್ನನ್ನು ಹಿಡಿದರೆ, ನೀನೊಂದು ಕೆಲಸ ಮಾಡಬೇಕು."ಸತ್ಯೇನ್ ಬ್ರೋಜೆನ್‌ನನ್ನೇ ನೋಡಿದ.

"ಏನದು ಹೇಳು!"

"ನಾನು ಸತ್ತರೆ ಯಾರಿಗೂ ನಷ್ಟವಿಲ್ಲ. ಆದರೆ ಒಂದು ಜೀವಕ್ಕೆ ಮಾತ್ರ...."

"ಯಾರದು? ನಿನ್ನ ಜ್ಞಾನನಾಥ್‌ರಿಗಾ?"

"ಇಲ್ಲ. ಅವರ ಬಗ್ಗೆ ನಾನು ಹೇಳ್ತಿಲ್ಲ."

"ಮತ್ತೆ ಯಾರು?"

"ಅವಳು ನನಗೂ ಏನೂ ಆಗಬೇಕಾಗಿಲ್ಲ. ಅವಳ ಬಗ್ಗೆ ನನ್ನನ್ನೆಂದೂ ನೀನು ವಿಚಾರಿಸಲೂ ಬೇಡ. ಆದರೆ ಒಂದು ವಿಷಯ ಮಾತ್ರ ಮರೆಯಬೇಡ. ನನ್ನ ಹಾಗೆ ಅವಳಿಗೂ ಯಾರೂ ಇಲ್ಲ. ಆ ಮಗುವಿನ ಜವಾಬ್ದಾರಿಯನ್ನು ಇಲ್ಲಿಯವರಿಗೆ ನಾನೇ ಹೊತ್ತಿದ್ದೇನೆ. ಒಂದು ವೇಳೆ ನಾನು ಸಿಕ್ಕಿಬಿದ್ದರೆ, ಆ ಮಗುವಿನ ಗತಿಯೇನು, ಎಂದು ನಾನೀಗ ಯೋಚಿಸುತ್ತಿರುವೆ."

"ಆ ಬಗ್ಗೆ ನೀನೇನೂ ಯೋಚಿಸಬೇಡ. ಆ ಜವಾಬ್ದಾರಿ ನನಗಿರಲಿ."

"ಈ ಬಗ್ಗೆ ನಾನು ಯಾರಿಗೂ ಏನೂ ಹೇಳಲ್ಲ ಅಂತ ಪ್ರಮಾಣ ಮಾಡಿ ಹೇಳು."

"ಆಗಲಿ; ನಾನು ಯಾರಿಗೂ ಹೇಳು ವುದಿಲ್ಲ."

"ನಾನು ಜೈಲಿನಿಂದ ಮರಳಿ ಬಂದ ಮೇಲೆ ಮತ್ತೆ ಆ ಜವಾಬ್ದಾರಿಯನ್ನು ನಾನೇ ವಹಿಸಿಕೊಳ್ಳುವೆ. ಆಗಲೇ, ಆ ಮಗು ಯಾರದ್ದು, ನಾನೇಕೆ ನಿನಗೆ ಈ ಭಾರವನ್ನು ಹೊರಿಸಿದ್ದೆ ಅಂತ ಹೇಳ್ತೀನಿ."

ಆ ಮಗುವಿಗೂ, ಸತ್ಯೇನನಿಗೂ ಏನು ಸಂಬಂಧವಿತ್ತೆಂದು ನಾನೆಂದೂ ಅವನನ್ನು ಪ್ರಶ್ನಿಸಲಿಲ್ಲ. ಸತ್ಯೇನ್, ಇಂಥಾ ಅನಾಥರಿಗೆ ಸಹಾಯ ಮಾಡುವ ವಿಷಯ ನನಗೆ ತಿಳಿದಿತ್ತು. ಮದಿನೀಪುರಕ್ಕೆ ಪೋಲೀಸರು ಬಂದು ಸತ್ಯೇನನನ್ನು ಹಿಡಿದುಕೊಂಡು ಹೋದಾಗ ಅಲ್ಲಿಯ ಜನರಿಗೆ ತುಂಬಾ ಆಶ್ಚರ್ಯವಾಯಿತು. ನಾನು ಆಗಲೇ ಅಲ್ಲಿಂದ ಪೋಲೀಸರ ಕಣ್ಣು ತಪ್ಪಿಸಿ ಪಲಾಯನಗೈದಿದ್ದೆ.

ಆದರೆ, ಅದೊಂದು ದಿನ ಮತ್ತೆ ಮದಿನೀಪುರಕ್ಕೆ ಮರಳಿ ಬಂದಾಗ ಒಂದು ಘಟನೆ ನಡೆಯಿತು. ಅಂದು ಮುಂಜಾನೆ ಮನೆಯಿಂದ ಹೊರಟಿದ್ದೆ. ಕತ್ತಲು ಇನ್ನೂ ಇತ್ತು. ಬಜಾರಿನ ತಿರುವಿನಲ್ಲಿ ನನ್ನೆದುರು ಓರ್ವ ವ್ಯಕ್ತಿ ಬಂದು ನಿಂತ. ಅವನ ಪಕ್ಕದಲ್ಲಿ ಓರ್ವ ಚಿಕ್ಕ ಬಾಲಕಿ ನಿಂತಿದ್ದಳು.

"ಯಾರು?" ಮನಸ್ಸಿನಲ್ಲಿ ಭಯವಾದರೂ ಧೈರ್ಯವಹಿಸಿ ಪ್ರಶ್ನಿಸಿದೆ.

"ನಿಮಗೆ ನನ್ನ ಗುರುತು ಸಿಗಲ್ಲ. ನನ್ನನ್ನು ಸತ್ಯೇನ್ ಕಳುಹಿಸಿದ್ದಾರೆ."

"ಸತ್ಯೇನ್?"

ನಾನು ವಿಚಲಿತಗೊಂಡೆ. ನಾನು ಸತ್ಯೇನ್‌ನೆದುರು ಮಾಡಿದ ಪ್ರತಿಜ್ಞೆಯನ್ನು ಮರೆತುಬಿಟ್ಟೆ. ಈ ವ್ಯಕ್ತಿ ಪೋಲೀಸ್ ವಿಭಾಗಕ್ಕೆ ಸೇರಿದವನಾಗಿದ್ದು, ನನ್ನನ್ನು ಸಿಗಿಸಲು ನೋಡುತ್ತಿದ್ದಾನೆ ಎನ್ನಿಸಿತು. ವಾಸ್ತವವಾಗಿ, ಪೋಲೀಸರು ಸತ್ಯೇನನನ್ನು ಬಂಧಿಸಿದ ಕಾರಣ ನನಗೂ ತಿಳಿದಿರಲಿಲ್ಲ; ಅದು ಅಷ್ಟು ಆಕಸ್ಮಿಕವಾಗಿತ್ತು.

"ಸತ್ಯೇನರು ನಿಮಗೆ ಒಬ್ಬ ಚಿಕ್ಕ ಬಾಲಕಿಯ ಭಾರವನ್ನು ಹೊರಲು ತಿಳಿಸಿದ್ದರಲ್ಲ?" ಆ ವ್ಯಕ್ತಿಗೆ ಬಹುಶಃ ನನ್ನ ಪರಿಸ್ಥಿತಿಯ ಅರಿವಾಯಿತು.

"ಹೌದೌದು, ಸತ್ಯೇನ್ ನನಗೆ ಹೇಳಿದ್ದ."

"ಅವಳೇ ಈ ಹುಡುಗಿ."

ಹುಡುಗಿ, ಕೊಳಕು ಫ್ರಾಕ್ ಹಾಕಿಕೊಂಡಿದ್ದಳು. ನಮ್ಮ ಮಾತು ಅವಳಿಗೆ ಅರ್ಥವಾಗುತ್ತಿರಲಿಲ್ಲ. ಅವಳು ಈ ಹಿಂದಿನಂತೆಯೇ ಆ ವ್ಯಕ್ತಿಯ ಕೈ ಹಿಡಿದು ಮೌನಿಯಾಗಿ ನಿಂತಿದ್ದಳು. ನಾನು ಚಿಂತಾಕ್ರಾಂತನಾದೆ. ಬೆಳಗಾದರೆ, ನಮ್ಮ ಗುರುತನ್ನು ಕೆಲವರು ಹಿಡಿದುಬಿಡುತ್ತಾರೆ....

"ಸರಿ, ನಾನಿನ್ನು ಬರ್ತೀನಿ."

ನಾನು ಸಾವರಿಸಿಕೊಳ್ಳುವುದಕ್ಕೂ ಮೊದಲೇ ಆ ವ್ಯಕ್ತಿ ಆ ಹುಡುಗಿಯನ್ನು ಅಲ್ಲೇ ಬಿಟ್ಟು ಹೊರಟು ಹೋದ. ನಾನು ನೋಡುತ್ತಾ ನಿಂತು ಬಿಟ್ಟೆ. ಆ ಹುಡುಗಿಯೂ ವಿಚಿತ್ರವಾಗಿದ್ದಳು. ಅವಳು ತನ್ನನ್ನು ಬಿಟ್ಟು ಹೋದ. ಆ ವ್ಯಕ್ತಿಯ ಕಡೆಗೆ ನೋಡದೆ, ನನ್ನನ್ನೇ ನೋಡುತ್ತಿದ್ದಳು.

ಯೋಚಿಸಲು ಸಮಯವಿರಲಿಲ್ಲ. ರೈಲು ಬರುವ ವೇಳೆಯಾಗಿತ್ತು. ನಾನು ಅವರ ಕೈ ಹಿಡಿದು ರೈಲು ನಿಲ್ದಾಣದೆಡೆಗೆ ವೇಗವಾಗಿ ಹೆಜ್ಜೆ ಹಾಕಿದೆ. ಆ ಹುಡುಗಿಯೂ ನಿರ್ವಿಕಾರತೆಯಿಂದ ನನ್ನೊಂದಿಗೆ ಬರಲಾರಂಭಿ

ಸಿದಳು. ಸತ್ಯೇನನಿಗೆ ಮಾತು ಕೊಟ್ಟ ಪ್ರಕಾರ, ಅವಳ ಭಾರವನ್ನು ನಾನು ಹೊರಲೇಬೇಕಿತ್ತು. ಅಂದು, ಹೇಗೋ ಕಲ್ಕತ್ತೆಗೆ ಬಂದೆ. ಅಂದಿನಿಂದಲೇ ನಾನು ಮಂಗಳ್ ಸರ್ಕಾರ್ ಆದೆ. ನನ್ನ ದೃಷ್ಟಿಯಲ್ಲಿಯೇ ನಾನು ಅಪರಿಚಿತನಾಗಿಬಿಟ್ಟೆ. ನಾನೀಗ ಕುಂತಿಯ ತಂದೆಯಾದೆ."

ಹೊರಗೆ ಧಾರಾಕಾರವಾಗಿ ಮಳೆ ಬೀಳುತ್ತಿತ್ತು. ಬ್ರೋಜೆನ್‌ರವರಿಗೆ ಮಧ್ಯರಾತ್ರಿಯಾಗಿದ್ದೂ ತಿಳಿಯಲಿಲ್ಲ. ಅಟಲ್ ದಾರವರು ಕಿಟಕಿಯ ಹೊರಗೆ ಇಣಕಿ, "ಆದ್ರೆ, ಕುಂತಿಗೆ ಈ ವಿಷಯಗಳು ತಿಳಿದಿದೆಯೇ?" ಎಂದು ಪ್ರಶ್ನಿಸಿದರು.

"ಇಲ್ಲ. ಸತ್ಯೇನ್ ಈ ವಿಷಯಗಳನ್ನು ಹೇಳಬಾರದೆಂದು ತಿಳಿಸಿದ್ದ. ನಾನೂ, ಕುಂತಿಯ ಜವಾಬ್ದಾರಿಯನ್ನಷ್ಟೇ ಹೊರುವೆನೆಂದು ಮಾತು ಕೊಟ್ಟಿದ್ದೆ."

"ನಿಮ್ಮ ನಿಜನಾಮಧೇಯ ಬ್ರೋಜೆನ್ ಎಂಬುದು ಕುಂತಿಗೆ ಗೊತ್ತಾ?"

"ಇಲ್ಲ. ಅವಳಿಗೇನೂ ಗೊತ್ತಿಲ್ಲ. ಈಗ ನಿನಗೆ ಮಾತ್ರ ಹೇಳುತ್ತಿದ್ದೇನೆ. ನನ್ನ ಬಗ್ಗೆ ಈ ಹಿಂದೆ ಇನ್ನು ಇಬ್ಬರಿಗೆ ತಿಳಿದಿತ್ತು. ಆದರೆ ಈಗ ಅವರಿಬ್ಬರೂ ಈ ಜಗತ್ತಿನಲ್ಲಿ ಇಲ್ಲ–ಒಬ್ಬ ಸತ್ತುಹೋಗಿದ್ದಾನೆ, ಇನ್ನೊಬ್ಬನಿಗೆ ಗಲ್ಲುಶಿಕ್ಷೆಯಾಗಿದೆ." ಮಂಗಳ್ ಸರ್ಕಾರ್ ಸ್ವಲ್ಪ ತಡೆದು ಹೇಳಿದರು, "ನಾನೂ ಬಹುಶಃ ನಿನಗೆ ಇದನ್ನೆಲ್ಲಾ ಹೇಳುತ್ತಿರಲಿಲ್ಲ. ಆದರೆ, ನಾನು ತುಂಬಾ ದಿನಗಳಿಂದ ನಿನ್ನನ್ನು ಗಮನಿಸುತ್ತಿದ್ದೇನೆ....ನಿನ್ನಲ್ಲಿ ನನ್ನನ್ನು ಕಂಡಿರುವೆ. ನೀನು ಏನನ್ನಾದರೂ ಸಾಧಿಸಬಲ್ಲೆ, ಅಟಲ್! ಖಂಡಿತಾ ಸಾಧಿಸಬಲ್ಲೆ. ಇನ್ನು ನನ್ನ ದಿನಗಳು ಮುಗಿದವು. ನಾನಿನ್ನು ಹೆಚ್ಚು ದಿನ ಬದುಕಲಾರೆ. ನನ್ನಿಂದಂತೂ ಏನೂ ಸಾಧ್ಯವಾಗಲಿಲ್ಲ. ನನ್ನ ಬಾಲ್ಯದ ಹೆಸರನ್ನು ನಾನು ಹೇಳುವಂತಿಲ್ಲ. ನಾನೀಗ ಸೋತುಬಿಟ್ಟಿದ್ದೇನೆ, ಅಟಲ್! ಆದರೆ, ಸತ್ಯೇನನಿಗೆ ಕೊಟ್ಟ ಮಾತನ್ನು ಮಾತ್ರ ಮನಃಪೂರ್ವಕವಾಗಿ ನಡೆಸಿಕೊಂಡು ಬಂದಿದ್ದೇನೆ. ಇದೊಂದು ಮಾತ್ರ ನನಗೆ ಖುಷಿ ಕೊಡುವ ವಿಷಯವಾಗಿದೆ."

"ಈಗ ನೀವು ಯಾವ ಪರಿಚಯದಿಂದ ಬದುಕುತ್ತಿದ್ದೀರಿ?" ಅಟಲ್ ದಾ ಎವೆಯಿಕ್ಕದೆ ಮಂಗಳ್ ಸರ್ಕಾರ್‌ರವರನ್ನು ಗಮನಿಸುತ್ತಿದ್ದರು.

"ನಾನು ಕಲ್ಕತ್ತೆಯ ಕಾರ್ಪೋರೇಷನ್‌ನಲ್ಲಿ ಓವರ್ಸಿಯರ್–ಇದೊಂದೇ ನನ್ನ ಪರಿಚಯ." ಸತ್ಯೇನ, ನನಗೆ ವಹಿಸಿದ ಭಾರದಿಂದಾಗಿ ನಾನು ಈ ನೌಕರಿ ಮಾಡಬೇಕಾಯಿತು."

"ಯಾಕೆ?"

"ನಾನು ಕುಂತಿಯ ಒಳಿತನ್ನು ಬಯಸುತ್ತೇನೆ. ಕುಂತಿ ಮಾತ್ರವಲ್ಲ; ಜನರೂ ಕೂಡ, ಕುಂತಿ ನನ್ನ ಮಗಳೆಂದು ತಿಳಿದುಕೊಳ್ಳಬೇಕೆಂದು ನಾನು ಬಯಸುತ್ತಿದ್ದೆ. ನಾನು ತುಂಬಾ ಕಷ್ಟದ ದಿನಗಳನ್ನು ಎದುರಿಸಿದ್ದೇನೆ. ಆ ದಿನಗಳಲ್ಲಿ 'ವಂದೇ ಮಾತರಮ್' ಉಚ್ಚರಿಸುವುದು ಅಪರಾಧವಾಗಿತ್ತು. ನಾವು ತುಂಬಾ ಕಠೋರರಾಗಬೇಕಾಗುತ್ತಿತ್ತು. ನಾವು ನಮ್ಮ ಸುಖಕ್ಕಿಂತ, ನಮ್ಮ ಚಾರಿತ್ರ್ಯಕ್ಕೆ ಹೆಚ್ಚು ಗಮನ ಕೊಡುತ್ತಿದ್ದೆವು. "ಮಂಗಳ್ ಸರ್ಕಾರ್ ಸ್ವಲ್ಪ ತಡೆದು ಮತ್ತೆ ಹೇಳಿದರು. "ನನಗೆ ಕೆಲವು ಸಲ ಅನೇಕ ವಿಚಾರ

ಗಳು ಕಾಡುತ್ತಿದ್ದವು–ಈ ಕುಂತಿ ಯಾರು? ಅವಳ ತಾಯಿ-ತಂದೆ ಯಾರು? ಕುಂತಿ ಯನ್ನು ನನ್ನ ಕೈಗೆ ಒಪ್ಪಿಸಿ ಹೋದ ಆ ವ್ಯಕ್ತಿ ಯಾರು? ಆದರೆ ನನ್ನ ವಿಚಾರ ಗಳು ಬಗೆಹರಿಯುತ್ತಿರಲಿಲ್ಲ. ಸತ್ಯೇನ್ ತಪ್ಪು ಹೆಜ್ಜೆ ಇಡಲಾರನೆಂಬ ವಿಶ್ವಾಸ ಮಾತ್ರ ನನಗಿತ್ತು. ಬಹು... ಸತ್ಯೇನನೂ ಯಾರಿಗೋ ಮಾತುಕೊಟ್ಟಿರಬೇಕು.... ಯಾರೋ, ತಮ್ಮ ಅನಾಥ ಮಗುವನ್ನು ಅವನ ವಶಕ್ಕೆ ಕೊಟ್ಟಿರಬೇಕು... ಸತ್ಯೇನ ನಿಗೆ ನನ್ನ ಬಗ್ಗೆ ನಂಬಿಕೆಯಿದ್ದಿದ್ದರಿಂದ ಈ ಮಗುವಿನ ಭಾರವನ್ನು ನನಗೊಪ್ಪಿಸಿ, ಅವನು ನಿಶ್ಚಿಂತೆಯಿಂದ ಗಲ್ಲುಗಂಭವೇರಿ ದ್ದಾನೆ....ಹಾಂ, ಈಚೆಗೆ ನನ್ನ ಕೊನೆಯ ದಿನಗಳು ಸಮೀಪಿಸುತ್ತಿದೆ. ನನ್ನ ನಂತರ ಈ ಕುಂತಿಯನ್ನು ನೋಡಿಕೊಳ್ಳು ವವರು ಯಾರು? ಎಂಬ ಪ್ರಶ್ನೆ ಕಾಡು ತ್ತಿದೆ."

"ಅವಳ ಜವಾಬ್ದಾರಿಯನ್ನು ನಾನು ವಹಿಸಿಕೊಂಡರೆ ನಿಮ್ಮ ಅಭ್ಯಂತರವೇನಿಲ್ಲ, ತಾನೇ?" ಅಟಲ್ ದಾ ಅಕಸ್ಮಾತ್ ಪ್ರಶ್ನಿಸಿಬಿಟ್ಟರು.

"ಇದಕ್ಕಿಂತ ಹೆಚ್ಚು ಸಂತೋಷ ಇನ್ನೇ ನಾಗಲು ಸಾಧ್ಯ, ಅಟಲ್? ನೋಡು, ನನಗೀಗ ಮುಕ್ತಿಯೇ ಸಿಕ್ಕಿದಂತಾಯಿತು. ಇನ್ನು ನಾನು ನಿಶ್ಚಿಂತನಾದೆ. ನಾನಿನ್ನು ನೆಮ್ಮದಿಯಿಂದ ಉಸಿರಾಡುವೆ. ನಾನು ನಿನಗೆ ಸದಾ ಕೃತಜ್ಞನಾಗಿರುವೆ."

ಆದರೆ, ನಂತರ ಅಟಲ್ ದಾರವರಿಗೆ ತಾವು ಅದೆಷ್ಟು ಸಮಸ್ಯೆಯ ಭಾರ ವನ್ನು ಹೊತ್ತರು ಎಂಬುದನ್ನು ತಿಳಿಯ ದಾದರು.

ಅದೊಂದು ದಿನ ಮಂಗಳ್ ಸರ್ಕಾರ್ ರವರ ಆರೋಗ್ಯ ತುಂಬಾ ಹದಗೆಟ್ಟಿತು. ಅದು ಅವರ ಬಾಯಿಲೆಯ ಅಂತಿಮಘಟ್ಟ ವಾಗಿತ್ತು. ಆ ಪರಿಸ್ಥಿತಿಯಲ್ಲಿಯೇ ಅಟಲ್ ದಾರವರ ವಿವಾಹ ನೆರವೇರಿತು. ರೋಗ ಗ್ರಸ್ತ ಮಂಗಳ ಸರ್ಕಾರ್‌ರವರ ಕಣ್ಣೆದುರೇ ಅಟಲ್ ದಾ ಮತ್ತು ಕುಂತಿದೇವಿಯ ಬದುಕಿನಲ್ಲಿ ಚರಮಾವಸ್ಥೆ ದುರ್ದಿನಗಳು ಮುತ್ತಿಬಂದವು.

ಅಟಲ್ ದಾರವರಿಗೆ ತಮ್ಮ ತ್ಯಾಗದಲ್ಲಿ ನಂಬಿಕೆಯಿತ್ತು. ಅಲ್ಲದೆ ಕುಂತಿಗೂ ಕೂಡ ಅಟಲ್ ದಾ ಆದರ್ಶ ವ್ಯಕ್ತಿಯಾಗಿದ್ದರು. ಅವರ ಕೈಗೆ ತನ್ನನ್ನು ತಾನು ಒಪ್ಪಿಸಿ ಕೊಂಡು ಕುಂತಿಯೂ ಧನ್ಯತೆಯನ್ನು ಅನುಭವಿಸಲಾರಂಭಿಸಿದಳು.

"ನೀವಿಬ್ಬರೂ ಸುಖವಾಗಿರಿ. ಇಬ್ಬರೂ ಸೇರಿ ದೇಶವನ್ನು ಪ್ರೀತಿಸಿ, ದೇಶದ ಒಳಿತನ್ನ ಬಯಸಿ. ನಾನು ಇನ್ನೇನನ್ನೂ ಬಯಸುವು ದಿಲ್ಲ." ಮಂಗಳ್ ಸರ್ಕಾರ್ ತಮ್ಮ ಅಂತಿಮ ಆಶೀರ್ವಾದವನ್ನು ನೀಡಿದರು.

ಈ ವಿವಾಹ ಕೇವಲ ಮೂರು ಜೀವಿ ಗಳಿಗೆ ಮಾತ್ರ ತಿಳಿದಿತ್ತು. ಓರ್ವ ಅಜ್ಞಾತ ಹೆಣ್ಣು ಸರ್ಪದಂತೆ ಅಟಲ್ ದಾರವರ ಬದುಕಿನ ಪ್ರತಿ ತಿರುವಿನೊಂದಿಗೂ ಬೆರೆತು ಹೋದಳು.

"ನನ್ನ ವಿಷಯ ಗೌಪ್ಯವಾಗಿರಬೇಕು." ಸಾಯುವಾಗ ಮಂಗಳ್ ಸರ್ಕಾರ್ ಅಟಲ್ ದಾರವರಲ್ಲಿ ವಿನಂತಿಸಿಕೊಂಡರು.

"ಹಾಗೇ ಆಗಲಿ" ಅಟಲ್ ದಾ ವಚನ ವಿತ್ತರು.

ಈ ವಿಷಯ ಇಲ್ಲಿಗೆ ಮುಗಿದುಹೋಗಿ ದ್ದರೆ, ಅಟಲ್ ದಾರವರ ಬಗ್ಗೆ ಕಾದಂಬರಿ

ಬರೆಯುವ ಅಗತ್ಯವುಂಟಾಗುತ್ತಿರಲಿಲ್ಲ. ಅಧೀರ ಬೋಸ್ ಹೇಳಿದ್ದ–'ಮನುಷ್ಯ ಎಲ್ಲರಿಗೂ ತಿಳಿಯುವಂತೆ ಮದುವೆಯಾಗುತ್ತಾನೆ–ಇದಕ್ಕಾಗಿ ಆಹ್ವಾನ ಪತ್ರಿಕೆ ಕೊಟ್ಟು ವಿವಾಹಕ್ಕೆ ಆಹ್ವಾನಿಸಿ, ಊಟ ಹಾಕಿಸುತ್ತಾನೆ. ಇವತ್ತು ಈ ಪದ್ಧತಿ ಒಂದು ರೀತಿಯಲ್ಲಿ ಒಳ್ಳೆಯದೆಂದು ಅನ್ನಿಸುತ್ತದೆ–ಮೊದಲು, ಇದನ್ನು ನಾನು ದುಂದು ವೆಚ್ಚವೆಂದು ಯೋಚಿಸುತ್ತಿದ್ದೆ."

ವಾಸ್ತವವಾಗಿ, ನಾವು ಅಟಲ್‌ದಾ ಅವರನ್ನು ಶ್ರದ್ಧಾ-ಭಕ್ತಿಯಿಂದ ಕಾಣುತ್ತಿರುವಾಗಲೇ ಅವರು ಒಳಗೊಳಗೇ ನಮ್ಮ ಶ್ರದ್ಧೆಯನ್ನು ಅಲ್ಲಾಡಿಸಿದ್ದರು. ಅಟಲ್ ದಾ, ದೇಶಕ್ಕಾಗಿ ಮಹಾನ್ ಕಾರ್ಯವೆಸಗುತ್ತಿದ್ದಾರೆಂದು ನಾವು ತಿಳಿದಿದ್ದೆವು.

ಬ್ರೋಜೇನ್‌ರವರ ವಾಸ್ತವಿಕತೆಯನ್ನು ಅಟಲ್ ದಾ ಅವರನ್ನು ಜೊತೆತು ಪಡಿಸಿ ಬೇರೆ ಯಾರು ತಾನೇ ಬಲ್ಲರು? ಗುಣಗಳ ಗಣಿಯಾಗಿದ್ದ ತಾವೇ ಹೀಗಾಗುತ್ತೇವೆಂದು ಅಟಲ್ ದಾ ರವರಿಗೇ ತಿಳಿದಿತ್ತೆ? ಅವರು, ಸರ್ಕಾರದ ಕಚೇರಿಯೊಂದರಲ್ಲಿ ಅಧಿಕಾರಿಯಾಗಿ ಸುಖ-ಜೀವನವನ್ನು ಸಾಗಿಸಬಹುದಿತ್ತು. ಉಳಿದವರಂತೆಯೇ, ಜಗತ್ತಿನೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಬದುಕಿದ್ದರೆ ಅವರಿಗೆ ಶಬಾಶ್‌ಗಿರಿ ಸಲ್ಲಿಸಿ, ಅವರ ಸಾವಿನ ನಂತರ ಚಂದಾ ಹಣ ಸಂಗ್ರಹಿಸಿ ಅವರ ಸ್ಮೃತಿ-ಸ್ತಂಭವನ್ನು ನಿಲ್ಲಿಸಿಬಿಡುತ್ತಿದ್ದೆವು.

ಆದರೆ, ಯಾರಿಗೆ ಗೊತ್ತು! ಒಪ್ಪಂದ ಮಾಡಿಕೊಂಡಿದ್ದರಿಂದಲೇ ಅಟಲ್‌ದಾರವರ ಅಂತ್ಯ ಹೀಗಾಗಿರಲೂಬಹುದು. ಕುಂತಿಯನ್ನು ವಿವಾಹವಾದ ವಿಷಯ ಅವರು ಯಾರಿಗೂ ಯಾಕೆ ಹೇಳಲಿಲ್ಲ?

ಮಗ ನಿತ್ಯ ರಾತ್ರಿ ತಡವಾಗಿ ಮನೆಗೆ ಬರುತ್ತಿದ್ದ. ಆಶುಬಾಬುಗಳು ಅವರ ವಿವಾಹದ ಸಿದ್ಧತೆಗೆ ತೊಡಗಿದರು. ತಾವು ಬದುಕಿರುವಾಗಲೇ ಮಗ ಸಂಸಾರಿಯಾಗಬೇಕೆಂಬುದು ಅವರಾಸೆಯಾಗಿತ್ತು.

ಅಂದೂ, ಅಟಲ್ ದಾ ಮನೆಯಿಂದ ಹೊರಡಲನುವಾದಾಗ ಆಶುಬಾಬುಗಳು ತಡೆದರು. "ಈಗ ಇನ್ನೆಲ್ಲೂ ಹೋಗಬೇಡ. ನೀನೀಗ ಮನೆಯಲ್ಲಿರಬೇಕಾಗುತ್ತೆ."

"ಯಾಕೆ?"

ಮಗನಿಗೆ ಎಲ್ಲಾ ವಿಷಯಗಳನ್ನು ಬಹಿರಂಗವಾಗಿ ಹೇಳುವುದು ಉಚಿತವಲ್ಲವೆಂದು ಆಶುಬಾಬುಗಳು ಯೋಚಿಸಿದರು. ಹೀಗಾಗಿ, ಮಗನಿಗೆ ಏನೂ ಹೇಳದೆ ತಮ್ಮ ಕಾರ್ಯದಲ್ಲಿ ಮಗ್ನರಾದರು. ಆದರೆ, ಅಟಲ್ ದಾರವರಿಗೆ ಅನುಮಾನವಾಯಿತು. ಅವರು ಮನಸ್ಸಿನಲ್ಲೇ ಚಡಪಡಿಸಿದರು. ತಮ್ಮ ವಿರುದ್ಧ ಪಿತೂರಿಯನ್ನು ಮಾಡಲಾಗುತ್ತಿದೆ ಎಂಬುದನ್ನು ಮನಗಂಡರು. ಈ ಪಿತೂರಿಯ ವಿರುದ್ಧ ಅಟಲ್ ದಾರವರ ಆತ್ಮ ವಿದ್ರೋಹ ಬಗೆಯಿತು.

"ನಾನು ಈ ಮನೆಯಲ್ಲಿ ಇರಲ್ಲ, ಅಮ್ಮ! ನಾನೀಗಲೇ ಹೊರಟು ಹೋಗ್ತೀನಿ" ಎಂದು ಅಟಲ್ ದಾ ಅಂದು ಬಾಗಿಲೆಡೆಗೆ ಹೊರಟಿದ್ದರು, ಆಗಲೇ ಹುಡುಗಿಯ ಕಡೆಯವರು ಕಾರಿನಲ್ಲಿ ಬಂದಿಳಿದರು. ಆಶುಬಾಬುಗಳು ಹೊರಬಂದು ಅತಿಥಿಗಳನ್ನು ಸ್ವಾಗತಿಸಿ, ಅವರನ್ನು ಒಳಗೆ ಕರೆದೊಯ್ದರು. ಅಟಲ್ ದಾ ವಿಧಿಯಿಲ್ಲದೆ, ಅವರನ್ನು ಹಿಂಬಾಲಿಸಬೇಕಾಯಿತು.

ಆಶುಬಾಬುಗಳು ಮಧ್ಯಮವರ್ಗದವರಾಗಿದ್ದರೂ, ಹುಡುಗಿಯ ತಂದೆ ಈ

ಸಂಬಂಧಕ್ಕೆ ಒಪ್ಪಿದ್ದರು ಹುಡುಗ ಪ್ರತಿಭಾವಂತ, ಗುಣವಂತ, ಆರೋಗ್ಯವಂತ ಎಂಬ ವಿಷಯವನ್ನು ಅವರು ಬಲ್ಲವರಿಂದ ತಿಳಿದುಕೊಂಡಿದ್ದರು. ಹೀಗಾಗಿ, ಹುಡುಗನ ತಂದೆಯ ಆರ್ಥಿಕ ಸ್ಥಿತಿಯ ಬಗ್ಗೆ ಅವರು ಗಮನ ಕೊಟ್ಟಿರಲಿಲ್ಲ. ಆಶುಬಾಬುಗಳಿಗೆ ತಮ್ಮ ಮಗನ ಬಗ್ಗೆ ತುಂಬಾ ಅಭಿಮಾನವಿತ್ತು.

ಆದರೆ ಆಶ್ಚರ್ಯ! ಅಟಲ್ ದಾ ನಿಶ್ಚಿತಾರ್ಥದ ವಿಧಿವಿಧಾನಗಳನ್ನು ಮೌನವಾಗಿ ಸಹಿಸಿದರು–ಬಹುಶಃ ಮುಕ್ತಿಯ ಉಪಾಯವನ್ನೂ ಅವರು ಯೋಚಿಸಿದ್ದರೇನೋ....

ಹುಡುಗಿಯ ಕಡೆಯವರು ಅಂದು ಆಶುಬಾಬುಗಳ ಮನೆಯಿಂದ ಸಂತೋಷದಿಂದ ಬೀಳ್ಕೊಂಡರು. ಅವರೆಲ್ಲಾ ಹೊರಟು ಹೋಗುತ್ತಲೇ ಅಟಲ್ ದಾರವರೂ ಮನೆಯಿಂದ ಹೊರ ಹೊರಟರು.

ಕುಂತಿಯ ವಿವಾಹ ಆಗ ತಾನೇ ಮುಗಿದಿತ್ತು. ವಿವಾಹವೆಂದರೆ ಆಮೂಲಾಗ್ರ ಪರಿವರ್ತನೆ. ವಿವಾಹಕ್ಕೆ ಮೊದಲು ಕುಂತಿಗೂ ಅಟಲ್ ದಾ ಆದರ್ಶಪುರುಷರಾಗಿದ್ದರು. ಆದರೆ, ತಂದೆ ಸತ್ತ ಮೇಲೆ ಕುಂತಿಯು ಅಟಲ್ ದಾ ಅವರ ಇನ್ನೊಂದು ಮಗ್ಗುಲನ್ನೂ ಕಂಡಳು.

"ಯಾಕೆ,ಯಾವಾಗ್ಲೂ ನೀವು ಏನು ಯೋಚ್ನೆ ಮಾಡ್ತಿರ್ತೀರ?" ಅಟಲ್ ದಾ ಗಂಭೀರವಾಗಿರುತ್ತಿದ್ದುದನ್ನು ಕಂಡು ಕುಂತಿ ಪ್ರಶ್ನಿಸುತ್ತಿದ್ದಳು.

"ಇಲ್ವಲ್ಲ!" ಅಟಲ್ ದಾ ಕುಂತಿಯ ಮಾತನ್ನು ಅಲ್ಲಗಳೆಯುತ್ತಿದ್ದರು. ಕುಂತಿಗೆ ಗುಟ್ಟು ತಿಳಿದರೆ? ನೆರೆಹೊರೆಯವರಿಗೂ ತಮ್ಮ ಗುಟ್ಟು ತಿಳಿದರೆ? ಈ ಭಯ ಸದಾ ಅವರನ್ನು ಕಾಡುತ್ತಿತ್ತು. ಅಟಲ್ ದಾರವರಿಗೆ ಬಾಲ್ಯದಿಂದಲೇ ಎಲ್ಲರ ಪ್ರೀತಿ, ವಿಶ್ವಾಸ ಸಿಕ್ಕಿತ್ತು. ನಿಂದನೆ, ಅಪಕೀರ್ತಿಗಳನ್ನು ಅವರೆಂದೂ ಸಹಿಸಬೇಕಾಗಿ ಬಂದಿರಲಿಲ್ಲ. ಆದರೆ, ಒಮ್ಮೆಲೆ ತಡೆಯುಂಟಾಯಿತು. ಒಂದು ವೇಳೆ ಅವರ ವಿಷಯ ಜನರಿಗೆ ತಿಳಿದರೆ? ಅವರು ಭಯದಿಂದಾಗಿ ಎಲ್ಲರ ಕಣ್ಣು ತಪ್ಪಿಸಿ ತಿರುಗಾಡಲಾರಂಭಿಸಿದರು. ಅವರು ಎಲ್ಲರಿಂದ ದೂರವಿರಲು ಪ್ರಾರಂಭಿಸಿದರು.

"ಇವತ್ತೆಲ್ಲಾ ಎಲ್ಲಿದ್ದಿರಿ?" ಕುಂತಿ ಪ್ರಶ್ನಿಸುತ್ತಿದ್ದಳು.

"ಕೆಲಸಗಳಲ್ಲಿ ಮಗ್ನನಾಗಿಬಿಟ್ಟಿದ್ದೆ.

"ಎಂಥಾ ಕೆಲಸ?"

"ಒಂದು ಕೆಲಸವೇ? ಇವತ್ತು ಬರಾನಗರ್‌ಗೆ ಹೋಗಬೇಕಿತ್ತು."

"ಆದ್ರೆ, ಇವತ್ತು ದುಡ್ಡು ತರ್ತೀನಿ ಅಂತ ಹೇಳಿದ್ದಿರಲ್ಲ. ಹಣದ ವ್ಯವಸ್ಥೆಯಾಯ್ತಾ? ಎರಡು ತಿಂಗಳಿನಿಂದ ಬಾಡಿಗೆ ಕೊಟ್ಟಿಲ್ಲ."

ಆದರೆ, ಅಟಲ್ ದಾ ಕುಂತಿಯೆದುರು ಸುಳ್ಳು ಹೇಳಿಬಿಡುತ್ತಿದ್ದರು. ವಾಸ್ತವವಾಗಿ, ಅವರು ಹಗಲಿಡೀ ಯಾವುದೋ ಪಾರ್ಕ್‌ನಲ್ಲಿ ಕೂತು ಏಕಾಂತದಲ್ಲಿ ಸಮಯ ಕಳೆಯುತ್ತಿದ್ದರು.

ತಮಗೇನು ಆಗಿದೆ? ತಮ್ಮ ಬಳಿ ಹಣವಿಲ್ಲದಿದ್ದಾಗ, ಕೆಲಸವಿಲ್ಲದಿದ್ದಾಗ ತಾವೇಕೆ ಬ್ರೋಜೆನ್‌ರವರಿಗೆ ಮಾತು ಕೊಡಬೇಕಿತ್ತು? ಇನ್ನೊಬ್ಬರ ದೃಷ್ಟಿಯಲ್ಲಿ ತಾವು ಮಹಾನ್ ವ್ಯಕ್ತಿಯಾಗಲೋಸುಗ ಹೀಗೆಲ್ಲಾ ಮಾಡಬೇಕಾಗಿತ್ತೆ?–ಎಂದೂ ಅವರು ಯೋಚಿಸುತ್ತಿದ್ದರು.

(ಮುಂದುವರಿಯುವುದು)

ಪುಸ್ತಕ ಪರಿಚಯ

ಶೇಫಾಲಿಕಾ—(ಕವನ ಸಂಕಲನ) ಲೇ : ಲತಾರಾಜಶೇಖರ್ ; ಪ್ರಕಾಶನ : ಕಾವೇರಿ ಪ್ರಕಾಶನ ; ಸಂ. ೭೫೬, ನಾಲ್ಕನೆಯ ಹಂತ, ಟಿ. ಕೆ. ಲೇಔಟ್, ಕುವೆಂಪು ನಗರ, ಮೈಸೂರು ; ಮೊದಲ ಮುದ್ರಣ ೧೯೯೩ ; ಬೆಲೆ : ರೂ. ೩೦.

'ಶೇಫಾಲಿಕಾ' ಶ್ರೀಮತಿ ಲತಾರಾಜಶೇಖರ್ ಅವರ ಮೂರನೇ ಕವನ ಸಂಕಲನ. ಈ ಮುನ್ನ 'ಕೋಗಿಲೆ ಕೂಗಿದಂತೆ' ಮತ್ತು 'ಬೆಳಕಿನ ಹನಿಗಳು' ಎಂಬ ಎರಡು ಕವನ ಸಂಕಲನಗಳನ್ನು ಅವರು ಪ್ರಕಟಿಸಿದ್ದಾರೆ. ಹೀಗಾಗಿ ಪಕ್ವತೆಯ ದೃಷ್ಟಿಯಿಂದ ಇಲ್ಲಿನ ಕವಿತೆಗಳು ಕವಯಿತ್ರಿಯ ಕೈ ಕಾವ್ಯ ಮಾರ್ಗದಲ್ಲಿ ಪಳಗಿರುವುದನ್ನು ದೃಢಪಡಿಸುತ್ತವೆ. ಐವತ್ತೈದು ಕವಿತೆಗಳಿಂದ ಸಂಕಲನಗೊಂಡಿರುವ "ಶೇಫಾಲಿಕಾ"ದಲ್ಲಿ ಬಹುಮಟ್ಟಿಗೆ ಎಲ್ಲ ಪದ್ಯಗಳೂ ಅನುರಾಗವನ್ನು ಹೊದ್ದುಕೊಂಡಿವೆ. ಕೆಲವು ಪದ್ಯಗಳು ದಾಂಪತ್ಯ ಬದುಕಿನ ರಸನಿಮಿಷಗಳನ್ನು ಬರವಣಿಗೆಗಿಳಿಸಿದಂತಿದ್ದರೆ ಮತ್ತೆ ಕೆಲವು ಪ್ರಿಯತಮನೊಡನೆ ಸಂವಾದಿಸಿದಂತಿವೆ.

ಶ್ರೀಮತಿ ಲತಾ ಅವರೇ ಹೇಳುವಂತೆ ಬದುಕಿನ ಮೂಲಧಾತುವಾದ ಪ್ರೇಮವೇ ಅವರ ಕಾವ್ಯರಚನೆಯ ಸ್ಫೂರ್ತಿ. ಅವರ ಕವಿತೆಗಳು-ಪ್ರೇಮ ; ಅದರ ಭವ್ಯತೆ, ಮೋಹ, ಕನಸು, ಆಶ್ಚರ್ಯ, ವಿಸ್ಮಯ, ಸೆಳೆತ, ಎಳೆತ... ಹೀಗೆ ಪ್ರೇಮದ ವಿವಿಧ ಮುಖಗಳನ್ನು ಅನಂತ ಮಜಲುಗಳನ್ನು ಸಹೃದಯನಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿವೆ. 'ಬಾಳದೇವನಿಗೆ ಕಾವ್ಯ ನನ್ನ ಪೂಜೆ' (ನನ್ನ ಕಾವ್ಯ) ಎಂಬ ಮಾತಿನೊಂದಿಗೆ ತಮ್ಮ ಕಾವ್ಯ ಪುಟಗಳನ್ನು ತೆರೆಯುವ ಕವಯಿತ್ರಿ—

> "ಬಿಳಿ ಹಾಳೆಯ ಮೇಲೆ
> ಮೂಡುವುದು ಕೇವಲ ಅಕ್ಷರಗಳಲ್ಲ .
> ನಿನ್ನಿಂದ ನಾಪಡೆದ
> ಸ್ಫೂರ್ತಿಯ ಕುಡಿಗಳು
> ಚೈತನ್ಯದ ಹನಿಗಳು"
>
> (—ಬಿಳಿ ಹಾಳೆಯ ಮೇಲೆ)

....ಎಂದು ತಮ್ಮ ಕಾವ್ಯರಚನೆಗೆ ಸ್ಫೂರ್ತಿಯಾಗಿರುವ ಬಾಳಗೆಳೆಯನನ್ನು ತುಂಬು ಮನದಿಂದ ಧ್ಯಾನಿಸುತ್ತಾರೆ. ಇವರ ಪದ್ಯಗಳಲ್ಲಿ ತಮ್ಮ ಸಂಗಾತಿಯನ್ನು ಕುರಿತು ಹಾ (ಆ)ಡುವ ಪ್ರೀತಿಯ ಮಾತುಗಳಿವೆ. ಆ ಮಾತುಗಳೇ ಪ್ರೇಮಪ್ರಪಂಚ ವ್ಯೋಮಾಕಾಶದಲ್ಲಿ ಪ್ರಿಯ-ಪ್ರೇಯಸಿಯರ ಹಾಡುಗಳಾಗಿ ಅನುರಣನಗೊಂಡಿವೆ.

"ಈ ನನ್ನ ಕಣ್ಣರೆಪ್ಪೆಯ ಕೆಳಗೆ
ನೂರಾರು ಕವಿತೆಗಳಿವೆ
ಓದಬೇಕು ನೀನವನ್ನು
ಮೌನವಾಗಿ"

—(ಮಾತೊಂದು....ಹಾಡೊಂದು)

....ಎನ್ನುತ್ತಾ ಮೌನವಾಗಿಯೇ ತನ್ನಿನಿಯನನ್ನು ಸಂವಾದಕ್ಕೆಳೆಯುತ್ತಾರೆ. ಸೂರ್ಯ, ಚಂದ್ರ, ಬೆಳದಿಂಗಳು, ಹಕ್ಕಿ, ಇಳೆ, ಲತೆ, ಹೂ, ಕೊಳ....ಹೀಗೆ ನಿಸರ್ಗದೆಲ್ಲೆಡೆ ಪ್ರೀತಿಯನ್ನು ಕಾಣುವ ಮನಸ್ಸು ಅವರದು. ಪ್ರೀತಿ - ಪ್ರೇಮವನ್ನೇ ಕೇಂದ್ರವಾಗಿಸಿ ನವೋದಯ ಕವಿಗಳ ಲಯದಲ್ಲಿ ತಮ್ಮ ಕಾವ್ಯದ ನಡಿಗೆಯನ್ನು ನಡೆಯಿಸಿರುವ ಶ್ರೀಮತಿ ಲತಾ ಅವರು ಎಲ್ಲಿಯೂ ಗಾಂಭೀರ್ಯದ ಎಲ್ಲೆಯನ್ನು ದಾಟದಂತೆ ನಿರ್ವಹಿಸಿರುವುದು ಮೆಚ್ಚುವಂಥದು. ಕವಯಿತ್ರಿಯ ಮನಸ್ಸು ಕಾವ್ಯ ವಿಮರ್ಶಕನನ್ನು ಕಂಡಿರುವ ಬಗೆ—

"ಎಲ್ಲಿ ವಾಸ್ತವದ ಚಿಂತನೆ?
ಎಲ್ಲಿ ವೈಚಾರಿಕತೆಯ ಬಿಸಿ?
ಏನಿದೆ ಇಲ್ಲಿ?
ನಿನ್ನ ಕಾವ್ಯದಲ್ಲಿ
ಬರೀ ಪ್ರೀತಿ, ಹೂವು, ಹಕ್ಕಿ?
ಎಂದರು.
ನನ್ನ ವೈಚಾರಿಕ ದಾವಾನಲಕ್ಕೆ
ಸುಟ್ಟು ಉದುರಿದವು ಹೂವು
ವಾಸ್ತವ ಚಿಂತನೆಯ ಖಡ್ಗಕ್ಕೆ ಸಿಕ್ಕಿ
ಕೆಳಗುರುಳಿದವು ಹಕ್ಕಿ.
ಬರೀ ಬೋಳಾಯಿತು ಬಾನು
ಎಂದು ಬರೆದೆ ನನ್ನಿಷ್ಟದಂತೆ."

–(ಹೂವು ಹಕ್ಕಿಗಳಿಗೇನು ಕೆಲಸ ಕಾವ್ಯದಲ್ಲಿ?)

ಈ ಸಾಲುಗಳು ಶ್ರೀಮತಿ ಲತಾ ಅವರ ಕಾವ್ಯದ ಧೋರಣೆಯನ್ನು ಸ್ಪಷ್ಟಪಡಿಸುತ್ತವೆ. ಅಷ್ಟೆ ಚೆನ್ನಾಗಿ ಅವರು ನೆಲದೊಡಲಿನಿಂದ ಎಷ್ಟೊಂದು ದೂರ ಸರಿದು ಹಾಡಬಲ್ಲರು! ಎನ್ನುವುದನ್ನೂ ಸ್ಪಷ್ಟಪಡಿಸುತ್ತವೆ. "ಹೇಗೆ ಹುಡುಕಲಿ? ಎಲ್ಲಿ ಹುಡುಕಲಿ? ಅರಳು ಮೊಗ್ಗಿಗೆ ಗಂಧ ತುಂಬಿದ ನಿನ್ನ?" ಎಂದು ನೆಲ ಬಿಟ್ಟು ಮುಗಿಲಲ್ಲಿ ಸಂಚಾರ ಮಾಡುತ್ತಾ ಪ್ರೇಮಪ್ರಪಂಚದಲ್ಲಿಯೇ ಮುಳುಗಿದರೆ ಬೋಳಾದ ಬಾನಿನಲ್ಲಿ ಕೆಳಗುರುಳಿದ ಹಕ್ಕಿಯಂತೆ ಅವರ ಕಾವ್ಯ ನರಳುವ ಅಪಾಯವಿದೆ. ಇನ್ನಾದರೂ ಅವರು ತಮ್ಮ ಸೀಮಿತ ಪರಿಧಿಯ ಸುತ್ತಾಟದ ಅಪಾಯವನ್ನು ಕಂಡುಕೊಳ್ಳಬೇಕಾಗಿದೆ. ಅಂದ ಮಾತ್ರಕ್ಕೆ ಅವರ ಕಾವ್ಯ ಕಟ್ಟಿರುವ ಬದುಕಿನ ರಸನಿಮಿಷಗಳನ್ನು ಅಲ್ಲಗಳೆಯುವಂತಿಲ್ಲ. 'ನೆನಪಿನ ಸಾಣ್ಯಗಳು', 'ಬಿಳಿ ಹಾಳೆಯ ಮೇಲೆ', 'ಕವಿತೆ ಕಟ್ಟಿದ ಗೂಡು', 'ಸೂರ್ಯನೊಂದಿಗೆ ಸಂವಾದ' ಮುಂತಾದ ಕೆಲವು ಉತ್ತಮ ಕವಿತೆಗಳು ಈ ಸಂಕಲನದಲ್ಲಿವೆ. ಕನಸಿನ ಬಲೆ ಹೆಣೆಯುತ್ತಾ, ಎಲ್ಲೆಲ್ಲೂ ಚೆಲುವು ಕಾಣುತ್ತಾ, ಅಲೌಕಿಕ ನೆಲೆಯಲ್ಲಿ ವಿಹರಿಸುತ್ತಾ ಇರುವ ಇಡೀ ಸಂಕಲನವನ್ನು ಸಮರ್ಥವಾಗಿ ಧ್ವನಿಸುವ ಮತ್ತು ವ್ಯಾಖ್ಯಾನಿಸುವ ಪದ್ಯವೆಂದರೆ— "ಶೇಫಾಲಿಕಾ".

"ಕಲ್ಪನೆಯಲ್ಲರಳಿದ ಹೂ
ನೀನು ಶೇಫಾಲಿಕಾ!
ಓ, ಶೇಫಾಲಿಕಾ!"

—(ಶೇಫಾಲಿಕಾ)

ಅವರ ಇಡೀ ಸಂಕಲನಕ್ಕೆ ಒಪ್ಪುವ ಮಾತಿದು. ಅವರ ಇಲ್ಲಿನ ಬಹುತೇಕ ಪದ್ಯಗಳು ಕಲ್ಪನೆಯಲ್ಲಿಯೇ ಅರಳಿ ನಿಲ್ಲುವಂಥವು; ವಾಸ್ತವದಲ್ಲಲ್ಲ. ಇನ್ನಾದರೂ ಶ್ರೀಮತಿ ಲತಾ ಅವರು ತಮ್ಮ ಕಲ್ಪನೆಯ ಪರಿಧಿಯನ್ನು ದಾಟಿ ಮನುಷ್ಯ ಪ್ರೀತಿಯ ಬಿಕ್ಕಟ್ಟನಲ್ಲಿ ತಮ್ಮ ಕನಸು-ವಾಸ್ತವಗಳನ್ನು ಅರಗಿಸಿಕೊಂಡು ನಮ್ಮೆದುರು ತೆರೆದು ಬಿದ್ದಿರುವ ಬದುಕನ್ನು ತಮ್ಮ ಕಾವ್ಯದ ಕಣ್ಣಿನಿಂದ ಮೂರ್ತಗೊಳಿಸಿದಲ್ಲಿ ಕಾವ್ಯದ ಬನಿಗೆ ನೆಲದ ಸೊಗಡು ಸೇರಿ, ಜನರ ನೋವಿಗೆ-ನಲಿವಿಗೆ ಮಿಡಿಯುವ ಕವನಗಳಾಗಬಲ್ಲವು, ಅವರ ಪದ್ಯಗಳು, ಎಂದು ಅವರ ಕಾವ್ಯನಿಷ್ಠೆಯನ್ನು ಅಪಾರವಾಗಿ ಮೆಚ್ಚಿಕೊಳ್ಳುತ್ತಾ ಹೇಳ ಬಯಸುತ್ತೇನೆ. ಡಾ|| ಹಾ. ಮಾ. ನಾಯಕರು ಈ ಸಂಕಲನದ ಬಗ್ಗೆ ಹೇಳಿರುವ ಅಭಿಪ್ರಾಯಗಳನ್ನು ನನ್ನ ಮಾತುಗಳಿಗೆ ಪೂರಕವಾಗಿ ಹೇಳ ಬಯಸುತ್ತೇನೆ—

"ಶ್ರೀಮತಿ ಲತಾ ಅವರ ಕಾವ್ಯವಸ್ತುವಿನ ಪ್ರಪಂಚ ಸೀಮಿತವಾದದ್ದು ಎಂಬುದು ನಿಜ. ಆದರೆ ಅದರಿಂದಲೇ ಅವರ ಕಾವ್ಯ ನಿಸ್ಪ್ರಯೋಜಕನೆನ್ನಿಸಲಾರದು; ವ್ಯಾಪಕವಾಗ ಇರುವುದು ಪ್ರೇಮಪ್ರಪಂಚ. ಸೂರ್ಯನಾಗೂ ಇಳೆಯರ ನಿತ್ಯನೂತನ ಪ್ರೇಮದ ಪ್ರಪಂಚ ಯಾವಾಗಲೂ ಅವರೆದುರಿಗಿದೆ. ಅದನ್ನು ಅವರು ವಿವಿಧ ರಾಗಭಾವಗಳಿಂದ ಕೇಳುತ್ತಾರೆ; ಬಗೆ ಬಗೆಯ ಬಣ್ಣಗಳಿಂದ ನೋಡುತ್ತಾರೆ; ಹಲವಾರು ರೂಪಸ್ವರೂಪಗಳಲ್ಲಿ ಮೂರ್ತಗೊಳಿಸುತ್ತಾರೆ. ಅವರ ಕವಿತೆಗಳು 'ಕೋಗಿಲೆ ಕೂಗಿದಂತೆ'; ಅಲ್ಲಿ "ಬೆಳಕಿನ ಹನಿಗಳು" ಸುರಿಯುತ್ತವೆ; ಈಗ 'ಶೇಫಾಲಿಕಾ' ಅರಳುತ್ತಿವೆ. ಅವರ ಸಂಕಲನಗಳ ಈ ಹೆಸರುಗಳೇ ಅವರ ಕಾವ್ಯಪ್ರಪಂಚದ ಸೀಮಿತಗಳನ್ನು ಸೂಚಿಸುತ್ತವೆ."

ಹಾಲತಿ ಸೋಮಶೇಖರ್

* * * *

ಹೀಗೊಂದು ಯಕ್ಷಪ್ರಶ್ನೆ (ಕವನ ಸಂಕಲನ)–ಲೇಖಕರು: ಎಂ. ವೀರಪ್ಪ ಮೊಯಿಲಿ ಮತ್ತು ಶ್ರೀಮತಿ ಮಾಲತಿ ವಿ. ಮೊಯಿಲಿ. ಪ್ರಕಾಶನ: ಆಶಾ ಸಾಹಿತ್ಯ ಪ್ರಕಾಶನ, ಭಾಷ್ಯಂ ಸರ್ಕಲ್, ಸದಾಶಿವನಗರ, ಬೆಂಗಳೂರು–೮೦

ಶ್ರೀ ಎಂ. ವೀರಪ್ಪ ಮೊಯಿಲಿ ಮತ್ತು ಶ್ರೀಮತಿ ಮೊಯಿಲಿ ದಂಪತಿಗಳಿಬ್ಬರೂ ಸೇರಿ ಒಟ್ಟಾಗಿ ತಂದಿರುವ ಮೊದಲ ಕವನ ಸಂಕಲನ 'ಜೊತೆಯಾಗಿ ನಡೆಯೋಣ'. ಈ ಕವಿ ದಂಪತಿಗಳ ಯಶಸ್ವಿ ಸಾಂಗತ್ಯದ ಮತ್ತೊಂದು ಫಲಶ್ರುತಿಯೇ 'ಹೀಗೊಂದು ಯಕ್ಷಪ್ರಶ್ನೆ' ಕವಿತಾ ಸಂಕಲನ. ಈ ಕವಿಗಳಿಬ್ಬರಿಗೂ ಅವರ ವೈಯಕ್ತಿಕ, ಸಾಮಾಜಿಕ ಬದುಕೇ ಒಬ್ಬ ಯಕ್ಷನಾಗಿ ಕೇಳುವ ಈ ಯಕ್ಷ ಪ್ರಶ್ನೆಗಳನ್ನು ಅರ್ಥೈಸುವ, ಬಿಡಿಸಲು ಯತ್ನಿಸುವ ಒಂದು ಪ್ರಯತ್ನವೇ ಇಲ್ಲಿ ಕಾವ್ಯವಾಗಿ ಅಭಿವ್ಯಕ್ತಗೊಂಡಿದೆ ಎನ್ನಬಹುದು.

ಬಹಳ ಸುಂದರವೂ, ಸಚಿತ್ರವೂ ಆಗಿ ಪ್ರಕಟವಾಗಿರುವ ಈ ಸಂಕಲನದಲ್ಲಿ ಎರಡು ಭಾಗಗಳಿದ್ದು ಶ್ರೀಮತಿ ಮಾಲತಿ ಅವರ

ಒಂಬತ್ತು ಕವನಗಳಿವೆ. ಇವುಗಳಲ್ಲಿ ಹೆಚ್ಚಿನವು ವೈಯಕ್ತಿಕ ನೆಲೆಯಿಂದ ಬಂದವುಗಳಾಗಿದ್ದು ಸರಳ, ಸುಸಂಸ್ಕೃತ ಮನಸ್ಸಿನ ಪ್ರತಿರೂಪಗಳೆನ್ನಿಸುತ್ತವೆ. ಬಾಲ್ಯದಲ್ಲೇ ಕಳೆದುಕೊಂಡ ತಾಯಿಯನ್ನು ಕುರಿತ 'ಅಮ್ಮ' ಹಾಗೂ ಹೊಸ ಜೀವದ ಆಗಮನವನ್ನು ಕುರಿತಾದ 'ಕುಡಿಯು ಕುಡಿ' ಕವನಗಳು ಆರ್ದ್ರತೆಯಿಂದ ಕೂಡಿವೆ. ಒಂದು ನೆನಪು, ಮತ್ತೊಂದು ವಾಸ್ತವ. ತಾಯಿಯ ನೆನಪಿನಲ್ಲಿ ದಟ್ಟ ವಿಷಾದದ ಛಾಯೆ ಇದ್ದರೆ ವಾಸ್ತವದಲ್ಲಿ ಬಾಳಲತೆಯ ಕುಡಿ ಕೊನರಿದ ಹೊಸ ವರ್ಷದ ಹೊಳಪಿದೆ. ಇವೆರಡೂ ಕವನಗಳು ತಮ್ಮ ಸಹಜತೆಯಿಂದಾಗಿ ಯಶಸ್ವಿಯಾಗಿವೆ.

ಇಲ್ಲಿನ ಕವನಗಳಲ್ಲಿ ಭಕ್ತಿ ಗೀತೆಗಳು ಪ್ರಧಾನವಾಗಿದ್ದು ಅವು ಕವಯಿತ್ರಿಯ ಅಂತರಂಗದ ಆರ್ತತೆ, ಮೋಕ್ಷದ ಹಂಬಲಕ್ಕಾಗಿ ತುಡಿವ ಭಾವದ ಪ್ರತಿಬಿಂಬಗಳಾಗಿವೆ. ಮಾಲತಿ ಅವರ ಸಾಮಾಜಿಕ ಕಳಕಳಿಯೂ ಗಮನಾರ್ಹವಾದುದು. ಹಿಂದುಳಿದವರ ನೋವು, ಸಿಟ್ಟು, ಹತಾಶೆಗಳನ್ನು ಸಮರ್ಥವಾಗಿ ಪ್ರತಿಬಿಂಬಿಸುವ ಅವರ ಒಂದು ಕವನ 'ಸ್ವಾಭಿಮಾನ' ಅವರ ಕಣ್ಣಿಗೆ ಮುಂದುವರಿದವರು 'ಕಟುಕರು', 'ಕುಟುಕಿ'ಗಳು ಹಾಗೂ ಕ್ರೂರಿಗಳಾಗಿ ಕಾಣಿಸುತ್ತಾರೆ. ಆದರೆ ಈ ಜನಗಳ ಆಟ ಹೆಚ್ಚು ದಿನ ನಡೆಯಲಾರದು. ಏಕೆಂದರೆ-

"ಅಮುಖಿಹರು ಇವರು ಜ್ವಾಲಾಮುಖಿಯ
ಆಗುವುದು ಒಂದು ದಿನ ಆಸ್ಫೋಟ".

ಹೀಗೆ ಎಚ್ಚರಿಸುವ ಅವರನ್ನು ಬದುಕಿನ ಸವಾಲುಗಳು 'ಯಕ್ಷಪ್ರಶ್ನೆ' ಗಳಾಗಿ ಕಾಡುತ್ತವೆ.

ಈ ಸಂಕಲನದ ಎರಡನೇ ಭಾಗದಲ್ಲಿ ಶ್ರೀ ಮೊಯಿಲಿ ಅವರ ಹದಿನಾರು ಕವನಗಳಿವೆ. ವೈವಿಧ್ಯಮಯವಾದ ವಸ್ತು, ವಿಷಯಗಳನ್ನು ಒಳಗೊಂಡ ಈ ಕವನಗಳಲ್ಲಿ ಎದ್ದು ತೋರುವ ಅಂಶವೆಂದರೆ ಸಾಮಾಜಿಕ ಪ್ರಜ್ಞೆ, ಶೋಷಿತರ ಬಗೆಗೆ ಆ ಗಂಭೀರವಾದ ಕಾಳಜಿಯನ್ನು ವ್ಯಕ್ತಪಡಿಸುವ ಕವಿ ಪ್ರೀತಿಯೇ ಮಹಾಶಕ್ತಿ ಎನ್ನುತ್ತಾರೆ. 'ನರಮೇಧ ರುವಾಂಡ' ಅವರ ಒಂದು ಮಹತ್ವ ಪೂರ್ಣ ಕವನ. ಜಗತ್ತಿನ ನಾಶಕ್ಕೆ ಬೇರೆ ಇನ್ನೊಂದು ಮಹಾಯುದ್ಧದ ಅವಶ್ಯಕತೆಯೇ ಇಲ್ಲ, ಜನಾಂಗ ದ್ವೇಷ, ಮತೀಯ ಕಲಹಗಳಷ್ಟೇ ಸಾಕು ಎನ್ನುವ ಅವರು "ರುವಾಂಡ ಆಫ್ರಿಕಾದಲ್ಲಿಲ್ಲ ಜಗದ ಜನರ ಮನದಲ್ಲಿದೆ!" ಎಂದು ಹೇಳುತ್ತಾ ವಾಸ್ತವದ ಕ್ರೌರ್ಯಕ್ಕೆ ಕನ್ನಡಿ ಹಿಡಿಯುತ್ತಾರೆ.

"ತಸ್ಲಿಮಾ ನಸರೀನ್, ನೀನಲ್ಲ ಅನಾಥೆ" ಇಲ್ಲಿನ ಮತ್ತೊಂದು ಮಹತ್ವದ ಕವನ.

"ಕ್ಷಮೆಯಿತ್ತು ಬರಬ್ಬನಿಗೆ, ಏಸುವಿಗೆ ಇರಲಿಲ್ಲ
ಇನ್ನು ಬದುಕಿದೆ ಇಲ್ಲಿ ಗೊಲ್ಗೊಥಾ ಗಾಥೆ
ತಸ್ಲಿಮಾ ನಸರೀನ್, ನೀನೋ ಅನಾಥೆ"

ಎಂದು ತೀವ್ರವಾದ ನೋವು, ವಿಷಾದಗಳಿಂದ ತಸ್ಲಿಮಾಳ ನೋವು, ಅಸಹಾಯಕತೆಗಳಿಗೆ ಸ್ಪಂದಿಸುತ್ತಾರೆ. ಮುಂದೆ ಜಗದ ಜನರ ಜಾಗೃತಿ ಪ್ರಜ್ಞೆ ಎಚ್ಚರವಾಗುವ ಆಶಾಭಾವನೆಯನ್ನು ಹೊಂದಿ "ತಸ್ಲಿಮಾ ನೀನಲ್ಲ ಅನಾಥೆ" ಎಂಬ ನಿರ್ಧಾರಕ್ಕೆ ಬಂದು ಭರವಸೆಯನ್ನು ತಾಳುತ್ತಾರೆ.

'ಹಣ' ಎಂಬ ಕವನದಲ್ಲಿ ಹಣದ ಅಧಿಪತ್ಯವನ್ನು ಸಾರ್ವಭೌಮತ್ವವನ್ನು ಕುರಿತ ವಿಡಂಬನೆ ಮಾಡುತ್ತಾರೆ.

"ಚಿನ್ನ ನಾಣ್ಯಗಳಲ್ಲಿ ತೂಗುವರು ನ್ಯಾಯವನು" ಎಂದು ನೊಂದು ಹೇಳುವ ಕವಿ 'ಡಾಕಿನಿ'ಯಂತೆ ತೋರುವ ಲಕ್ಷ್ಮಿ "ಸಂಪದ ಮಾನವತೆ ಚಿಗುರೊಡೆದು ಅರಳಿ" ಬರುವಂತಾಗಲೆಂದು ಹಾರೈಸುತ್ತಾರೆ.

"ದೇವನೆಂಬ ಸ್ವಾರ್ಥಿ" ಕವನದಲ್ಲಿ ಲಂಚವನ್ನು ನೀಡಿದರೆ ಅನುಗ್ರಹಿಸುವ ಇಲ್ಲದಿದ್ದರೆ ಆಗ್ರಹದಿಂದ ಶಪಿಸುವ ದೇವರು 'ರಕ್ಕಸನ ಪರಕಾಯ'ವೇ ಸರಿ ಎನ್ನುವ ಕವಿ ಶಾಪ ಮುಕ್ತ, ಬಂಧ ಮುಕ್ತವಾದ ಕಲ್ಪನೆಯ ಕ್ಷಿತಿಜದೆಡೆಗೆ ನಡೆವ ಬಯಕೆಯನ್ನು ವ್ಯಕ್ತಪಡಿಸುತ್ತಾರೆ. ಶ್ರೀಮತಿ ಮಾಲತಿ ಅವರ 'ಅಮ್ಮ' ಅವರ ಹೆತ್ತತಾಯಿಯನ್ನು ಕುರಿತದ್ದಾಗಿದ್ದರೆ ಮೊಯಿಲಿ ಅವರ 'ಅಮ್ಮ' ಭಾರತ ಮಾತೆಯೇ ಆಗಿದ್ದಾಳೆ.

ಸಂಘರ್ಷ, ಸಮರಗಳಿಗಾಗಿ ಕರೆಕೊಡುವ ಈ ಕ್ರಾಂತಿ ಕವಿಯ ಮೂಲ ಆಶಯ ಮಾನವತೆ. ಮೊಯಿಲಿ ಅವರ ಕಾವ್ಯದಲ್ಲಿ ಮುಖ್ಯವಾಗಿ ಕಂಡು ಬರುವುದು ಮಾನವತೆಯ ಮಿಡಿತ ಹಾಗೂ ವಿಶ್ವಶಾಂತಿಗಾಗಿ ತುಡಿತ. ತಮ್ಮ ಶ್ರೀಮತಿ ಅವರಂತೆಯೇ ಕವಿಗೂ ನೂರೊಂದು ಯಕ್ಷಪ್ರಶ್ನೆಗಳು ಎದುರಾಗುತ್ತವೆ. "ಜೀವನವಿದೆಯೇ ಸಾಯುವ ಮೊದಲು" ಎಂದು ಜೀವನದ ನಿರರ್ಥಕತೆಯನ್ನು, ಅತಂತ್ರ ಸ್ಥಿತಿಯನ್ನು ಪ್ರಶ್ನಿಸುತ್ತ ಉತ್ತರಕ್ಕಾಗಿ ನಿರೀಕ್ಷಿಸುತ್ತಾರೆ.

ಇಲ್ಲಿರುವ ಒಂದೇ ಒಂದು ಪ್ರೇಮ ಕವನವೆಂದರೆ 'ಪ್ರೇಮ ಗಂಗೆ'. ಇದರಲ್ಲಿ ಮನದನ್ನೆಯ ಸೌಂದರ್ಯ, ಸಂಭ್ರಮಗಳನ್ನು ಸಾಮಿಪ್ಯದ ಆನಂದವನ್ನು ಮನತುಂಬಿ ವರ್ಣಿಸುತ್ತಾರೆ. ತನ್ನ ನೀರಸ ಬದುಕಿಗೆ ಆಕೆಯನ್ನು ಆಹ್ವಾನಿಸುವ ಕವಿ "ಹಾಸಿ ಬಿಡುವೆನು ಅಡಿಗೆ ಕನಸ ಕಸೂತಿಯ ವಸ್ತ್ರ"–"ಮೆಲ್ಲಗಡಿಯಿಡು. ಕನಸು ಹುಡಿಯಾಗದಿರಲಿ" ಎಂದು ಕೋರುತ್ತಾರೆ. ಕವಿ ಮನದ ಮಧುರ ಭಾವದ ಸುಕೋಮಲತೆ, ಆರ್ದ್ರತೆ ಇಲ್ಲಿ ಸುಂದರವಾಗಿ ಅನಾವರಣಗೊಳ್ಳುತ್ತದೆ.

"ಮೃತ್ಯುವಿನ ಮದರಂಗಿ ಪಾದಗಳು", "ಶಾಂತಿಯೇ ಬದುಕೆನಿಸೆ ಆನಂದ ಅದರ ಗೊನೆ", "ಮೆಲ್ಲಗಡಿಯಿಡು ಕನಸು ಹುಡಿಯಾಗದಿರಲಿ" ಮುಂತಾದ ಸಾಲುಗಳಲ್ಲಿ ಮಿನುಗುವ ಕಾವ್ಯಾತ್ಮಕತೆ ಮನಸ್ಸನ್ನು ಮುದಗೊಳಿಸುತ್ತವೆ.

ಕವಿ ಅಪಾರವಾದ ಜೀವನಾನುಭವವನ್ನು, ಭಾವ ಶ್ರೀಮಂತಿಕೆಯನ್ನು ಹೊಂದಿರುವಂಥವರು. ಕಾವ್ಯದಲ್ಲಿನ ಲಯಗಾರಿಕೆ, ಧ್ವನಿ ಸಾಧ್ಯತೆಗಳತ್ತ ಗಮನ ಹರಿಸಿದರೆ ಇನ್ನೂ ಉತ್ತಮ ಕಾವ್ಯ ರಚನೆ ಅವರಿಂದ ಸಾಧ್ಯವಾಗುತ್ತದೆ. ಹಾಗೆಯೇ ಅವರ ಕವನಗಳು ಭಾವಗಂಧಿಯಂತೆ ಅರ್ಥಗಂಧಿಯೂ ಆಗುತ್ತವೆ. ಮೊಯಿಲಿ ಅವರ 'ಕನಸು ಹುಡಿಯಾಗದಿರಲಿ', ಅವರ 'ಕನಸ ಕಸೂತಿಯ ವಸ್ತ್ರ'ದ ಚೆಲುವು ಪರಿಮಳ ಇಮ್ಮಡಿಸಲಿ ಎಂದು ಹಾರೈಸುತ್ತೇನೆ.

ಒಟ್ಟನಲ್ಲಿ ಮೊಯಿಲಿ ದಂಪತಿಗಳ ಈ ಕವನ ಸಂಕಲನ ಒಂದು ಸ್ತುತ್ಯಾರ್ಹವಾದ ಪ್ರಯತ್ನ. ಈ ಮೂಲಕ ಅವರು ಅವರುಗಳ ಬಗೆಗೆ ಹೆಚ್ಚಿನ ನಿರೀಕ್ಷೆಯನ್ನು ಓದುಗರಲ್ಲಿ ಮೂಡಿಸಿದ್ದಾರೆ.

ಲತಾರಾಜಶೇಖರ್

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಎಸ್. ಚನ್ನಪ್ಪ, ಕಾರ್ಯನಿರ್ವಾಹಕ ಸಂಪಾದಕ, ಕನ್ನಡ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

೨. ಟಿ. ಎಸ್. ಲಲಿತ, ನಂ. ೭೦೨, ಮೊದಲನೆ ಮಹಡಿ, ೧೭ ನೇ ಮೇನ್
ಸರಸ್ವತೀಪುರ, ಮೈಸೂರು–೫೭೦ ೦೦೯

೩. ಗ. ನಾ. ಭಟ್ಟ, ಶ್ರೀ ಕಾವೇರಿ ಶಾಲೆ, ಆದಿಚುಂಚನಗಿರಿ ರಸ್ತೆ
ಕೆ. ಬ್ಲಾಕ್, ಕುವೆಂಪುನಗರ, ಮೈಸೂರು–೫೭೦ ೦೨೩

೪. ಗೋಪಾಲ ಆಶ್ರಿತ, "ರಮಾ ನಿಲಯ", ಜವಾಹರ ನಗರ
ರಾಯಚೂರು- ೫೮೪ ೧೦೧

೫. ಪ್ರೊ|| ಕೆ. ಆರ್. ಉಡುಪ
ಎಂ–೫, 'ಶ್ರೀಕರ', ಉದಯರವಿ ರಸ್ತೆ, ಕುವೆಂಪುನಗರ

೬. ಡಾ|| ಸ. ಜ. ನಾಗಾಲೋಟಿ ಮಠ
ಡೈರೆಕ್ಟರ್, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್
ಹುಬ್ಬಳ್ಳಿ–೫೮೦೦೨೨

೭. ಎನ್. ಆರ್. ಪಾಟೀಲ್
ಸಾರ್ಟಿಂಗ್ ಕಛೇರಿ, ಆರ್.ಎಂ.ಎಸ್. ಹೊಸಪೇಟೆ–೬೮೩ ೨೦೧

೮. ಸಾತನೂರು ದೇವರಾಜು
ಮೊದಲನೆಯ ಅಡ್ಡ ರಸ್ತೆ, ವಿವೇಕಾನಂದ ನಗರ, ಮೈಸೂರು.

೯. ಡಿ. ಎನ್. ಶ್ರೀನಾಥ್, ಅಧ್ಯಾಪಕ
ಕಸ್ತೂರ್‌ಬಾ ವಿದ್ಯಾರ್ಥಿನಿಯರ ಪದವಿಪೂರ್ವ ಕಾಲೇಜು (ಹೈಸ್ಕೂಲ್ ವಿಭಾಗ)
ಅಂಚೆ ಪೆಟ್ಟಿಗೆ ನಂ. ೧೫, ಶಿವಮೊಗ್ಗ–೫೭೭ ೨೦೧

೧೦. ಹಾಲತಿ ಸೋಮಶೇಖರ್
'ಮೌನ' ಎಲ್–೧೯, ೨ ನೇ ಹಂತ, ಕುವೆಂಪುನಗರ, ಮೈಸೂರು–೫೭೦೦೨೩

೧೧. ಲತಾ ರಾಜಶೇಖರ್
ನಂ. ೧೬, ದೇವಸ್ಥಾನ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

Reg. No. KRNN.29 / WPP 6

LICENCE No. 21
LICENCED TO POST WITH PAYMENT

Edited by Chandrashekhararadhya, Printed by A. D. Nanjunda Swamy, Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.

Phone: 512485